UNIVERSAL
LIBRARY
OU_202053
UNIVERSAL
LIBRARY

# ಎರಡು ನಾಟಕಗಳು

ಶ್ರೀಮಾನ್
ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಅವರ
ಮುನ್ನುಡಿಯೊಡನೆ

**ಕೆ. ವಿ. ಪುಟ್ಟಪ್ಪ**

ಪ್ರಕಾಶಕರು
**ರಾಮಮೋಹನ ಕಂಪೆನಿ**
ಬೆಂಗಳೂರು
೧೯೩೦

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

# ಬಿರುಗಾಳಿ

# ಯಮನ ಸೋಲು

# ಮುನ್ನುಡಿ

ಕನ್ನಡ ಸಾಹಿತ್ಯದ ಸೇವೆಯನ್ನು ಈಗ ಮಾಡುತ್ತಿರುವ, ಮುಂದೆ ಇನ್ನೂ ಹೆಚ್ಚಾಗಿ ಮಾಡುವವರಾಗಿರುವ ಹೊಸ ಕವಿಗಳಲ್ಲಿ ಪುಟ್ಟಪ್ಪನವರು ಹೆಸರುವಾಸಿ ಪಡೆದಿರತಕ್ಕವರು ; ಪ್ರಮುಖರಾಗಿರತಕ್ಕವರು. ಅವರ ಕವನಗಳು, ಕಥೆ, ವಿಮರ್ಶೆ ಮೊದಲಾದುವು ಈಗಾಗಲೇ ಅನೇಕವಾಗಿ ಪ್ರಕಟವಾಗಿವೆ. ಅವರ ಕವಿತಾ ಶಕ್ತಿಯನ್ನು 'ಕೊಳಲಿ'ನ ಮುನ್ನುಡಿಯಲ್ಲಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಅಧಿಕಾರಯುಕ್ತವಾದ ವಾಣಿಯಿಂದ ಪ್ರಶಂಸಿಸಿರುತ್ತಾರೆ. ಆದಕಾರಣ ಪುಟ್ಟಪ್ಪನವರ ಪರಿಚಯುವನ್ನು ಕನ್ನಡ ಪಾಠಕರಿಗೆ ಹೊಸದಾಗಿ ಮಾಡಿಕೊಡಬೇಕಾದ ಆವಶ್ಯಕವಿಲ್ಲ. ಈ ಪುಸ್ತಕದಲ್ಲಿ ಸೇರಿಸಿರುವ ನಾಟಕಗಳನ್ನು ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಸಾಕೆಂದು ತೋರುತ್ತದೆ.

'ಯಮನ ಸೋಲು' ಸುಪ್ರಸಿದ್ಧವಾದ ಸಾವಿತ್ರಿಯ ಕಥೆ ; 'ಬಿರುಗಾಳಿ' ಷೇಕ್ಸ್‌ಪಿಯರ್ ಮಹಾಕವಿಯ 'ಟೆಂಪೆಸ್ಟ್' ಎಂಬ ನಾಟಕದ ಮೂಲ ಭಾವಗಳನ್ನೂ ಸನ್ನಿವೇಶಗಳನ್ನೂ ಅವಲಂಬಿಸಿ ರಚಿಸಿದ ನಾಟಕ. ಈ ಎರಡು ನಾಟಕಗಳೂ ಮಹಾರಾಜರ ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದುವು. 'ಯಮನ ಸೋಲು' ಈ ಮೊದಲೇ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಿತ್ತು. ಅಲ್ಲದೆ ಈ ನಾಟಕವನ್ನು ಬೆಂಗಳೂರು, ಕಲ್ಬುರ್ಗಿ, ಬಿಜಾಪುರ ಮೊದಲಾದ ಕೆಲವು ಸ್ಥಳಗಳಲ್ಲಿ ಆಡಿಯೂ ಇದ್ದಾರೆ. 'ಬಿರುಗಾಳಿ' ಪ್ರಕಟನವಾಗುವುದಕ್ಕೆ ಇದೇ ಮೊದಲು.

ನಾಟಕವು ಸಂವಾದ ರೂಪವಾದ ಕಾವ್ಯ. ಆದಕಾರಣ ಅದು ನೈಜವಾಗಿ ಇರಬೇಕಾದದ್ದು ಗದ್ಯದಲ್ಲಿ—ಮಾತನಾಡುವ ಭಾಷೆಯಲ್ಲಿ. ಕೆಲವು ಸಂದರ್ಭಗಳಲ್ಲಿ ಭಾವೋದ್ರೇಕವನ್ನಾಗಲಿ ಭಾವ ಪರಿಪುಷ್ಟಿಯನ್ನಾಗಲಿ ಉಂಟುಮಾಡಲು ಛಂದೋಬದ್ಧವಾದ ಶೈಲಿಯಲ್ಲಿ ಹೆಚ್ಚು ಸೌಕರ್ಯಗಳುಂಟು. ಸಂಸ್ಕೃತ ನಾಟಕಗಳಲ್ಲಿ ಗದ್ಯವು ಪ್ರಧಾನವಾಗಿದ್ದು ಅಲ್ಲಲ್ಲಿ

ಪದ್ಯಗಳು ಬರುತ್ತವೆ. ಇಂಗ್ಲಿಷ್ ನಾಟಕ ಕರ್ತೃಗಳಲ್ಲಿ ಪ್ರಖ್ಯಾತರಾದ ಕೆಲವರು ನಾಟಕಗಳನ್ನು 'ಬ್ಲಾಂಕ್ ವರ್ಸ್' ಎಂಬ ಪ್ರಾಸರಹಿತವಾದ ಪದ್ಯದಲ್ಲಿ ಬರೆಯುವ ಸಂಪ್ರದಾಯವನ್ನು ಪ್ರಚಾರಕ್ಕೆ ತಂದಿದ್ದಾರೆ. ಮೊದಮೊದಲು ಕನ್ನಡ ನಾಟಕಕಾರರು ಸಂಸ್ಕೃತ ನಾಟಕಗಳ ಮಾದರಿಯನ್ನು ಅವಲಂಬಿಸಿದರು ; ಈಗ ಪುಟ್ಟಪ್ಪನವರು ಈ ಇಂಗ್ಲಿಷ್ ಸಂಪ್ರದಾಯವನ್ನು ಕನ್ನಡಕ್ಕೆ ತರಲು ಈ ನಾಟಕಗಳಲ್ಲಿ ಪ್ರಯತ್ನಿಸಿರುತ್ತಾರೆ. 'ಬಿರುಗಾಳಿ'ಯಲ್ಲಿ ಇಂಗ್ಲಿಷ್ ನಾಟಕಗಳಲ್ಲಿರುವಂತೆಯೇ ಅಲ್ಲಲ್ಲಿ—ಮುಖ್ಯವು ನೀಚ ಪಾತ್ರಗಳ ಸಂಭಾಷಣೆಯಲ್ಲಿ—ಗದ್ಯವನ್ನು ಉಪಯೋಗಿಸಿರುತ್ತಾರೆ.

ಈ ನಾಟಕಗಳಲ್ಲಿರುವ ಪದ್ಯದ ಮೂಲವು ರಗಳೆಗಳಲ್ಲಿದೆ. ಲಲಿತ ರಗಳೆಯಲ್ಲಿ ಪ್ರತಿ ಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳಿರುತ್ತವೆ ; ಪಾದದ ಆದ್ಯಂತ್ಯಗಳಲ್ಲಿ ಪ್ರಾಸವಿರುತ್ತದೆ. ಈ ಪ್ರಾಸದ ಕಟ್ಟನ್ನು ತೆಗೆದುಹಾಕಿದರೆ ಪುಟ್ಟಪ್ಪನವರು ಬರೆದಿರುವ ಪದ್ಯದ ತಳಹದಿ ಸಿಕ್ಕುತ್ತದೆ. ಈ ಪ್ರಾಸರಹಿತವಾದ ರಗಳೆಯನ್ನು 'ಸರಳ ರಗಳೆ' ಎಂದು ಕರೆಯಬಹುದು.

ಈ ಸರಳ ರಗಳೆಯನ್ನು ಪುಟ್ಟಪ್ಪನವರು ಹೊಸದಾಗಿ ಕಲ್ಪಿಸಿಕೊಳ್ಳಲಿಲ್ಲ. ಅದು ಮೊದಲೇ ಪ್ರಚಾರಕ್ಕೆ ಬಂದಿತ್ತು. ಅದನ್ನು ಮೊದಲು ನಾಟಕಕ್ಕೆ ಬಳಸಿಕೊಂಡವರು ಪುಟ್ಟಪ್ಪನವರು. ಈ 'ಸರಳ ರಗಳೆ' ಇಂಗ್ಲಿಷ್ 'ಬ್ಲಾಂಕ್ ವರ್ಸ'ನ್ನು ಬಹುಮಟ್ಟಿಗೆ ಹೋಲುತ್ತದೆ. ಇಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲದಿರುವುದರಿಂದಲೂ ಪ್ರಾಸದ ನಿರ್ಬಂಧವು ಇಲ್ಲದಿರುವುದರಿಂದಲೂ ಗದ್ಯದಂತೆ ಇದು ಎಷ್ಟು ದೂರ ಬೇಕಾದರೂ ಹೋಗಬಲ್ಲುದು. ಮನಸ್ಸಿನ ಭಾವಗಳನ್ನು ವ್ಯಕ್ತಗೊಳಿಸುವುದರಲ್ಲಿ ಮಾತಿನ ಭಾಷೆಗೆ ಒಂದು ಶಕ್ತಿ ಇದೆ ; ಛಂದೋಬದ್ಧವಾದ ಭಾಷೆಗೆ ಒಂದು ಶಕ್ತಿ ಇದೆ. ಪುಟ್ಟಪ್ಪನವರು ಇವೆರಡನ್ನೂ ಒತ್ತಟ್ಟಿಗೆ ಸೇರಿಸಲು ಪ್ರಯತ್ನಿಸಿರುತ್ತಾರೆ. ಈ ಉದ್ದೇಶ ಸಾಧನೆಗಾಗಿ ಪದ್ಯರಚನೆಯಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ. ಗಣಕ್ಕೆ ಐದು ಮಾತ್ರೆ ಇರುವುದು ಅದರ ಲಕ್ಷಣವಾದರೆ ಕೆಲವು ವೇಳೆ ಎಂದರೆ ಸಂದರ್ಭಾನುಸಾರ ಗಣಕ್ಕೆ ಮೂರು, ನಾಲ್ಕು ಅಥವಾ ಆರು ಮಾತ್ರೆಗಳನ್ನು ಉಪಯೋಗಿಸುತ್ತಾರೆ. ಕೆಲವು ಪಾದಗಳಲ್ಲಿ ಗಣಗಳ ಸಂಖ್ಯೆಯೂ ಹೆಚ್ಚು ಕಡಿಮೆಯಾಗುತ್ತದೆ.

ಹೀಗಾಗಿ ಪದ್ಯವನ್ನು ಓದುವ ಹಾಗೆ ಓದುವವರಿಗೆ ಅನೇಕ ವೇಳೆ ಎಡವಿದಂತೆ, ಮುಗ್ಗರಿಸಿದಂತೆ ಆಗುತ್ತದೆ. ಈ 'ಛಂದೋಭಂಗ'ವು ಅಚಾತುರ್ಯದಿಂದ, ಅಜ್ಞತೆಯಿಂದ ಆದದ್ದಲ್ಲ. ಪದ್ಯ ರಚನೆಯಲ್ಲಿ ಪಳಗಿದ ಕೈಯುಳ್ಳ ಕವಿ ಉದ್ದೇಶಪೂರ್ವಕವಾಗಿ ನಾಟಕದಲ್ಲಿ ತಂದಿರುವುದು. ಛಂದಸ್ಸಿನ ಸಾಮಾನ್ಯ ನಿಯಮವನ್ನನುಸರಿಸಿದರೂ ಕೆಲವು ಮನೋಭಾವಗಳನ್ನು ಸುಸ್ಪಷ್ಟವಾಗಿ ತರಲಾಗುವುದಿಲ್ಲ. ಭಾವವ್ಯಂಜಕತೆಗೆ ಅಪೋಹ ಬಾರದಿರುವುದಕ್ಕಾಗಿ ಛಂದೋನಿಯಮವನ್ನು ಮೀರಿದೆ. ಛಂದಸ್ಸಿಗೆ ಕಡಿಮೆಯಾದದ್ದು ಅಥವಾ ಹೆಚ್ಚಾದದ್ದು ನಟರ ಬಾಯಿಂದ ಮಾತು ಹೊರಡುವಾಗ ಒತ್ತಿ ಉಚ್ಚಾರವಾಗುವುದರಿಂದಲೋ ತಡೆದು ಅಥವಾ ವೇಗವಾಗಿ ಉಚ್ಚಾರವಾಗುವುದರಿಂದಲೋ ಹೊಂದಿಕೆಯಾದದ್ದಾಗಿ ಪರಿಣಮಿಸುತ್ತದೆ, ಎಂಬುದು ಲೇಖಕರ ಆಶಯ ಎಂಬುದನ್ನು ಪಾಠಕರು ಗಮನಿಸಬೇಕು. ಈ ಪ್ರಯೋಗ ಪರೀಕ್ಷೆಯು ಎಷ್ಟರ ಮಟ್ಟಿಗೆ ಸಫಲವಾದದ್ದೆಂಬುದು ಮುಂದೆ ಗೊತ್ತಾಗಬೇಕಾದದ್ದು. ಇಲ್ಲಿ ಈ ಸರಳ ರಗಳೆ ಹೇಗೆ ಪ್ರಯೋಗವಾಗಿದೆ ಎಂಬುದನ್ನು ಮಾತ್ರ ತಿಳಿಸಿದೆ.

'ಬಿರುಗಾಳಿ' ಷೇಕ್ಸ್‌ಪಿಯರ್ ಕವಿಯ 'ಟೆಂಪೆಸ್ಟ್' ಎಂಬ ನಾಟಕದ ಮೂಲಭಾವಗಳನ್ನೂ ಸನ್ನಿವೇಶಗಳನ್ನೂ ಅನುಸರಿಸಿ ರಚಿತವಾಗಿದೆ ಎಂದು ಹಿಂದೆಯೇ ಹೇಳಿದೆ. ಒಂದು ಭಾಷೆಯಲ್ಲಿರುವ ನಾಟಕವನ್ನು ಇನ್ನೊಂದು ಭಾಷೆಗೆ ತರುವವರು ಮೂಲದಲ್ಲಿ ಇದ್ದುದನ್ನು ಇದ್ದಂತೆ ಶಬ್ದಶಃ ಭಾಷಾಂತರ ಮಾಡಬಹುದು; ಅಥವಾ ಮೂಲದಲ್ಲಿರುವುದನ್ನು ಹೆಚ್ಚು ಬದಲಾಯಿಸದೆ ಅದು ತಾವು ಬರೆಯುವ ಭಾಷೆಯನ್ನಾಡುವ ಜನರ ನಡೆನುಡಿಗೆ ಹೊಂದುವಂತೆ ಆವಶ್ಯಕವಾದಷ್ಟು ವ್ಯತ್ಯಾಸವನ್ನು ಮಾತ್ರ ಮಾಡಿಕೊಂಡು ಸ್ವಲ್ಪ ಹೆಚ್ಚು ಕಡಿಮೆ ಮೂಲ ನಾಟಕದ ಭಾವವೆಲ್ಲವೂ ಬರುವಂತೆ ಅನುವಾದಿಸಬಹುದು. ಪುಟ್ಟಪ್ಪನವರು ಈ ಎರಡು ವಿಧಾನಗಳನ್ನೂ ಅನುಸರಿಸಿಲ್ಲ. ಅವರು ಮೂಲಗ್ರಂಥವನ್ನು ಓದಿ, ಅದನ್ನು ಓದಿದ್ದರಿಂದ ತಮ್ಮ ಮನಸ್ಸಿನಲ್ಲಿ ಉಂಟಾದ ಮುಖ್ಯ ಮುಖ್ಯವಾದ ಚಿತ್ರಗಳನ್ನೂ ಭಾವಗಳನ್ನೂ ಆಧಾರವಾಗಿಟ್ಟುಕೊಂಡು ಒಂದು ಹೊಸ ನಾಟಕವನ್ನು ನಿರ್ಮಿಸಿರುತ್ತಾರೆ. ಇದನ್ನು ಮೂಲ ನಾಟಕದ ಭಾಷಾಂತರ ಅಥವಾ

ಅನುವಾದ ಎಂದು ಹೇಳಲಾಗದು ; ಆ ನಾಟಕವನ್ನು ಈ ನಾಟಕ ರಚನೆಗೆ ಪ್ರೇರಕವೆಂದು ಹೇಳಬಹುದು. ಅದರಲ್ಲಿರುವ ಅನೇಕ ಭಾವಗಳು ರೂಪಾಂತರವನ್ನು ಹೊಂದಿ ಇದರಲ್ಲಿ ಸೇರಿರುವುದು ಸ್ವಾಭಾವಿಕ.

ಕನ್ನಡ ಸಾಹಿತ್ಯಕ್ಕೆ ಒಂದು ಹಳೆಯ ಸಂಪ್ರದಾಯವಿದೆ. ಹೊಸ ಕವಿಗಳು ಅನೇಕರು ಕೇವಲ ಸಂಪ್ರದಾಯ ಶರಣರಾಗದೆ ತಮಗೆ ಯುಕ್ತವೆಂದು ತೋರಿದ ರೀತಿಯಿಂದ ಆ ಸಂಪ್ರದಾಯದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ಕಾವ್ಯರಚನೆ ಮಾಡುತ್ತಿದ್ದಾರೆ. ಪಾಶ್ಚಾತ್ಯ ಸಾಹಿತ್ಯದಲ್ಲಿರುವ ಕೆಲವು ಸಂಪ್ರದಾಯಗಳು ನಮ್ಮ ಸಾಹಿತ್ಯದ ಪುಷ್ಟಿಗೂ ಆವಶ್ಯಕವೆಂದು ತೋರಿದಾಗ ನಮ್ಮ ಸಂಪ್ರದಾಯಕ್ಕೆ ಅವನ್ನು ಹೊಂದಿಸಿಕೊಂಡು ಅನುಸರಿಸುತ್ತಿದ್ದಾರೆ. ಹಳೆಯದರಿಂದ ಹುಟ್ಟಿದ, ಆದರೆ ಅದರಿಂದ ಸ್ವಲ್ಪ ಭಿನ್ನವಾದ ಈ ಹೊಸ ಸಂಪ್ರದಾಯವು ಎಷ್ಟು ಮಟ್ಟಿಗೆ ನಿಲ್ಲುತ್ತದೆಂಬುದು ಈ ಕವಿಗಳ ಶಕ್ತಿ ವರ್ಚಸ್ಸುಗಳನ್ನು ಅವಲಂಬಿಸುತ್ತದೆ. ಜೀವನದ ಪಥವು ಬದಲಾಯಿಸುತ್ತಿರುವ ಈ ಕಾಲದಲ್ಲಿ ಸಾಹಿತ್ಯದ ಪಥವೂ ಮಾರ್ಪಾಟನ್ನು ಹೊಂದುವುದು ಅನಿವಾರ್ಯ. ಕಾಲವೆಂಬ ಗಾಳಿ ತಾನಾಗಿ ತಾನೇ ಜಳ್ಳನ್ನು ತೂರುತ್ತದೆ ; ಕಾಳು ಉಳಿಯುತ್ತದೆ. ಇದರಲ್ಲಿ ಕಾಳು ಯಾವುದು, ಜಳ್ಳು ಯಾವುದು ಎಂಬುದನ್ನು ಈಗ ಗ್ರಹಿಸಬೇಕಾದರೆ ವಿಶಾಲ ಭಾವವೂ ವಿಚಾರಯುಕ್ತವಾದ ಬುದ್ಧಿಯೂ ಸಹೃದಯರಿಗೆ ಸಹಜವಾದ ಸಹಾನುಭೂತಿಯೂ ಬೇಕು. ಈ ತೆರದ ಮನೋಧರ್ಮವು ಕನ್ನಡಿಗರಿಗೆ ಸ್ವಾಭಾವಿಕವಾದದ್ದೆಂಬುದನ್ನು ಕನ್ನಡ ಸಾಹಿತ್ಯ ಚರಿತ್ರೆಯನ್ನು ಓದಿದವರು ಅರಿಯದೆ ಇರಲಾರರು.

ಮೈಸೂರು,
ತಾ॥ ೨೪–೧೧–೧೯೩೦.

**ಟಿ. ಎಸ್. ವೆಂಕಣ್ಣಯ್ಯ.**

# ಬಿರುಗಾಳಿ

ದುಂಬಿಯು ಬಂಡಸು ಹೀರುವ ಎಡೆಯೊಳು
ನಾ ಮಧುಪಾನವ ಮಾಡುವೆನು.
ತೇಲುವ ತಾವರೆ ಹೂವಿನ ಹೊಡೆಯೊಳು
ಪವಡಿಸೆ ಸಜ್ಜೆಯ ಹೂಡುವೆನು.
ನೇಸರು ಮುಳುಗಲು ಮಲಗುವೆನಲ್ಲಿ;
ಗೂಬೆಯು ಕೂಗಲು ಹುದುಗುವೆನಲ್ಲಿ!
ಕತ್ತಲೆಮುತ್ತಲು ಪವಡಿಪೆನಲ್ಲಿ;
ಕೌಮುದಿ ರಂಜಿಸೆ ನಲಿಯುವೆನಲ್ಲಿ!
ಮಳೆಬಿಲ್ಗರಿಗಳ ರೆಕ್ಕೆಯ ಪಡೆದಿಹ
ಮೇಘ ವಿಮಾನವನೇರಿ,
ಗಾಳಿಯ ಬಟ್ಟೆಯೊಳಲೆಯುವೆ, ನಲಿಯುವೆ,
ಮುಕ್ತಿಯ ಸೊದೆಯನು ಹೀರಿ!

—ಕಿನ್ನರನ ಹಾಡು

# ಬಿರುಗಾಳಿ

[ಷೇಕ್ಸ್‌ಪಿಯರ್ ಮಹಾಕವಿಯ 'ಟೆಂಪೆಸ್ಟ್' ನಾಟಕದ ಅನುವಾದ]

ಸಹ್ಯಾದ್ರಿ ಪರ್ವತಶ್ರೇಣಿಗಳ ನಿರ್ಜನ ನಿಬಿಡಾರಣ್ಯಗಳ ಮಧ್ಯೆ ಪ್ರವಹಿಸುತ್ತಿದ್ದ ಒಂದು ನದಿಯ ನಡುವೆ ಸಣ್ಣದೊಂದು ದ್ವೀಪವಿತ್ತು. ಅಲ್ಲಿ ಋಷಿಚರ್ಯೆಯಲ್ಲಿದ್ದ ಭೈರವನಾಯಕನು ತನ್ನ ಮಗಳು ಗೌರಾಂಬೆಯೊಡನೆ ವಾಸಿಸುತ್ತಿದ್ದನು. ಆತನಿಗೆ 'ಶನಿಶಕ್ತಿ' ಎಂಬ ಅರ್ಧಮಾನುಷ ಕಿಂಕರನೂ, ಕಿನ್ನರ ವರ್ಗಕ್ಕೆ ಸೇರಿದ ಒಬ್ಬ ಅತಿಮಾನುಷ ಡಿಂಗರಿಗನೂ ಇದ್ದರು. 'ಶನಿಶಕ್ತಿ'ಯು 'ಶನಿ' ಎಂಬ ಮಂತ್ರಗಾರ್ತಿಯ ಮಗನು. ಆ ಮಂತ್ರಗಾರ್ತಿಯು ಭೈರವನು ಆ ದ್ವೀಪಕ್ಕೆ ಬರುವುದಕ್ಕೆ ಕೆಲವು ದಿವಸಗಳ ಮುನ್ನವೇ ಜವನಾಲಯಕ್ಕೆ ಸಂದಿದ್ದಳು. ಭೈರವನಾಯಕನು ಅಲ್ಲಿಗೆ ಬಂದಮೇಲೆ 'ಶನಿ'ಯಿಂದ ಪೀಡಿತವಾಗಿದ್ದ ಗಗನಚಾರಿಗಳಿಗೆಲ್ಲ ಬಿಡುಗಡೆಯನ್ನು ನೀಡಿ, ಶುಭ್ರ ಮನೋಹರಮೂರ್ತಿಯಾಗಿದ್ದ 'ಕಿನ್ನರ'ನನ್ನು ತನ್ನ ದೂತನನ್ನಾಗಿ ನೇಮಿಸಿಕೊಂಡಿದ್ದನು. 'ಶನಿಶಕ್ತಿ'ಯೂ ಭೈರವನಾಯಕನ ಪರಿಚಾರಕನಾದನು. ಹೀಗೆ ಭೈರವನಾಯಕನು ಸಣ್ಣವಳಾಗಿದ್ದ ತನ್ನ ಮಗಳು ಗೌರಾಂಬೆಯನ್ನು ಪರಿಪಾಲಿಸುತ್ತ ಅವಳಿಗೆ ವಿದ್ಯಾಬುದ್ಧಿಗಳನ್ನು ಕಲಿಸುತ್ತ, ತನ್ನ ಯೋಗಬಲದಿಂದ ನಿಸರ್ಗದೇವತೆಗಳನ್ನು ವಶಪಡಿಸಿಕೊಂಡು ಎಲ್ಲರನ್ನು ಬಾಯ್ಕೇಳಿಸುತ್ತ ಹನ್ನೆರಡು ವರ್ಷಗಳನ್ನು ನೂಕಿದನು.

ಒಂದು ದಿನ ಗೌರಾಂಬೆಯು ತಂದೆಯೊಡನೆ ನದಿಯ ತೀರದಲ್ಲಿ ಸಂಚರಿಸುತ್ತಿರಲು, ನದಿಯ ನಡುವೆ ಒಂದು ದೋಣಿಯು ಬಂದುದನ್ನು ಕಂಡಳು. ಅದರಲ್ಲಿ ಕೆಲವು ಸುಂದರ ವ್ಯಕ್ತಿಗಳಿದ್ದರು. ಆಕೆಯು ವಿಸ್ಮಯದಿಂದ ನೋಡುತ್ತಿರುವಾಗಲೇ ಒಂದು ದೊಡ್ಡ ಬಿರುಗಾಳಿಯೆದ್ದು ದೋಣಿಯನ್ನು ಮುಳುಗಿಸಿಬಿಟ್ಟಿತು. ಅದನ್ನು ಕಂಡು ಗೌರಾಂಬೆಯು ದುಃಖಪಡುತ್ತಿರಲು ಭೈರವನಾಯಕನು ತನ್ನ ಮಂತ್ರದ ಬಲದಿಂದಲೇ ಬಿರುಗಾಳಿಯೆದ್ದುದೆಂದೂ, ದೋಣಿ ಮುಳುಗಿದುದೆಂದೂ ಹೇಳಿ ಮಗಳನ್ನು ಸಂತೈಸಲೆಳಸಿದ್ದನು.

ಆದರೆ ಮುಗ್ಧೆಯಾದ ಗೌರಾಂಬೆಯು ದೋಣಿಯಲ್ಲಿದ್ದ ಮನುಷ್ಯರ ಮರಣ ವನ್ನು ನೆನೆದು ರೋದಿಸತೊಡಗುವಳು. ಆಗ ಭೈರವನು "ಮಗಳೇ ವ್ಯಸನಪಡಬೇಡ. ಎಲ್ಲವನ್ನೂ ನಿನ್ನ ಕಲ್ಯಾಣಕ್ಕಾಗಿಯೇ ಮಾಡಿರುವೆನು. ಅಲ್ಲಿದ್ದ ಜನರಾರೂ ಅಳಿದಿಲ್ಲ" ಎಂದು ಸಂತವಿಡುವನು.

ಗೌರಾಂಬೆಯು ಬಿರುಗಾಳಿಯನ್ನು ಎಬ್ಬಿಸಿದುದಕ್ಕೆ ಕಾರಣವೇನೆಂದು ಕೇಳುವಳು.

ಭೈರವನಾಯಕನು ತನ್ನ ಹಿಂದಿನ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳುವನು. "ಮಗಳೇ, ಹನ್ನೆರಡು ವರ್ಷಗಳ ಹಿಂದೆ ನಾನು ಕೆಳದಿಯ ನಾಳ್ವ ನಾಯಕನಾಗಿದ್ದೆ. ನನ್ನ ತಮ್ಮ ರುದ್ರನಾಯಕನಿಗೆ ರಾಜ್ಯಭಾರ ವನ್ನು ವಹಿಸಿ, ನಾನು ವೇದಾಧ್ಯಯನ, ಯೋಗಸಾಧನೆ ಮೊದಲಾದುವು ಗಳಲ್ಲಿ ಮಗ್ನನಾದೆ. ರುದ್ರನಾಯಕನು ನಗರ ಸಂಸ್ಥಾನದ ಅರಸನಾದ ರಣನಾಯಕನೊಡನೆ ಒಳಸಂಚು ನಡೆಯಿಸಿ, ನನ್ನನ್ನು ರಾಜ್ಯಚ್ಯುತನನ್ನಾಗಿ ಮಾಡಿ, ನಮ್ಮಿಬ್ಬರನ್ನೂ ಹರಿದ ಹರಿಗೋಲೊಂದರಲ್ಲಿ ಹಾಕಿ ಹೊಳೆಯಲ್ಲಿ ತೇಲಿಬಿಟ್ಟನು. ದೈವಕೃಪೆಯಿಂದ ಅದು ಮುಳುಗದೆ ಈ ದ್ವೀಪದೆಡೆಗೆ ನಮ್ಮನ್ನು ತಂದುಬಿಟ್ಟಿತು. ಇಂದು ಆ ನನ್ನ ಶತ್ರುಗಳು ಹೊಳೆಯ ನಡುವೆ ಬಂದುದನ್ನು ಕಂಡೆ. ಅವರಿಗೆ ಬುದ್ಧಿಗಲಿಸಬೇಕೆಂದು ಬಯಸಿ ಇಂತೆಲ್ಲ ಮಾಡಿದೆನು."

ಬಿರುಗಾಳಿಯ ರೂಪದಲ್ಲಿ ಕಿನ್ನರನು ದೋಣಿಯನ್ನು ಮುಳುಗಿಸಿ, ಅದರಲ್ಲಿದ್ದ ಜನರೆಲ್ಲರನ್ನೂ ಅವರರಿಯದಂತೆ ಸುರಕ್ಷಿತವಾಗಿ ದ್ವೀಪದೆಡೆ ಗೊಯ್ದು ಭೈರವನಾಯಕನ ಆಜ್ಞೆಯಂತೆ ಅವರನ್ನು ಚದರಿಸುವನು. ರುದ್ರನಾಯಕ, ರಣನಾಯಕ, ಅವನ ತಮ್ಮ ರಂಗನಾಯಕ ಮತ್ತು ಮಂತ್ರಿ ಜಯದೇವ ಇವರೆಲ್ಲ ಒಂದು ಕಡೆ ಸೇರುವರು. ಸೇವಕರಾದ ಬೀಮಣ ತ್ರಿಶಂಕುಗಳು ಒಂದು ಗುಂಪಾಗುವರು. ರಣನಾಯಕನ ಮಗನಾದ ಶಿವನಾಯಕನನ್ನು ಮಾತ್ರ ಅದೃಷ್ಟ ಕಿನ್ನರನು ಭೈರವ ಗೌರಾಂಬೆ ಯರು ಇದ್ದಲ್ಲಿಗೆ ಕರೆತರುವನು. ಶಿವನಾಯಕ ಗೌರಾಂಬೆಯರ ಪ್ರಣಯ ಮೈತ್ರಿಯು ಪ್ರಥಮ ಸಂದರ್ಶನದಲ್ಲಿಯೇ ಮೊಳೆತು ಬೆಳೆಯುವುದು. ಸುಲಭಸಾಧ್ಯವಾದ ವಸ್ತುವಿಗೆ ಬೆಲೆ ಬಾರದೆಂಬ ತತ್ವವನ್ನು ಚೆನ್ನಾಗಿ ಅರಿತ

ಭೈರವನು ಮೊದಮೊದಲು ರುದ್ರತೆಯನ್ನು ನಟಿಸಿ ಶಿವನಾಯಕನನ್ನು ಪರೀಕ್ಷಿಸಿ ಕಡೆಗೆ ಮಗಳನ್ನು ಅವನಿಗೆ ಧಾರೆಯೆರೆಯುವನು.

ಅಷ್ಟರಲ್ಲಿ ಇತ್ತ 'ಶನಿಶಕ್ತಿ'ಯನ್ನು ಸಂದರ್ಶಿಸಿದ ಬೀಮಣ ತ್ರಿಶಂಕುಗಳು ಅವನಿಂದ ಎಲ್ಲ ವಿಚಾರವನ್ನು ತಿಳಿದು ಭೈರವನನ್ನು ಕೊಲ್ಲಲು ಪಿತೂರಿ ನಡೆಯಿಸುವರು. ಬೀಮಣನನ್ನು ಮೂರ್ಖನಾದ 'ಶನಿಶಕ್ತಿ'ಯು ಸ್ವರ್ಗದಿಂದ ಇಳಿದುಬಂದ ದೇವತೆಯೆಂದೇ ಭಾವಿಸಿ, ಅವನ ಸಹಾಯ ಪಡೆದು ಭೈರವನ ದಾಸ್ಯದಿಂದ ಮುಕ್ತನಾಗಲು ಬಯಸುವನು. ಆದರೆ ಕಿನ್ನರನ ನೆರವಿನಿಂದ ಭೈರವನು ಅವರನ್ನು ಕಷ್ಟನಷ್ಟಗಳಿಗೆ ಗುರಿಪಡಿಸಿ ಓಡಿಸುವನು.

ಅತ್ತ ರುದ್ರ ರಂಗನಾಯಕರು ಬಳಲಿ ನಿದ್ರಿಸುತ್ತಿದ್ದ ಜಯದೇವ ರಣನಾಯಕರನ್ನು ಸಂಹರಿಸಲು ಪ್ರಯತ್ನಿಸಿ ಭೈರವನಿಂದ ಕಳುಹಲ್ಪಟ್ಟ ಕಿನ್ನರನಿಂದ ಪರಾಜಿತರಾಗಿ, ಮಾಯೆಯಿಂದ ಮರುಳ್ಗೊಂಡು ಭೈರವನಾಯಕನ ಗುಹೆಯ ಬಳಿಗೆ ಒಯ್ಯಲ್ಪಡುವರು. ಅಲ್ಲಿ ಮೈತಿಳಿದು, ಭೈರವನಾಯಕನ ಗುರುತನ್ನು ಬಹು ಶ್ರಮದಿಂದ ತಿಳಿದು, ತಮ್ಮ ಅಪರಾಧವನ್ನು ಒಪ್ಪಿಕೊಂಡು ಕ್ಷಮೆಯನ್ನು ಬೇಡುವರು. ಭೈರವನು ಅವರನ್ನೆಲ್ಲ ಮನ್ನಿಸಿ, ಮಗನ ಅಳಿವಿಗಾಗಿ ಗೋಳಿಡುತ್ತಿದ್ದ ರಣನಾಯಕನಿಗೆ ಗೌರಾಂಬೆ ಶಿವನಾಯಕರನ್ನು ತೋರುವನು. ತಂದೆಮಕ್ಕಳು ಪರಸ್ಪರ ದರ್ಶನದ ಆನಂದದಿಂದ ಹಿಗ್ಗುವರು. ಶಿವನಾಯಕನಿಂದ ಸಕಲ ವೃತ್ತಾಂತವನ್ನು ತಿಳಿದ ರಣನಾಯಕ ಜಯದೇವರುಗಳು ಭೈರವನಾಯಕನನ್ನು ಕೊಂಡಾಡುವರು. ಅಷ್ಟರಲ್ಲಿ ಕಿನ್ನರನು ಓಡಿಹೋಗಿದ್ದ ಬೀಮಣ ತ್ರಿಶಂಕು ಶನಿಶಕ್ತಿಗಳನ್ನು ಅಲ್ಲಿಗೆ ತರುಬಿಕೊಂಡು ಬರುವನು. ಆಗ ಅವರಿಗೆ ಕುಡಿದು ತಲೆಗೇರಿದ್ದ ಹೆಂಡದ ಮತ್ತೆಲ್ಲ ಇಳಿಯುವುದು.

ರಣನಾಯಕ ಮೊದಲಾದವರುಗಳು ಭೈರವನಾಯಕನ ಆಹ್ವಾನವನ್ನು ಸ್ವೀಕರಿಸಿ ಆತನ ಗುಹೆಯಲ್ಲಿ ಆ ರಾತ್ರಿಯನ್ನು ಸಂತಸದಿಂದ ಕಳೆಯುವರು. ಮರುದಿನ ಎಲ್ಲರೂ ನಗರ ಸಂಸ್ಥಾನಕ್ಕೆ ಹೊರಡುವರು. ಕಿನ್ನರನು ಬಿಡುಗಡೆ ಹೊಂದಿ, ಎಂದಿನಂತೆ ತಿಳಿಯಾಳದಾಗಸದ ನೀಲಿಯಲ್ಲಿ ತನ್ನ ಮಳೆಬಿಲ್ಗರಿಗಳ ರೆಕ್ಕೆಗಳನ್ನು ಬಿದಿರ್ಚಿ ಇನಿದನಿಯಿಂದ ಹಾಡುತ್ತ ಸಂಚರಿಸತೊಡಗುವನು.

# ಪಾತ್ರಗಳು

| | | |
|---|---|---|
| ರಣನಾಯಕ | .. | ನಗರ ಸಂಸ್ಥಾನದ ಅರಸು. |
| ಶಿವನಾಯಕ | .. | ಅವನ ಮಗ. |
| ರಂಗನಾಯಕ | .. | ಅವನ ತಮ್ಮ. |
| ಭೈರವನಾಯಕ | .. | ಕೆಳದಿಯ ರಾಜ್ಯದ ನಾಯಕ. |
| ರುದ್ರನಾಯಕ | .. | ಅವನ ತಮ್ಮ. |
| ಜಯದೇವ | .. | ವೃದ್ಧ ಮಂತ್ರಿ. |
| ಕಿನ್ನರ | .. | ಭೈರವನಾಯಕನ ಅತಿಮಾನುಷ ಕಿಂಕರ. |
| ಶನಿಶಕ್ತಿ | .. | ಭೈರವನಾಯಕನ ಸೇವಕ. |
| ಬೀಮಣ | .. | ಬಾಣಸಿಗ. |
| ತ್ರಿಶಂಕು | .. | ಅವನ ಸಂಗಾತಿ. |
| ಗೌರಾಂಬೆ | .. | ಭೈರವನಾಯಕನ ಪುತ್ರಿ. |

ಬನದೇವಿ, ಜಲದೇವಿ ಮೊದಲಾದವರು.

## ಮೊದಲನೆಯ ಸಲ ನಾಟಕವನ್ನು ಅಭಿನಯಿಸಿದಾಗ
## ಪಾತ್ರ ವಹಿಸಿದ್ದವರು

| | | | |
|---|---|---|---|
| ೧. | ಭೈರವನಾಯಕ | .. | ಮ\|\| ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ. |
| ೨. | ರುದ್ರನಾಯಕ | .. | ,, ಎನ್. ಅನಂತರಂಗಾಚಾರ್, ಎಂ.ಎ. |
| ೩. | ರಣನಾಯಕ | .. | ,, ವಿ. ಕೆ. ಶ್ರೀನಿವಾಸನ್. |
| ೪. | ರಂಗನಾಯಕ | .. | ,, ಬಿ. ಮಾಯಣ್ಣ. |
| ೫. | ಜಯದೇವ | .. | ,, ಎಂ. ಎಸ್. ರಂಗಸ್ವಾಮಿ ಅಯ್ಯಂಗಾರ್. |
| ೬. | ಶಿವನಾಯಕ | .. | ,, ವಿ. ವೆಂಕಟಾಚಾರ್, ಬಿ.ಎ. |
| ೭. | ಗೌರಾಂಬೆ | .. | ,, ಎಮ್. ಆರ್. ನಾರಾಯಣಸ್ವಾಮಿ. |
| ೮. | ಕಿನ್ನರ | .. | ,, ಎ. ಸಿ. ನರಸಿಂಹಮೂರ್ತಿ. |
| ೯. | ಶನಿಶಕ್ತಿ | .. | ,, ಸಿ. ಬಿ. ಜಯರಾವ್. |
| ೧೦. | ಬೀಮಣ | .. | ,, ಎ. ಎಂ. ನಟೇಶಮೊದಲಿಯಾರ್, ಬಿ.ಎ. |
| ೧೧. | ತ್ರಿಶಂಕು | .. | ,, ಎಸ್. ಸೂರ್ಯನಾರಾಯಣರಾವ್. |
| ೧೨. | ಬನದೇವಿ | .. | ,, ಬಿ. ಕೆ. ಲಕ್ಷ್ಮೀನಾರಾಯಣ. |
| ೧೩. | ಮುಗಿಲುದೇವಿ | .. | ,, ಎಚ್. ಲಕ್ಷ್ಮೀನಾರಾಯಣ. |
| ೧೪. | ನದಿಯದೇವಿ | .. | ,, ಎಚ್. ಆರ್. ಕೇಶವಮೂರ್ತಿ. |
| ೧೫. | ಊರ್ವಶಿ | .. | ,, ಎಮ್. ಶಾಮರಾವ್. |
| ೧೬. | ವಿಕಾರಾಕೃತಿಗಳು | .. | ,, ಜಿ. ಪಿ. ಸುಬ್ಬಸ್ವಾಮಿ. |
| ೧೭. | | | ,, ಎಚ್. ಕೆ. ಶ್ರೀನಿವಾಸರಾವ್. |
| ೧೮. | | .. | ,, ಎ. ವಿ. ಶ್ರೀಕಂಠಯ್ಯ. |
| ೧೯. | | | ,, ಟಿ. ಎಸ್. ವೆಂಕಟರಾವ್. |
| ೨೦. | | .. | ,, ಎನ್. ಎಸ್. ಕೃಷ್ಣಮೂರ್ತಿ. |
| ೨೧. | | .. | ,, ಬಸವರಾಜ ಅರಸು. |

ಮೊದಲು ಆಡಿದುದು—ಮೈಸೂರು ವಿಶ್ವವಿದ್ಯಾನಿಲಯ ಸಂಘದವರು

(೧೨ ಡಿಸೆಂಬರ್ ೧೯೨೯)

# ಬಿರುಗಾಳಿ

---

## ದೃಶ್ಯ ೧

[ದ್ವೀಪದ ಒಂದು ಭಾಗ. ತೊಯ್ದು ಬಟ್ಟೆಗಳುಳ್ಳ ನಸುಮುದುಕನಾದ ಡೊಳ್ಳು ಹೊಟ್ಟೆಯ ತ್ರಿಶಂಕುವು ಒಂದು ಬಂಡೆಯ ಮೇಲೆ ಬಳಲಿ ಕುಳಿತಿರುವನು. ಗಗನದಲ್ಲಿ ಗುಡುಗು ಮಿಂಚು.]

**ತ್ರಿಶಂಕು**— **(ಮೇಲೆ ನೋಡಿ)**

ಏನು ಮಳೆಯಿದು! ಏನು ಗಾಳಿ! ಏನು ಮಿಂಚು!
ಗುಡುಗೇನು! ಪ್ರಳಯಕಾಲದ ವಿಲಯ ರುದ್ರನಿಗೆ
ಮದವೇರಿ ಬಂದಾಗ ಚೇಳು ಕಡಿದಂತಿಹುದು!
ಗಾಳಿಯಾಳ್ವನಿಗೆ ಮರುಳಮರಿದಂತಿಹುದು!
ಮುಗಿಲೊಡೆಯನಾದರೋ ಕಳ್ಳು ಕುಡಿದಂತಿಹುದು!
ಬಾನ್ನೀರೆಗಾವುದೋ ಕುತ್ತುಮೇರ್ದಂತಿಹುದು!

**(ಕೆಳಗೆ ನೋಡಿ)**

ದೋಣಿ ತಲೆಕೆಳಗಾಗೆ ಎಲ್ಲರೂ ಮುಳುಗಿದರು:
ರಣನಾಯಕರು, ಶಿವನಾಯಕರು, ಆ ಮಂತ್ರಿ
ಜಯದೇವ, ರಂಗನಾಯಕ ರುದ್ರನಾಯಕರು,—
ಎಲ್ಲರೂ ಮುಳುಗಿದರೆ? ನಾನೆಂತು ಬದುಕಿದೆನೊ
ನಾನರಿಯೆ. ಬೊಜ್ಜು ಬಂದಿಹ ದೇಹ; ಈಜಲರಿಯೆ!
ಆದರೇಂ? ಡೊಳ್ಳು ಬಂದಿಹ ಹೊಟ್ಟೆ; ಮುಳುಗಲರಿಯೆ!
ಹೊಳೆ ಕೂಡ ಹೇಸಿ ಬಿಸುಟಿತೆ ನನ್ನ? ಈ ಹೊಳೆಯ
ನಡುವೆಯಿಹ ದ್ವೀಪದಲಿ ಬಾಳ್ವುದಾದರು ಎಂತು?
ಗಳಪುವೆನೆ ಜನವಿಲ್ಲ; ಅಲೆಯುವೆನೆ ಉದ್ಯಾನ
ವನವಿಲ್ಲ; ತಿರಿಯುವೆನೆ ಅರಮನೆಗಳಿಲ್ಲಿಲ್ಲ;
ಹೊಡೆಯಾರಲುಂಬುವೆನೆ ಭಕ್ಷ್ಯಭೋಜ್ಯಗಳಿಲ್ಲ:

ಏನಿಲ್ಲ—ಜೀವವೆಂಬುದೆ ಇಲ್ಲ; ಸಾವೆ
ಸಾಮ್ರಾಜ್ಯವಾಳುತಿದೆ. ಗಾಳಿಗಳ ಸಂಗದಲಿ
ಗಾಳಿ ನಾನಾಗುವೆನು: ಮರುಳಿಗಿಂತಲು ಮರುಳು
ನಾನಾಗಿ ಹೋಗುವೆನು:—ನನ್ನ ಮಾಂಸಗಳೆಲ್ಲ
ಕರಕರಗಿ ಹೋಗುವುವು; ನಾನು ಎಲುಬಿನ ಮೂಟೆ
ಯಾಗುವೆನು! ಈ ಕಣ್ಣುಗಳು ಕರಗಿ ತೂತೆರಡು
ಮಾತ್ರ ನನಗುಳಿಯುವುವು. ಆ ಬಳಿಕ ಮಾನವರ
ಕೂಟದಲಿ ನಾನು ಕಲೆಯುವುದೆಂತು!—ಅಯ್ಯಯೋ,
ನಾನೀಗಲೇ ಮರುಳಾಗಲಾರಂಭಿಸಿಹೆನು!
ಅಲ್ಲದಿರೆ ನನಗೇತಕೀ ಹಸಿವೆ? ಅಯ್ಯಯೋ,
ನನ್ನ ಹಸಿವೆಯೆ ನನ್ನ ಬೊಜ್ಜುಬಾಡನು ಕಿತ್ತು
ಸುಲಿಸುಲಿದು ನುಂಗುತಿದೆ. ಹಸಿದಿರುವ ಮರುಳುಗಳ
ದ್ವೀಪವಿದು! ನಿಜವಾಗಿಯೂ ದೆವ್ವಗಳ ದ್ವೀಪ!

(ಕೂಗುವನು)

ಹಸಿವೆ! ಹಸಿವೆ! ಬಾಣಸಿಗ ಬೀಮಣಾ!

(ಹಾಗೆ ಮಲಗುವನು)

[ಬಾಣಸಿಗ ಬೀಮಣನು ಕೈಯಲ್ಲಿ ಹೆಂಡದ ಬುರುಡೆಯೊಂದನ್ನು ಹಿಡಿದುಕೊಂಡು ಬರುವನು. ಸುಮಾರು ನಾಲ್ವತ್ತು ವರ್ಷ ವಯಸ್ಸಿನ ದಾಂಡಿಗನು. ತೊಯ್ದು ಬಟ್ಟೆಗಳು ಅವ್ಯವಸ್ಥೆಯಿಂದ ಮೈಗೆ ಅಂಟಿಕೊಂಡಿರುವುವು.]

**ಬೀಮಣ**— ನನಗೆ ಈಜಲು ಕಲಿಸಿಕೊಟ್ಟವನು ಸಾವಿರ ಶತಮಾನ, ಸಾಯದೆಹೋದರೆ, ಬದುಕಿದರೆ, ಜೀವದಿಂದಿದ್ದರೆ, ಬಾಳಲಿ! ಇಲ್ಲದಿರೆ ಉಳಿದೆಲ್ಲರಿಗೂ ಆದಂತೆ ನನಗೂ ನೀರ್ಮಸಣವಾಗುತಿತ್ತು! ಶಿವ ಶಿವಾ! ಎಂತಹ ದುರ್ಮರಣ! ಎಂತಹ ದುರ್ಮರಣ!—ಏನು ಚಳಿಗಾಳಿ! (ಹೆಂಡವನ್ನು ಕುಡಿದು ಬಾಯಿ ಒರಸಿಕೊಂಡು ಮೇಲೆ ನೋಡಿ) ಇನ್ನೂ ಆಗಸವು ಸಿಟ್ಟಿನಿಂದ ಹುಬ್ಬುಗಂಟಿಕ್ಕಿಕೊಂಡೇ ಇದೆ. ಒಂದಲ್ಲ, ಎರಡಲ್ಲ; ನಲವತ್ತು ಸಂವತ್ಸರಗಳನ್ನು ಕಳೆದಿಷ್ಟೇನೆ ಈ ಭೂಮಿಯ

ಮೇಲೆ. ಆದರೂ ಇಂತಪ್ಪ ಬಿರುಗಾಳಿ ಮಳೆಗಳನು ನಾನು ಬೇರೆ ಕಂಡರಿಯೆ. ಕೇಳಿ ಕೂಡ ಅರಿಯೆ!

ತ್ರಿಶಂಕು— ಹಸಿವೆ! ಹಸಿವೆ! ಬೀಮುಣಾ!

ಬೀಮುಣ— (ತನ್ನೊಳಿ) ಏನು ಸದ್ದುಗಳಿವು! ಈ ದ್ವೀಪವು ಸದ್ದುಗಳ ಮುದ್ದೆಯೆಂದು ತೋರುತ್ತದೆ. ಇದರ ತೀರವನೇರಿದಾಗಲೇ ಸಂಗೀತ ಕೇಳಿಸಿತು; ಯಾರೋ ಕರೆದಂತಾಯಿತು! ನೂರಾರು ಇಂಪಾದ ವಾಣಿಗಳು ಮಾತಾಡಿಕೊಳ್ಳುವಂತಾಯಿತು.—ನಾನು ಬದುಕಿ ಭೂಮಿಯಮೇಲಿರುವೆನೋ, ಸತ್ತು ಸ್ವರ್ಗದಲ್ಲಿರುವೆನೋ ನನಗೊಂದೂ ಬಗೆಹರಿವುದಿಲ್ಲ. ಅಂತೂ ಇದು ಮಾಯದ ಮನೆಯೆಂದೇ ತೋರುತ್ತದೆ!

ತ್ರಿಶಂಕು— ಅಯ್ಯಯೋ! ಹಸಿವೆ! ಬೀಮುಣಾ!

ಬೀಮುಣ— ಇದಾರ ದನಿ? ನನ್ನನೇ ಕರೆಯುತಿದೆ? ತ್ರಿಶಂಕುವಿನ ವಾಣಿಯಂತಿಹುದು! ಪಾಪ, ತ್ರಿಶಂಕು ಸತ್ತು ಪ್ರೇತವಾಗಿ ನನ್ನನು ಕರೆಯುತಿಹನೆಂದು ತೋರುತ್ತದೆ! ಹಾಗಾದರೆ ನಾನು ಸತ್ತಿಲ್ಲ! (ಕರೆಯುವನು) ತ್ರಿಶಂಕೂ! ತ್ರಿಶಂಕೂ! ಎಲ್ಲಿರುವೆ? ಮಾತಾಡು!

ತ್ರಿಶಂಕು— ಅಯ್ಯಯೋ, ಹಸಿವೆ ಬೀಮುಣಾ!

ಬೀಮುಣ— ಪಾಪ, ನಿಜವಾಗಿಯೂ ಪ್ರೇತವಾಗಿಹನು! ಇರಲಿ ಮಾತಾಡಿಸಿ ನೋಡುವೆನು. (ಗಾಳಿಯನ್ನು ಸಂಬೋಧಿಸಿ) ಮಿತ್ರನೇ, ನೀನು ಸತ್ತಿರುವೆ; ಪ್ರೇತವಾಗಿರುವೆ; ಅದೃಶ್ಯನಾಗಿರುವೆ!

ತ್ರಿಶಂಕು— ಇಲ್ಲ, ನಾನು ಸತ್ತಿಲ್ಲ. ಚಳಿಯಿಂದ ಹಸಿದಿರುವೆ;—ಅಯ್ಯಯೋ!

ಬೀಮುಣ— ಹಾಗಾದರೆ ನಾನು ಸತ್ತಿರುವೆ! ನಾನು ಪ್ರೇತವಾಗಿರುವೆ! ನಾನು ನಿನಗೆ ಅದೃಶ್ಯವಾಗಿರುವೆ!

ತ್ರಿಶಂಕು— (ಬೆಚ್ಚಿಬಿದ್ದು ಮೇಲಕ್ಕೆದ್ದು) ಹಾಗಾದರೆ, ನೀನು ನನ್ನೊಡನೆ ಮಾತಾಡಿದ್ದೇಕೆ? ನಿನಗೇನು ಬುದ್ಧಿಯಿಲ್ಲವೇ? ಸತ್ತು ಪ್ರೇತವಾಗಿರುವವರು ಬದುಕಿ ಬಾಳುವವರೊಡನೆ ಮಾತಾಡ ಬಾರದೆಂದು ಗೊತ್ತಿಲ್ಲವೇ ನಿನಗೆ?

ಬೀಮಣ— (ತ್ರಿಶಂಕುವನ್ನು ನೋಡಿ ಗುರುತಿಸಿ, ತನ್ನಲ್ಲಿಯೇ) ಹೌದು! ಇವನೇ ನಮ್ಮ ತ್ರಿಶಂಕು! ಸತ್ತಿಲ್ಲ, ಪಾಪ ಬದುಕಿದ್ದಾನೆ! (ಗಟ್ಟಿಯಾಗಿ) ಮಿತ್ರನೇ, ಮಿತ್ರನೇ, ನಿನ್ನನ್ನು ಕಂಡು ನನಗೆ ಅತ್ಯಾನಂದವಾಗಿದೆ. (ಕೈಚಾಚಿ ಅವನನ್ನು ತಬ್ಬಿಕೊಳ್ಳಲು ಮುಂದೆ ನುಗ್ಗುವನು.)

ತ್ರಿಶಂಕು— (ಹೆದರಿ ಚೀತ್ಕಾರಮಾಡಿ) ಅಯ್ಯಯೋ ಪಿಶಾಚ! ಬೀಮಣ ಪಿಶಾಚ! ನನ್ನನ್ನು ಪೀಡಿಸಬೇಡ! ನಿನ್ನ ದಮ್ಮಯ್ಯ! (ಎಂದು ಓಡಲೆಳಸುವನು.)

ಬೀಮಣ— ನಿಲ್ಲು, ತ್ರಿಶಂಕು. ಎಲ್ಲಿಗೆ ಓಡುವೆ? ನಿಲ್ಲು! (ಹಿಡಿದು ಕೊಳ್ಳುವನು.)

ತ್ರಿಶಂಕು— (ಹೆದರಿ) ಅಯ್ಯಮ್ಮಾ! ಸತ್ತೆ! ಸತ್ತೆ! (ಬೀಳುವನು.)

ಬೀಮಣ— (ತನ್ನಲ್ಲಿ) ಈ ಮುದುಕನನ್ನು ಹೆತ್ತ ಮುದಿಗೂಬೆ ಹಾಳಾಗ! ಏನು ಭಯ ಇವನಿಗೆ? (ಬಹಿರಂಗ) ಅಯ್ಯೋ ತ್ರಿಶಂಕು, ಎಷ್ಟು ಭಯ ನಿನಗೆ! ನಾವಿಬ್ಬರೂ ಬದುಕಿದ್ದೇವೆ ಕಣಪ್ಪಾ! (ತ್ರಿಶಂಕು ನಿಟ್ಟುಸಿರುಬಿಟ್ಟು ಮೇಲೆದ್ದು ದೈನ್ಯ ದೃಷ್ಟಿಯಿಂದ ನೋಡುತ್ತ)

ತ್ರಿಶಂಕು— ಬೀಮಣ, ನಿಜವಾಗಿಯೂ ನೀನು ಸತ್ತಿಲ್ಲವಷ್ಟೇ?

ಬೀಮಣ— ನೀನು ಸತ್ತಿದ್ದರೆ ನಾನು ಸತ್ತಿದ್ದೇನೆ.

ತ್ರಿಶಂಕು— ಇಲ್ಲ, ನಿನ್ನ ದಮ್ಮಯ್ಯ! ನಾನು ನಿಜವಾಗಿಯೂ ಸತ್ತಿಲ್ಲ.

ಬೀಮಣ— ಹಾಗಾದರೆ ನಾನೂ ಸತ್ತಿಲ್ಲ!

ತ್ರಿಶಂಕು— ನಿನ್ನಾಣೆಗೂ?

ಬೀಮಣ— ನಿನ್ನಾಣೆಗೂ! ನನ್ನಾಣೆಗೂ! ಈ ಹೆಂಡದಬುರುಡೆ ಆಣೆಗೂ!

ತ್ರಿಶಂಕು— (ಅಂಗಲಾಚುತ್ತ) ಬೀಮಣ್ಣ, ಬಹಳ ಹಸಿವೆ! ಅದರಲ್ಲಿಯೂ ಬಾಯಾರಿಕೆ! ನಿಲ್ಲಲು ಕೂಡ ಬಲವಿಲ್ಲ. (ಹೆಂಡದ ಬುರುಡೆ ಯನ್ನು ಅಭೀಪ್ಸಕನಯನಗಳಿಂದ ಈಕ್ಷಿಸುವನು.)

ಬೀಮಣ್ಣ— (ನಗುತ್ತಾ) ಬುರುಡೆಯನ್ನು ಕಂಡು ಬಾಯಾರಿಕೆಯಾಯ್ತೊ?

ತ್ರಿಶಂಕು— ಇಲ್ಲ, ನಿನ್ನ ಕೊರಳಾಣೆ! ಗಂಟಲು ಒಣಗಿಹೋಗಿದೆ! ನಿಲ್ಲಲು ಕೂಡ ಆಗುವುದಿಲ್ಲ.

ಬೀಮಣ್ಣ— ಈಗತಾನೆ ನಾಗಾಲೋಟ ಕಿತ್ತಿದ್ದೆ!

ತ್ರಿಶಂಕು— ಅಯ್ಯೋ, ಸಾವಿನೆದರು ನೀರಡಿಕೆಯೆ?

ಬೀಮಣ್ಣ— ಹೋಗಲಿ ಬಿಡು; ಇಗೋ ಕುಡಿ. (ಬೀಮಣ್ಣನು ಬುರುಡೆ ಯನ್ನು ತ್ರಿಶಂಕುವಿನ ಬಾಯಿಗೆ ಹಿಡಿಯುವನು. ತ್ರಿಶಂಕುವು ಅದನ್ನು ಕೈಗಳಿಂದ ಹಿಡಿದುಕೊಳ್ಳಲು ಹೋಗಲು, ಬೀಮಣ್ಣನು ಅದಕ್ಕೆ ಒಪ್ಪದೆ ಹಿಂದಕ್ಕೆ ಎಳೆದುಕೊಳ್ಳುವನು.) ನೀನು ಮುಟ್ಟಬೇಡ! ನಾನೇ ಹೊಯ್ಯುತ್ತೇನೆ. (ತ್ರಿಶಂಕುವಿನ ಬಾಯಿಗೆ ಸುರೆಯನ್ನು ಹೊಯ್ಯು ವನು.)

ತ್ರಿಶಂಕು— (ಸಂತೋಷದಿಂದ ಹೊಟ್ಟೆ ನೀವಿಕೊಳ್ಳುತ್ತಾ) ಸತ್ತವನು ಬದುಕಿ ಬಂದೆನಯ್ಯಾ!

ಬೀಮಣ್ಣ— ಅದರಿಂದಲೇ ದೇವತೆಗಳು ಇದನು ಪಾನಮಾಡುವರು. ಇದು ಮರ್ತ್ಯಲೋಕದ ಅಮೃತವಯ್ಯಾ, ಅಮೃತ!

ತ್ರಿಶಂಕು— ಬೀಮಣ್ಣ, ಹೊಳೆಯಲ್ಲಿ ಬಿದ್ದವನು, ನೀನು ಬದುಕಿ ಬಂದುದು ಹೇಗೆ?

ಬೀಮಣ್ಣ— ನೀನು ಬಂದಂತೆ.

ತ್ರಿಶಂಕು— ನಾನು ಬರಲಿಲ್ಲ; ಗಂಗಮ್ಮ ದಡ ಕಾಣಿಸಿದಳು.

ಬೀಮಣ್ಣ— ನಾನು ಈಜಿ ಈಜಿ ನೆಲ ಸೇರಿದೆ.

ತ್ರಿಶಂಕು— ಉಳಿದವರು?

ಬೀಮಣ್ಣ— ಗಂಗಮ್ಮನ ಪಾಲು!

**ತ್ರಿಶಂಕು**— ಶಿವನಾಯಕರು, ರಣನಾಯಕರು ಎಲ್ಲ ಮುಳುಗಿದರೇ?

**ಬೀಮಣ**— ನನಗೆ ಗೊತ್ತಿಲ್ಲ. ಉಳಿದವನು ನಾನೊಬ್ಬನೇ ಎಂದು ತಿಳಿದಿದ್ದೆ. ಜೊತೆಗೆ ನೀನೂ ಒಬ್ಬನು ಬದುಕಿಬಿಟ್ಟಿದ್ದೀಯೆ!

**ತ್ರಿಶಂಕು**— ಅವರ ಗತಿ ಏನಾಯಿತೆಂದು ನೋಡಬೇಕಲ್ಲಾ, ಮತ್ತೆ.

**ಬೀಮಣ**— ಅದಕ್ಕೇನು ಮಾಡಬೇಕು? ಹೇಳು!

**ತ್ರಿಶಂಕು**— ಮಾಡುವುದೇನು! ಹುಡುಕುವುದಪ್ಪಾ! ನೀನು ಈ ದಿಕ್ಕಿನಲ್ಲಿ ಹುಡುಕು. ನಾನು ಈ ದಿಕ್ಕಿನಲ್ಲಿ ನೋಡುವೆನು.

**(ತೆರಳಲೆಳಸುವನು)**

**ಬೀಮಣ**— ಎಚ್ಚರಿಕೆ, ತ್ರಿಶಂಕು, ಎಚ್ಚರಿಕೆ! ಇದೇನೋ ಅದ್ಭುತ ದ್ವೀಪ! (ಗಾನ **ಕೇಳಿಸುವುದು**) ಕೇಳಿದೆಯಾ ಯಾರೋ ಹಾಡುವರು!

**ತ್ರಿಶಂಕು**— ಮನುಷ್ಯರಿರಲಾರರು! ಕಿನ್ನರರಿರಬೇಕು!

**[ಇಬ್ಬರೂ ಒಂದೊಂದು ಕಡೆಗೆ ಹೋಗುವರು.]**

---

## ದೃಶ್ಯ ೨

[ದ್ವೀಪದಲ್ಲಿ ಭೈರವನಾಯಕನ ಗುಹೆಯ ಮುಂದುಗಡೆ, ನೀಳವಾದ ಗಡ್ಡದಿಂದ ಪವಿತ್ರತರನಾಗಿ ತೋರುವ ಭೈರವನಾಯಕನೂ, ಆತನ ಮಗಳು ಗೌರಾಂಬೆಯೂ ಬರುವರು.]

ಗೌರಾಂಬೆ— (ಉದ್ವೇಗದಿಂದ)

ತಂದೆಯೇ, ನಿನ್ನ ಮಂತ್ರದ ಬಲದೊಳೀ ದೊಡ್ಡ
ಬಿರುಗಾಳಿ ಎದ್ದಿರುವುದಾದೊಡೆ ತವಿಸದನು.
ಕತ್ತಲೆಯ ಕಾರುತಿದೆ ಬಾಂದಳವು; ಹುಚ್ಚೆದ್ದ
ವಾಹಿನಿಯು ಗಿರಿಶಿಖರಗಳ ಮುಟ್ಟಿ ಚೀರುತಿದೆ,
ಎಚ್ಚರಿಸುತಲ್ಲಿ ಮಲಗಿಹ ಗುಡುಗು ಮಿಂಚುಗಳ!
ಬಿರುಗಾಳಿಯಲಿ ಸಿಲುಕಿ ನಮ್ಮ ಈ ದ್ವೀಪವೂ
ಮಿಡಿದ ಬೀಣೆಯ ತಂತಿಯಂದದಲಿ ನಡುಗುತಿದೆ.
ಆ ರೌದ್ರ ದೃಶ್ಯವನು ನಾ ನೋಡಲಾರೆ!
ನೆನೆಯಲಾರೆ! ಕಿರಿಯ ದೋಣಿಯು ತೆರೆಗಳಗ್ರದಲಿ
ಸುಳಿಗಾಳಿಯಲಿ ಸಿಲ್ಕಿ ಸುತ್ತುವ ತರಗಿನಂತೆ
ಕಂಪಿಸಿತು, ತತ್ತರಿಸಿ ಚಿಮ್ಮಿದುದು! ಹೋ ಎಂದು
ಬಡಜೀವಿಗಳು ಕೂಗುತಿರಲೊಡನೆ ಮುಳುಗಿದುದು!
—ಪುಣ್ಯಾತ್ಮರೊಬ್ಬರೂ ಇರಲಿಲ್ಲವೇ ಅಲ್ಲಿ?—
ನಿನ್ನ ಮಂತ್ರದ ಶಕ್ತಿ ನಸಗಿದ್ದಪಕ್ಷದಲಿ
ಹೊಳೆಯನಿಳೆಯಿಯಾಂಟುವಂದದಿ ಮಾಡಿ ದೋಣಿಯನು
ಪೊರೆಯುತಿದ್ದೆ!

ಭೈರವ— (ಮುಗುಳ್ನಗೆಯಿಂದ) ತಾಳ್ಮೆಯಿಂದಿರು ತಾಯಿ; ಇನ್ನೇನು
ಭಯವಿಲ್ಲ. ನಿನ್ನ ಪೂವೆದೆಯಳಲ ಪರಿಹರಿಸಿ
ಸಂತವಿಡು.

ಗೌರಾಂಬೆ— ಅಯ್ಯೋ ಎಂತಹ ದುರ್ದಿನವಿದು!

ಭೈರವ— ಭಯವೊಂದುಮಿಲ್ಲ; ಕೇಡಾರ್ಗಮಿಲ್ಲ;
ನಿರ್ನೆರಂ ನೀನೇತಕಿಂತು ಬೆದುರುವೆ, ಮಗಳೆ?
ನಿನಗಾಗಿ, ಎನ್ನ ಮುದ್ದಿನ ಮಗಳೆ, ನಿನಗಾಗಿ,
ನಿನಗೋಸುಗವೆ ನಾನು ಇಂತೆಲ್ಲಮೆಸಗಿರ್ಪೆ.
ನೀನರಿಯೆ, ಮುದ್ದಿನ ಕುಮಾರ್ತೆಯೇ, ನೀನರಿಯೆ:
ನಾನಾರು? ನೀನಾರು? ಎಲ್ಲಿಂದ ನಾವಿಲ್ಲಿ
ಗೈತಂದಿಹೆವು? ಎಂಬುದಾವದನು ನೀನರಿಯೆ!
ನಿನ್ನ ತಂದೆಯು ಕಿರಿಯ ಗುಹೆಗೊಡೆಯನೆಂಬುದನು
ಮಾತ್ರವೇ ನೀಬಲ್ಲೆ. ಮತ್ತಾವುದನು ಅರಿಯೆ.

ಗೌರಾಂಬೆ— ಇನ್ನೆವರಮರಿವಾಸೆ ಇರಲಿಲ್ಲ; ಬರಲಿಲ್ಲ.

ಭೈರವ— (ಗಂಭೀರವಾಗಿ)
ಬಂದಿಹುದು! ಹೊತ್ತಿಂದು ಬಂದಿಹುದು. ನನ್ನಿಯನು
ನಿನಗೊರೆವ ಸಮಯ ಬಳಿಸಾರಿಹುದು—ಬಾ ಇಲ್ಲಿ,
ನನ್ನ ಮಂತ್ರದ ಕವಚವನ್ನೆಳೆದು ಕೆಳಗಿರಿಸು—

(ಹಾಗೆ ಮಾಡುವಳು.)

ಹಾಗೆ; ಮಂತ್ರವು ಅಲ್ಲಿ ಬಿದ್ದಿರಲಿ—ಕಣ್ಣೊರಸಿಕೊ,
ಶಾಂತಳಾಗು:—ನೀನು ನೋಡಿದ ದೋಣಿ ಮುಳುಗಿಲ್ಲ;
ಅಲ್ಲಿದ್ದ ಜನರ ಕೂದಲು ಕೂಡ ಕೊಂಕಿಲ್ಲ.
ನನ್ನ ಮಂತ್ರದ ಬಲದಿ ಮಾಯೆಯನು ಬೀಸಿದೆನು;
ಬಿರುಗಾಳಿ ಬೀಸಿದೊಲು, ಮಿಂಚು ಮಿಂಚಿದ ತೆರದಿ,
ಗುಡುಗು ಮೊಳಗಿದವೋಲು, ದೋಣಿಯು ಮುಳುಗಿದಂತೆ,
ಕಣ್ಗಳಿಗೆ ತೋರಿದುದು. ಬೆದರದಿರು ಗೌರಾ;
ಕಿವಿಗೊಟ್ಟು ಕೇಳು, ನಮ್ಮ ಹಿಂದಿನ ಕತೆಯ
ಹೇಳುವೆನು. ಇಂದದನು ಸಂಪೂರ್ಣಗೈಯುವೆನು.

ಗೌರಾಂಬೆ— ಎನಿತೊಸಲ ಕತೆಯನೊರೆಯಲು ತೊಡಗಿ, ನಿಲ್ಲಿಸಿಹೆ.
'ಇಂದಿರಲಿ, ಮುಂದೆ ಹೇಳುವೆನದನು' ಎಂದುಸುರಿ
ನಿದ್ದೆಮಾಳ್ಪೆನ್ನ ಬಯಕೆಯನೆಳ್ಚರಿಸಿ ಕೆಣಕಿಹೆ.

ಭೈರವ— ಕತೆಯ ಹೇಳುವ ಕಾಲವೀಗಳೈತಂದಿಹುದು.
ಕಾಲವೇ ನಿನ್ನ ಕಿವಿಗಳ ತೆರೆಯುತಿಹುದು.
ಕೇಳು, ಕಿವಿಗೊಟ್ಟು ಕೇಳು. ಈ ಗುಹೆಗೆ ನಾವು
ಬರುವ ಮುನ್ನಿನಾ ಕಾಲದ ನೆನಪಿದೆಯೇ ನಿನಗೆ?
ನಿನಗೆ ನೆನಪಿರಲಾರದು: ನೀನಾಗ ಸಣ್ಣವಳು,
ಮೂರು ವರ್ಷದ ಹುಡುಗಿ!

ಗೌರಾಂಬೆ— ನೆನಪಿರ್ಪುದಪ್ಪಾ
ನೆನಪಿಹುದು.

ಭೈರವ— ಎಲ್ಲಿಂದ? ಯಾರಿಂದ? ಏತರಿಂದ?
ನಿನಗೆ ನೆನಪನು ತರುವ ಚಿತ್ರವೇನಾದೊಡಂ
ಮನದಿ ಮೂಡಿದರದನು ಹೇಳು. (ಗೌರಾಂಬೆಯು
ಚಿಂತಿಸುವಳು.)

ಗೌರಾಂಬೆ— ದೂರದಲಿ,
ನೆನಪಿನ ದಿಗಂತದಲಿ ಮುಸುಕಾದ ಕನಸಿನೊಲು
ಮಬ್ಬಾಗಿ ಮಿಣುಕತಿಹುದಾ ಚಿತ್ರ!—ಐದಾರು
ಹೆಣ್ಣಾಳೆನ್ನನು ಸಲಹಲಿರುತಿರ್ದರಲ್ಲವೇ?

ಭೈರವ— ಅಹುದಹುದು. ಅದಕಿಂತ ಮಿಗಿಲಾದ ಸೌಭಾಗ್ಯ
ವೆಮಗಿತ್ತು.—ಇರಲಿ, ನಿನಗದರ ನೆನಪಾದುದೆಂತು?
—ಕತ್ತಲೆಯು ಕವಿದಿರ್ಪ ಕಳೆದ ಕಾಲದ ಗಬ್ಬದಲಿ
ಮತ್ತೇನು ತೋರುತಿದೆ? ಇಲ್ಲಿಗೈತರ್ಪಾಗ
ನಾವೆಂತು ಬಂದೆವದ ಹೇಳು.

ಗೌರಾಂಬೆ— (ಯೋಚಿಸಿ) ನೆನಪಿಲ್ಲ.

ಭೈರವ— ಇಂದಿಗೆ ಹನ್ನೆರಡು ವರುಷಗಳ ಹಿಂದೆ,
ಗೌರಾಂಬೆ, ಹನ್ನೆರಡು ವರುಷಗಳ ಹಿಂದೆ,
ನಾನು ಕೆಳದಿಯನಾಳ್ವ ನಾಯಕನಾಗಿದ್ದೆ.
ನಾನರಸು, ನೀನರಸುಕುವರಿಯಾಗಿದ್ದೆ.

ಗೌರಾಂಬೆ— (ಕಣ್ಣರಳಿಸಿ ಕೌತುಕದಿಂದ)

ನೀವೆನ್ನ ತಂದೆಯುಲ್ಲವೆ, ಜೀಯ?

ಭೈರವ— ಇಂತೇಕೆ ಪ್ರಶ್ನಿಸುವೆ? ನಿನ್ನಮ್ಮ ಹದಿಬದೆಯು!
ನೀನೆನ್ನ ಮಗಳೆಂದು ಹೇಳಿದಪಳವಳೆಯೆ?
ನಿನ್ನ ತಂದೆಯೆ ಕೆಳದಿಯೊಡೆಯನಾಗಿದ್ದ;
ನೀನರಸು ಕುವರಿಯಾಗಿದ್ದೆ.

ಗೌರಾಂಬೆ— ಶಿವ ಶಿವಾ!
ಯಾರ ಪಾಪವು ನಮ್ಮನಿಲ್ಲಿಗೊಯ್ದಿತು. ಅಥವಾ
ನಮ್ಮ ಪುಣ್ಯವೊ ಏನೊ?

ಭೈರವ— ಪಾಪ ಪುಣ್ಯಗಳೆರಡು,
ಪ್ರಿಯಪುತ್ರಿ. ಪಾಪವೆಮ್ಮನು ಹೊರಗೆ ತಳ್ಳಿದುದು;
ಪುಣ್ಯವೆಮ್ಮನೀಯೆಡೆಗೊಯ್ದಿತು!

ಗೌರಾಂಬೆ— ಹರ ಹರಾ!
ನಿನಗಳಲನೆನಿತಿತ್ತೆನೋ ಏನೊ ನಾನಂದು?
ಮುಂದಾದುದೇನು? ಹೇಳಪ್ಪಾ!

ಭೈರವ— ಎನ್ನನುಜನು,
ನಿನ್ನ ಕಕ್ಕನು, ರುದ್ರನೆಂಬುವನು—ಸರಿಯಾಗಿ
ಕೇಳು—ಆ ತಮ್ಮನೆಯೆ ಎಮ್ಮ ದುರ್ಗತಿಗೆ
ಕಾರಣನು. ಒಂದೆ ಪೊಡೆಯೊಳೆ ಪುಟ್ಟಿ, ಒಬ್ಬಮ್ಮ
ನಿತ್ತ ಮೊಲೆಯುನೆ ಈಂಟಿ ಬೆಳೆದ ಆ ಸೋದರನೆ
ಕಡುವೈರಿಯುಪ್ಪುದೇ?—ನಿನ್ನನುಳಿದರೆ, ತಿರೆಯೊ
ಳೆನಗಾತನೆಯೆ ಎರಡನೆಯ ಒಲ್ಮೆ; ಆತಂಗೆ
ದಾನಧರ್ಮಂಗಳಲಿ, ಸತ್ಯ ಭಕ್ತಿಗಳಲ್ಲಿ,
ನಿಯಮ ನಿಷ್ಠೆಗಳಲ್ಲಿ ಪೆಸರಾಂತ ಎನ್ನ
ನೆಲದ ಪೊರೆಯನು ಪೊರಿಸಿ, ನಾನು ವೇದಾಧ್ಯಯನ,
ಯೋಗ ಮೊದಲಹ ಗುಪ್ತ ಸಾಧನೆಗಳಲಿ ತೊಡಗಿ

ವ್ಯೆಮುರೆತೆ. ನಿನ್ನ ಆ ಠಕ್ಕು ಚಿಕ್ಕಪ್ಪನು—
ನಾ ಹೇಳುವುದನೆಲ್ಲ ಕೇಳುತಿಹೆಯೇನು?

ಗೌರಾಂಬೆ— ತಂದೆಯೇ, ಕಿವಿಯಾಗಿ ಕೇಳುತಿಹೆನು!

ಭೈರವ— ಇಂತಿರಲು ರಾಜ್ಯಭಾರದ ಗುಟ್ಟುಗಳನೆಲ್ಲ
ತಾನರಿತು: ಏರಿದವರನು ಕೆಳಗೆ ತಳ್ಳುವುದು;
ಬಾಲವಲ್ಲಾಡಿಸುವ ಕುನ್ನಿಗಳನೆತ್ತುವುದು;
ಗೊಂಬೆಗಳ ತೆರದಿಂದೆ ಅಧಿಕಾರಿಗಳನೆಲ್ಲ
ತನ್ನ ತಾಳಕೆ ತಕ್ಕ ರೀತಿಯಲಿ ಕುಣಿಸುವುದು;
ಇತ್ಯಾದಿ ರಾಜ್ಯತಂತ್ರದ ಮರ್ಮಗಳನೆಲ್ಲ
ತಾನರಿತು, ಹೆಮ್ಮರಕೆ ಬಂದಿಳಿಕೆ ಹಿಡಿದಂತೆ
ನನ್ನರಸುತನಕವನು ಮೆಲುಮೆಲನೆ ಕಾಲಿಟ್ಟು
ನನ್ನ ಸತ್ವವನೆಲ್ಲ ಹೀರತೊಡಗಿದನು—
ನೀನೆಲ್ಲಿಯೋ ನೋಡುತಿರುವೆ!

ಗೌರಾಂಬೆ— ಇಲ್ಲಪ್ಪಾ, ಮನಸಿಟ್ಟು
ಆಲಿಸುವೆ.

ಭೈರವ— ಕೇಳಮ್ಮ, ಕಿವಿಗೊಟ್ಟು ಕೇಳು.
ನಾನಿಂತು ಲೌಕಿಕ ವಿಚಾರಗಳ ತೊರೆದು
ಆತ್ಮಕಲ್ಯಾಣದಲಿ ತೊಡಗಿರಲು, ನನ್ನನುಜ-
ನೆದೆಯಲ್ಲಿ ಕೆಟ್ಟಬಯಕೆಯು ಬೆಳೆದು, ಮರವಾಯ್ತು.
ನಾನೆನಿತು ಹಿರಿದಾಗಿ ತಮ್ಮನನು ನಂಬಿದೆನೊ
ತಮ್ಮನ ದುರಾಶೆಯೂ ಅದಕೆ ಇರ್ಮಡಿಯಾಯ್ತು!
ರಾಜ್ಯದಾದಾಯವೆಲ್ಲವು ಅವನ ಕೈಸೇರಿ,
ದೊರೆಯ ಬಲವದರೊಡನೆ ಗೆಳೆತನವ ಬೆಳೆಯಿಸೆ—
ಮುಂದೇನು? ಧನಮದದ ಬೆನ್ನಿನೊಳೆ ದರ್ಪಮದ
ಹುಟ್ಟಿದೊಡೆ ಸದ್ಗುಣವು ದುರ್ಗುಣಕೆ ತಿರುಗುವುದು.
ಅಂತೆಯೇ ರುದ್ರನೂ ತಾನೆ ಭೂಪತಿಯೆಂದು

ನಂಬಿದನು. ಬಾಹ್ಯದಲಿ ನಮ್ರತೆಯನಭಿನಯಿಸಿ
ತನ್ನ ವಾಣಿಯೆ ರಾಜವಾಣಿಯೆಂಬಂದದಲಿ
ನಟಿಸತೊಡಗಿದನು. ಇಂತು ಬೆಳೆದುದವನಾಸೆ—
ನೀನೆತ್ತ ನೋಡುತಿಹೆ?

ಗೌರಾಂಬೆ— ಇಂದ್ರಿಯಗಳನಿತುಮಂ
ಕಿವಿಯಾಗಲೆಳಸುವುವು ಈ ಕತೆಯನಾಲಿಸೆ!

ಭೈರವ— ಇಂತೆಸಗಿ, ನಗರದರಸನ ಕೂಡೆ ಮಾತಾಡಿ,
ಒಳಸಂಚುಗಳ ನಡೆಸಿ, ಕಪ್ಪಮಂ ಕೊಡಲೊಪ್ಪಿ,
ಮಣಿಯದೆಯೆ ನಿಂತಿರ್ದ ಕೆಳದಿಯ ಕಿರೀಟವಂ
ಪರರಾಯರಡಿಗಿಡಲು ಒಪ್ಪಿ—ಹಾ ಕೆಳದಿ!—
ನನಗೆ ಬಲವಿಲ್ಲೆಂದು, ನನಗರಸುತನ ತಕ್ಕು-
ದಲ್ಲೆಂದು, ನನಗೆ ಹೊತ್ತಗೆಗಳೆಯೆ ಸಾಕೆಂದು,
ನನ್ನನಲ್ಲಿಂದಟ್ಟಬೇಕೆಂದು ನಿಶ್ಚಯಿಸಿ—

ಗೌರಾಂಬೆ— ಶಿವ ಶಿವಾ!

ಭೈರವ— ನೋಡು, ಮಗಳೇ ನೋಡು; ಚಿಕ್ಕಪ್ಪನೆಸಗಿದುದು
ಧರ್ಮವೆ? ವಿಚಾರಿಸು! ಅವನೆನಗೆ ಸೋದರನೆ?

ಗೌರಾಂಬೆ— ನನ್ನಜ್ಜಿ ಕುಟಿಲೆಯೆಂದಾನು ಊಹಿಸಲಾರೆ!
ಗೋವುಗಳ ಬಸಿರಿನಲಿ ಕುನ್ನಿಗಳು ಬಂದಪವು!
ಸಿಂಹಗಳ ಗಬ್ಬದಲಿ ಹುಲುನರಿಗಳುದಿಸಿಹವು!

ಭೈರವ— ಮೇಲೆ ನಡೆದುದ ಕೇಳು: ನನಗೆ ಅರಿಯಾಗಿರ್ದ
ನಗರದರಸನು ರುದ್ರನಾಡಿದಾ ನುಡಿಗಳಿಗೆ
ನೆರವನೀಯಲು ಸಮ್ಮತಿಸಿ, ನಟ್ಟಿರುಳಿನಲ್ಲಿ
ಸೇನೆಯೊಡನೈತಂದು ಕೆಳದಿಯನು ಮುತ್ತಿದನು.
ರುದ್ರನಾಯಕನೆಮ್ಮ ಕೋಂಟೆ ಹೆಬ್ಬಾಗಿಲನು
ತೆರೆಯಲಾನರಿಯದೆಯೆ ಅರಿಯ ಸೆರೆಯಾಳಾದೆ!
ಅಳುತಿರ್ದ ಮಗುವಾದ-ನಿನ್ನನುಂ ಎನ್ನನುಂ
ಕೊಂಡೊಯ್ದರಾಳುಗಳು.

ಗೌರಾಂಬೆ— (ನೀರವವಾಗಿ ರೋದಿಸುತ್ತ) ವಿಶ್ವಾಸ ಘಾತಕರು!
ಅಂದೆಂತುಟತ್ತೆನೋ ಅದನರಿಯೆ; ಅದಕಾಗಿ
ಇಂದಾದರುಂ ಕಂಬನಿಯ ಕರೆವೆ. ಈ ಕತೆಯ
ಕೇಳ್ದೆನ್ನ ಹೃದಯಮಂ, ತೊಯ್ದುರಿವೆಯಂ ಪಿಂಡಿ-
ದಂದದಲಿ ಆರೊ ಹಿಂಡಿದವೋಲಾಗುತಿದೆ!

ಭೈರವ— (ಅವಳ ತಲೆಯನ್ನು ಕೈಯಿಂದ ತಡವುತ್ತ) ಕೇಳು ಮುಂದಿನ ಕತೆಯ:
ನಾವಿಲ್ಲಿಗೆಂತು ಬಂದೆವು ಎಂಬುದನು ತಿಳಿವೆ.
ಇಂದಿಲ್ಲಿ ನಡೆಯುವೀ ಕತೆಗಾಗಿ ಹಿಂದಿನಾ
ಕತೆಯ ನಿನಗೊರೆದೆ.

ಗೌರಾಂಬೆ— ಸೆರೆಸಿಕ್ಕಿದೆವಿಮ್ಮಾರ್ವ್ವರನು
ಅವರು ಕೊಲ್ಲದೆ ಮಾಣ್ದರೇಕೆ?

ಭೈರವ— ಸರಿಯಾಗಿ
ಕೇಳಿರುವೆ; ಒಳ್ಳೆಯ ಪ್ರಶ್ನೆಯಿದು. ಗೌರಾಂಬೆ,
ಅಂತೆಸಗೆ ಅವರಿಗೆಲ್ಲಿಯ ಕೆಚ್ಚು? ಭೈರವನು
ದೇಶದೊಲ್ಮೆಗೆ ಪಾತ್ರನಾಗಿದ್ದನೆಂಬುದನು
ತಿಳಿದಿದ್ದರವರೆಲ್ಲ. ಕೆಂಪಾದ ಪಾಪವನು
ಮರಳಿ ಕಡುಗೆಂಪಾಗಿ ಮಾಡಲಂಜಿದರು.
ಎವಿಮ್ಮಾರ್ವ್ವರನು ದೇಶದಿಂ ದೂರ ಕೊಂಡೊಯ್ದು
ಹರಕು ಹರಿಗೋಲೊಂದರೊಳು ಹಾಕಿ, ನೆರೆತುಂಬಿ
ಭೋರ್ಗರೆದು ಹರಿದಿರ್ದ ಹೊಳೆಯಲ್ಲಿ ನೂಂಕಿದರು.
ಜಡಿಮಳೆಯು ಹೋ ಎಂದು ಸುರಿದಿತ್ತು; ಬಿರುಗಾಳಿ
ಬಲೆಗೊಳಗಾದ ಕೇಸರಿಯಂತೆ ಗರ್ಜಿಸಿತ್ತು.
ಮಿತ್ತುವಿನ ನಾಲಗೆಗಳಂದದಲಿ, ವೀಚಿಗಳು
ತೇಲುತಿಹ ಹರಿಗೋಲ ನುಂಗಲೆಳಸಿದುವು.

ಗೌರಾಂಬೆ— ಅಪ್ಪಾ, ನಿನಗೆನಿತು ಅಳಲನಿತ್ತೆನೊ ನಾನು?

ಭೈರವ— ಅಂತೆನ್ನದಿರು ನನ್ನ ದೇವತೆಯೆ. ನಿನ್ನಿಂದ,
ನಿನ್ನಿಂದಲೇ ಬದುಕಿದೆನು. ಮುಗುಳುನಗೆಯಿಂದ

ನೀನೆನ್ನ ಹುರಿದುಂಬಿಸಿದೆ. ನಿನ್ನ ಕಣ್ಬೆಳಗೆ
ಬಟ್ಟೆದೋರಿದುದೆನಗೆ; ಬಲ್ಮೆಯನು ನೀಡಿದುದು.

ಗೌರಾಂಬೆ— ಈ ದ್ವೀಪದೆಡೆಗೆಂತು ಬಂದುದು ನಾವು?

ಭೈರವ— ಈಶ್ವರನ ದಯೆಯಿಂದ!
ಜಯದೇವನೆಂಬೊಬ್ಬ ಮುದಿಯ ಸರದಾರನು
ಕರುಣೆಯಲಿ ಗುಟ್ಟಾಗಿ ಅನ್ನಪಾನಂಗಳನು
ದೋಣಿಯೊಳಗಿಡಿಸಿದನು. ಬೇಕಾದ ವಸನಗಳ-
ನೆಲ್ಲಮುಂ ನೀಡಿದನು. ಅದರಿಂದಿನ್ನೆವರಂ
ಬದುಕಿಹೆವು. ಸದ್ಗುಣಿಯು, ಪಾಪಭೀರುವು ಅವನು!
—ಗ್ರಂಥಗಳಲೆನಗೊಲ್ಮೆ ಎಂಬುದನು ತಿಳಿದವನು
ಕೆಳದಿಗಿಂತಲು ಎನಗೆ ಮಿಗಿಲಾದ ಬೆಲೆಯುಳ್ಳ
ಕೃತಿಗಳನು ನೀಡಿದನು.

ಗೌರಾಂಬೆ— ಪುಣ್ಯಾತ್ಮನಾತನನು
ಎಂದಾದೊಡಂ ನಾನು ನೋಡುವೆನೆ?

ಭೈರವ— ಮಗಳೆ, ನನಗೆ ಹೊತ್ತಾಯ್ತು (ಮಂತ್ರಕವಚವನ್ನು ಧರಿಸಿ)
ನಾನಿಂದು ಮಾಡಬೇಕಾದ ಕಾರ್ಯ ಬಹಳವಿದೆ.
ಕತೆಯ ತುದಿಯನು ಹೇಳಿ ಮುಗಿಸುವೆನು. ಹರಿಗೋಲು
ಇರುಳೆಲ್ಲ ತೇಲಿ, ನೇಸರು ತನ್ನ ಪೊಂದೇರ
ನಡರಿ ಮೂಡುವೆಟ್ಟಿನ ನೆತ್ತಿಗೈತಹ ಮುನ್ನ,
ಎಚ್ಚರುವ ತಿರೆವೆಣ್ಣು ಮೆಲ್ಲನೆವೆದೆರೆಯುತಿರೆ,
ಮುಂಬೆಳಗು ಮೈದೋರಿ ಬನಗಳನು ಬೆಳಗುತಿರೆ,
ವಿಹಂಗಮುಗಳಿಂಚರದ ಹೊನಲುಕ್ಕಿ ಬರುತಿರಲು,
ತಣ್ಣನೆಯ ಸುಸಿಲುಸಿರು ಒಯ್ಯನೆ ತೀಡುತಿರೆ,
ಬಂದು ಈ ದ್ವೀಪವನು ಸೇರಿದುದು. ನಾನಿಲ್ಲಿ
ಈ ಗುಹೆಯನೆಲೆವನೆ ಮಾಡಿ ನಿನ್ನನು ಪೊರೆದೆ.
ನಿನಗಾನೆ ಗುರುವಾಗಿ ಅರಸುಕುವರಿಯರರಿಯ-
ಲಾರದಿಹ ಎನಿತೆನಿತೊ ಬಿಜ್ಜೆಗಳ ನಿನಗಿತ್ತೆ.

ಗೌರಾಂಬೆ— ತಂದೆಯೇ, ನಾನಿನಗೆ ಚಿರಋಣಿಯು—ಆದರೆ
ಬಿರುಗಾಳಿಯನ್ನೇತಕೆಬ್ಬಿಸಿದೆ? ಎಂಬುದಕೆ
ಕಾರಣವನೀನೊರೆಯಲಿಲ್ಲ.

ಭೈರವ— ಅಂತಪ್ಪೊಡಾಲಿಸು :
ವಿಧಿಯ ನಿಯಮದಿ, ಮಗಳೆ, ನನ್ನ ಆ ಶತ್ರುಗಳು
ಹೊಳೆಯ ನಡು ದೋಣಿಯಲಿ ಕುಳಿತು ಬಂದುದ ಕಂಡೆ.
ಅಮೃತಗಳಿಗೆಯನೇಕೆ ಬಿಡಲೆಂದು ಬಗೆದು
ಮಂತ್ರ ಶಕ್ತಿಯ ಒಲದಿ ಬಿರುಗಾಳಿಯೆಬ್ಬಿಸಿದೆ.
ಈಗ ಪ್ರಶ್ನೆಯು ಸಾಕು. ಮುಂದೆಲ್ಲ ತಿಳಿಯುವುದು.
[ಗೌರಾಂಬೆಯನ್ನು ಮುಟ್ಟುವನು. ಆಕೆಗೆ ನಿದ್ದೆ ಬರುವುದು.]
ನಿದ್ದೆ ಬರುತಿದೆ ನಿನಗೆ. ಒಳ್ಳೆಯದು ಮಲಗು.
[ಗೌರಾಂಬೆ ಮಲಗುವಳು. ಭೈರವನಾಯಕನು ಆಕಾಶದ ಕಡೆ ನೋಡಿ]
ಬಾ, ಈಗ; ಕಿಂಕರನೆ ಸಿದ್ಧವಾಗಿಹೆನು!

[ಮಾಯಾವಿಯಾದ ಕಿನ್ನರನು ಬರುವನು.]

ಕಿನ್ನರ— ಜಯಮಕ್ಕೆ! ಎನ್ನೊಡೆಯ ನಿನಗೆ ಗೆಲವಕ್ಕೆ!
ನಿರವಿಪುದನೆಸಗಲೈತಂದಿಹೆನು: ಬಾಂದಳದಿ
ಹಾರುವೆನು; ಕಡಲುಗಳನೀಜುವೆನು; ಬೆಂಕಿಯಲಿ
ಮುಳುಗುವೆನು; ಮುಗಿಲುಗಳನಾಳುವೆನು. ಮೇಣೇನಂ
ನೀನೆನಗೆ ಬೆಸವೇಳ್ದೊಡದನೆಸಗುವೆನು ನಾನು.
ಆವಗಂ ನಾ ನಿನ್ನ ಕಿಂಕರನು.

ಭೈರವ— ಕಿನ್ನರಾ
ನಾಂ ಪೇಳ್ದುದನಿತುಮಂ ಎಸಗಿ ಬಂದಿರ್ಪೆಯೇಂ?

ಕಿನ್ನರ— ಅಂತೆಯೇ ಇನಿತುಮಂ ತಪ್ಪದೆಯೆ ಎಸಗಿದೆನು :
ದೊರೆಯ ದೋಣಿಯನಡರಿ ಹಿಂದುಗಡೆ ಮುಂದುಗಡೆ
ಕುಣಿಕುಣಿದು ಹಾರಾಡಿ ಹೋರಾಡಿ ಚೀರಾಡಿ
ಅಂಬಿಗರ ಮೆದುಳಿನಲಿ ಮದಿರೆಯಾಗಾಡಿದೆನು.
ತರುವಾಯ ಬಸಗಳು ಮಲಗುವಂತೆ ಬಿರುಗಾಳಿ-

ಯಾಗಿ ಬೀಸಿದೆನು. ಕರ್ಮ್ಮಗಿಲಾಗಿ ಗಗನದಲಿ
ಕಿಕ್ಕಿರಿದೆ. ಮಿಂಚಾಗಿ ಮಿಂಚಿದೆನು. ಮೊಳಗಾಗಿ
ಗುಡುಗಿದೆನು ಬೆಟ್ಟಗಳ ಗಬ್ಬ ನಡುಗುವಂತೆ.
ಎರಗಿದೆನು ಸಿಡಿಲಾಗಿ ಬಂಡೆಗಳು ಬಿರಿವಂತೆ.
ತರುವಾಯ ನೀರಿನಲೆಗಳ ಹೊಕ್ಕು ದೋಣಿಯನು
ನಡುಗಿಸಿದೆನುಡುಗಿಸಿದೆ. ನಂಜುಗೊರಲನ ಹಣೆಯ
ಕಣ್ಣಿಗಿಮ್ಮಡಿಯಾದ ಬೆಂಕೆಯುಂದದಿ ಕಡೆಗೆ
ನಾವೆಯನು ಮುತ್ತಿದೆನು. ಗುಡುಗುಡಿಸಿ ಭೋರಿಡುತ
ಮುಗಿಲಿನಲಿ ಕಲ್ಲಾಗಿ ಬೀರಿದೆನು, ಬಿಕ್ಕಿದೆನು!
ಹಗಲಿನಲಿ ಇರುಳಿಣಿಕಿದಂತೆಸಗಿ, ಮರಳಿ
ಇರುಳಿನಲಿ ಹಗಲಿಣಿಕಿದಂತೆಸಗಿ ಎಲ್ಲರನು
ಮಾಯೆಯಿಂ ಮುಚ್ಚಿದೆನು. ಅವರವರ ಪಾಪಗಳ-
ನಾಯ್ದಲಗುಗಳ ಸಮೆದು ಚುಚ್ಚಿದೆನು!

ಭೈರವ— ಭಲಾ! ವೀರ ಕಿನ್ನರ!
ಬಗೆ ಬಟ್ಟೆಗೆಡದೆ ಪುರ್ಚಿಗೀಡಾಗದೆಯೆ
ಮಾಯೆಗೊಳಗಾಗದವರಿರ್ದರೇ ಅವರಲ್ಲಿ?

ಕಿನ್ನರ— ಹುಚ್ಚಾಗದಿದ್ದವನು ಒಬ್ಬನಾದರು ಇಲ್ಲ.
ಗೋಳಾಡದಿರ್ದವರ ನಾ ಕಾಣಲಿಲ್ಲ. ಆ
ಅಂಬಿಗರನುಳಿದು ಮಿಕ್ಕವರೆಲ್ಲ ಮುಡಿಗೆದರಿ
ಸುತ್ತಲಿಂ ಮುತ್ತಿಬಂದಗ್ನಿಯನು ಕಂಡಳುಕಿ
ನೊರೆಯೆದ್ದತೆರೆಗಳಲಿ ಧುಮುಕಿದರು. ದೊರೆಯ ಮಗ
ಶಿವನಾಯಕನು ಮುಳುಗಿದವರಲ್ಲಿ ಮೊತ್ತ-
ಮೊದಲಿಗನು. "ನರಕದೊಳು ಆರಿಲ್ಲ! ಜವನಾಳ್ಗ-
ಳನಿಬರುಂ ಈಯೆಡೆಗೆ ಬಂದಿಹರು" ಎಂದೊರಲಿ
ಧುಮ್ಮಿಕ್ಕಿದನು ಮೊರೆದು ಹರಿವ ವಾಹಿನಿಯಲ್ಲಿ!

ಭೈರವ— ನೀನೀಗಳೆನ್ನ ಕಿಂಕರ! ವೀರ ಕಿನ್ನರಾ,
ದಡದೆಡೆಯೊಳಷ್ಟೇ ಇಂತೆಲ್ಲ ಜರುಗಿದುದು?

ಕಿನ್ನರ— ಅಹುದಹುದು, ದಡಕತಿ ಸಮೀಪದೊಳೆ!

ಭೈರವ— ಎಲ್ಲ ಅಕ್ಷತರಾಗಿ ಬದುಕಿರ್ಪರಷ್ಟೆ?

ಕಿನ್ನರ— ಕೂದಲೊಂದಾದೊಡಂ ಕೊಂಕಿಲ್ಲ, ಎನ್ನೊಡೆಯ;
ಉಟ್ಟ ಸಿರಿಯುಡುಗೆಯೊಳು ಕಲೆಯೊಂದುಮಾಗಿಲ್ಲ;
ಅದಂತಿರ್ಕೆ; ಮರಳಿನಿತು ಪೊಸಕಳೆಯನೊಂದಿಹವು!
ನೀನು ಬೆಸವೇಳ್ದಂತೆ ದ್ವೀಪದೊಳಲ್ಲಲ್ಲಿ
ಓರೋರ್ವರಂ ಕೊಂಡು ಗುಂಪಾಗಿ ಹರಡಿಹೆನು.
ದೊರೆಯ ಮಗನನು ನಾನೆ ತೀರಕೇರಿಸಿದೆ;
ದ್ವೀಪದೊಂದೆಡೆಯಲ್ಲಿ ಬಿಸುಸುಯ್ದು ಕುಳಿತಿಹನು
ಅಳಲಿನಿಂ ಕೆನ್ನೆಗಳ ಭಾರವನು ಕೈಲಿಟ್ಟು.

ಭೈರವ— ಉಳಿದವರನೆಲ್ಲೆಲ್ಲಿ ಚದರಿಸಿರ್ಪೆ!

ಕಿನ್ನರ— ನೌಕೆಯನು
ಕೊಲ್ಲಿಯಲಿ ಕಟ್ಟಿಹೆನು: ನೀನಂದು ಗೌರಾಂಬೆ-
ಗಾಗೆಂದು ತಗ್ಗ್ವೂ ಗೊಂಡೆಗಳ ಕೊಯ್ಸ-
ವೆಡೆಯಲ್ಲಿ. ಉಳಿದ ಜನರೊಳು ಕೆಲರು ಕಲೆತು
ತಮ್ಮ ಮುಂದಿನ ಗತಿಯ ಚಿಂತಿಸುತಲಿಹರು.

ಭೈರವ— ಕಿನ್ನರಾ, ನೀನು ಕೈಂಕರ್ಯಮೂರ್ತಿಯೆ ದಿಟಂ!
ಪೇಳ್ದುದನೆಲ್ಲಮುಂ ಬಿಡದೆ ಬೆಸಕೆಯ್ದೆ. ಆದರೆ
ಮಾಳ್ಪ ಕಜ್ಜವದಿನ್ನುಮಿನಿತೊಳದು. ಪೊಳ್ತೆನಿತು?

ಕಿನ್ನರ— ನಡುವಗಲು ದಾಂಟಿಹುದು—(ಮೇಲೆ ನೋಡಿ)
ಬೆಂಗದಿರನಾಗಲೇ
ಪಡುವಲೆಡೆಗೊಯ್ಯುತಿಹನಿಳಿವ ಪೊಂದೇರಂ.

ಭೈರವ— ಬೈಗುಗೆಂಪನು ಚೆಲ್ಲಿ ಸಂಜೆವೆಣ್ಣಿನಿಯನಂ
ಬೀಳ್ಕೊಳ್ವ ಮುನ್ನಮೆಯೆ ನಮ್ಮ ಕಜ್ಜವನಿಂದು
ಕೊನೆಗಾಣಿಸಲೆ ಬೇಕು.

ಕಿನ್ನರ— ಇನ್ನುಮಿರ್ಪುದೆ ಕಜ್ಜಂ?
ನೀನಂದು ಬಾಸಕೊಟ್ಟಿಹೆಯಲ್ಲ! ಎನ್ನೊಡೆಯ
ಎನಗೆಂದು ಬಿಡುಗಡೆ?

ಭೈರವ— ಇದೇನಿದು ? ಇನಿತರೊಳೆ
ಅಲಸಿಕೆಯೆ ?

ಕಿನ್ನರ— ಎನಗೆ ಬಿಡುಗಡೆ ಎಂದು, ಜೀಯ ?

ಭೈರವ— (ದರ್ಪದಿಂದ) ತೆಪ್ಪಗಿರು ! ಕೆಲಸ ಮುಗಿಯುವ ಮುನ್ನ
ಬಿಡುಗಡೆಯ
ಮಾತೆತ್ತದಿರು !

ಕಿನ್ನರ— (ಭಯದಿಂದ) ಜೀಯ, ದೈನ್ಯದಿಂ ಬೇಡುವೆನು !
ಕೈಮುಗಿದು ಬೇಡುವೆನು. ನೀನೊರೆದ ಕಾರ್ಯಗಳಂ
ತಪ್ಪದೆಯೆ ಮಾಡಿದೆನು. ಪುಸಿಯಾಡಲಿಲ್ಲ ;
ನುಸುಳಿಲ್ಲ. ಗೊಣಗುಡದೆ, ಬೇಸರದೆ ಸೇವಿಸಿದೆ.
ಒಂದು ಸಂವತ್ಸರದಿ ಬಿಡುಗಡೆಯ ನೀಡುವೆನು
ಎಂದೊರೆದೆ. ಕಳೆದುವಾಗಳೆ ಎರಡು ವರ್ಷಗಳು !
ಇನ್ನೆವರಂ ಬಿಡುಗಡೆಯು ದೊರತಿಲ್ಲ.

ಭೈರವ— ಮರೆತೆಯೇಂ ?
ಇನಿತರೊಳೆ ಮರೆತೆಯೇಂ ? ಎಂತಪ್ಪ ನರಕದಿಂ
ನರಕಯಾತನೆಯಿಂದ ನಿನ್ನನಾನುದ್ಧರಿಸಿ
ಪೊರೆದಿರ್ಪೆನೆಂಬುದನು ?

ಕಿನ್ನರ— ಇಲ್ಲ, ಮರೆತಿಲ್ಲ !

ಭೈರವ— ಮರೆತಿರ್ಪೆ ! ಮುನ್ನೀರ್ಗಳಂ ಸುತ್ತಿ, ಚಳಿಯ ನೆಲೆ-
ವೀಡಪ್ಪ ಧ್ರುವಗಳೊಳು ತಿರುಗುವುದು ; ಮೇಣ್
ಬುವಿಯ ಬಸಿರಿನೊಳು ಸಂಚಾರ ಮಾಡುವುದು ;
ಇವುಗಳನೆ ಕಟ್ಟುಜ್ಜುಗಗಳೆಂದು ಕೆಲೆಯುತಿಹೆಯಾ ನೀನು ?

ಕಿನ್ನರ— ಇಲ್ಲ, ನಾನಂತೊರೆಯೆ.

ಭೈರವ— ಪುಸಿಯುಸಿರ್ವೆಯ ದುರುಳ ?
'ಶನಿ'ವೆಸರ ಮುದುಕಿಯಾದಾ ಮಂತ್ರವಾದಿನಿಯ
ಮರೆತೆಯೇಂ ? ಮುದಿತನದ ಮಚ್ಚರದಿ, ಮುದಿತನದ
ಸಿಗ್ಗಿನಲಿ ಮಾರಿಯಾದಾ 'ಶನಿ'ಯ ಮರೆತೆಯೇಂ ?

ಕಿನ್ನರ— ಇಲ್ಲ, ಜೀಯ ಮರೆತಿಲ್ಲ.

ಭೈರವ— ಮರೆತಿರುವೆ! ಅವಳೆಲ್ಲಿ
ಜನಿಸಿದಳು ಹೇಳೆನಗೆ? ಮಾತಾಡು!

ಕಿನ್ನರ— ಮಲೆಯಾಳ!

ಭೈರವ— ಮಲೆಯಾಳವೋ? ತಿಂಗಳಿಗೊಮ್ಮೆ ನಿನಗದರ
ನೆನಪನೀಯಲೆ ಬೇಕು. ಇಲ್ಲದಿರೆ, ಕೃತಘ್ನ!
ನೀನದನು ಮರೆಯುವೆ. ಆ 'ಶನಿ'ಯು ಮಲೆಯಾಳ
ದೇಶದಲಿ ಕೇಳಬಾರದ ಹೇಳಬಾರದ
ಮಂತ್ರ ಮಾಟಗಳನು ಮಾಡಿ, ಜನರನು ಕೆಡಿಸಿ
ಎಲ್ಲೆ ಪಾರಾಗಿಲ್ಲಿಗೈತಂದಳು; ಏತಕೆನೆ,
ಕೊಲಲೆಳಸಿದೊಡೆ ಅವಳಳಿಯಲಿಲ್ಲ! ಇದು ದಿಟವೆ?

ಕಿನ್ನರ— ಅಹುದು ಎನ್ನೊಡೆಯ.

ಭೈರವ— ಮೆಳ್ಳೆಗಣ್ಣಿನ ಮಂತ್ರ-
ವಾದಿನಿಯನವಳ ಮಗನೊಡನಿಲ್ಲಿಗೆಳೆತಂದು,
ಪ್ರತಿಮಂತ್ರವಾದಿಗಳ ಬಲದಿಂದ, ನಾವಿಕರಾ
'ಶನಿ'ಯನೀ ದ್ವೀಪದಲಿ ಬಿಸುಟು ಹಿಂತಿರುಗಿದರು.
ಡಿಂಗರಿಗ! ಕಿನ್ನರಾ! ನೀನಾಕೆಯ ಗುಲಾಮ-
ನಾಗಿದ್ದೆ ಎಂದೆನಗೆ ನೀನೆ ಹೇಳಿರುವೆ.
ಪಾಪಿಯಾದವಳಾಣತಿಯನೆಸಗಲಾರದಿರೆ
ಶುದ್ಧಾತ್ಮನಹ ನೀನು, ಶಕ್ತಿಯಲಿ ನಿನ್ನನುಂ
ಮೀರಿರ್ದ ದುಷ್ಟಾತ್ಮಗಳ ಬಲದಿ, ತವಿಯದಿಹ
ಸಿಟ್ಟಿನಿಂದಾ ಮಂತ್ರವಾದಿನಿಯು, ನಿನ್ನನೊಂ-
ದಾಲದ ಮರದ ಗಬ್ಬದೊಳಗಿಡಿಕಿ, ಸೆರೆಗೈದು,
ಶಪಿಸಿದಳು. ನೀನಲ್ಲಿ ಹನ್ನೆರಡು ವರುಷಗಳ
ಪರಿಯಂತ ನೋವಿನಲಿ ನರಳುತ್ತ, ಹೊರಳುತ್ತ,
ಬೇನೆಯಲಿ ಬೇಯುತ್ತ, ಬಿಡುಗಡೆಯ ಬಯಸುತ್ತ,

ಬಿಡಿಪರನು ಕರೆಯುತ್ತ, ಕೊರಗುತ್ತ ಸೊರಗುತಿರ್ದೆ.
ಅನಿತರೊಳೆ ಆ ಮಾಟಗಾತಿಯುು ಜವನೂರ್ಗೆ
ಚಾರಿದಳು. ನೀನಾಗ ನೂರಾರು ಸಂಕಟಗಳ
ತೆರದಿಂದೆ ಬರಿದೆಯೊರಲುತಲಿದ್ದೆ. ದ್ವೀಪದಲಿ
'ಶನಿ'ಯು ಕರು 'ಶನಿಶಕ್ತಿ'ಯಲ್ಲದೆಯೆ ಬೇರೊಬ್ಬ-
ರಿರಲಿಲ್ಲ.

ಕಿನ್ನರ— ಅಹುದೊಡೆಯ, ಕೆಟ್ಟ ರಕ್ಕಸಿಯ ಮಗನಾ
ಗೂನು ಬೆನ್ನಿನ, ಗುಜ್ಜುಗೊರಲಿನ, ಗಿಡ್ಡದೇಹದ,
ಅಡ್ಡಮೂಗಿನ, ಮೆಳ್ಳೆಗಣ್ಣಿನ, ಡೊಳ್ಳುಹೊಟ್ಟೆಯ
'ಶನಿಶಕ್ತಿ'!

ಭೈರವ— ಅಹುದದುವೆ ಶನಿಶಕ್ತಿ. ಎನ್ನ
ದಾಸ್ಯದಲಿ ನವೆಯುುತಿಹನು. ನಾನೇಸನುಸುರಲಿ!
ನಿನ್ನಾ ಬೇನೆಗಳ,ನೀನರಿಯೆಯಾ ಹೇಳು?
ನೀ ನರಳ್ವುದ ಕೇಳಿ ತೋಳಗಳು ಚೀರಿದುವು;
ಕರಡಿಗಳು ಕೂಗಿದುವು!—ತಾನು ಮಾಡಿದ ಸೆರೆಯ
ಬಾಗಿಲನು ತಾ ತೆರೆಯಲರಿಯದಿಹ ಬೋನಿನಲಿ
ನಿನ್ನನಿಡುಕಿರ್ದಳಾ ಶನಿಯುು! ನಾನಿಲ್ಲಿ
ಗೈತರಲು, ನಿನ್ನ ಗೋಳನು ಕೇಳಿ, ಕನಿಕರದಿ,
ಮಂತ್ರಸಾಮರ್ಥ್ಯದಲಿ ಮರದ ಬಸಿರನು ಸಿಗಿದು
ಹೊರಗೆಡಹಿ ಬಿಡಿಸಿದೆನು ನಿನ್ನ.

ಕಿನ್ನರ— ಅದಕಿದೋ
ಅಡಿಗೆರಗುವೆನು ಜೀಯ! (ಅಡ್ಡಬೀಳುವನು)

ಭೈರವ— ನೀನಿನ್ನು ಗೊಣಗಿದೊಡೆ
ಮರಳಿ ಆಲದ ಬಸಿರ ಬಾಯ್ದೆರೆಸಿ ಇಡುವೆನು.
ಹನ್ನೆರಡು ಮಾಗಿಗಳು ಕಳೆವನ್ನೆಗಂ ನೀನು
ನರಳುತಿರಬೇಕಲ್ಲಿ!

ಕಿನ್ನರ— ಬೇಡ, ಬೇಡ! ಎನ್ನೊಡೆಯ!
ನೀನೇನನುಸುರಿದೊಡೆ ತಪ್ಪದೆಯೆ ಬೆಸಕೆಯ್ವೆಂ.
ನಾ ನಿನ್ನ ಕಿಂಕರನು!

ಭೈರವ— ಅಂತೆಸಗು! ಇನ್ನೆರಡು
ದಿನಗಳೊಳೆ ಬಿಡುಗಡೆಯ ನೀಡುವೆನು.

ಕಿನ್ನರ— ನೀನೀಗ-
ಳೆನ್ನೊಡೆಯ! ನಿನ್ನ ಬೆಸನೇನರುಹು! ಪೋದಪೆನು.

ಭೈರವ— ಪೋಗು ನಡೆ. ಹೊಳೆಯ ದೇವತೆಯಂತೆ ವೇಷವನು
ಧರಿಸಿ, ಎನಗೋರ್ವಗಲ್ಲದೆಯೆ ಮತ್ತಾರ
ಕಂಗಳಿಗು ಕಾಣದ ನಿಧಾನದಲಿ ವೇಷವನು
ತಳೆದು, ಮೇಲಿಲ್ಲಿಗೈತರು; ಬೇಗ ನಡೆ. (ಕಿನ್ನರನು
ಹೋಗುವನು.)

[ಭೈರವನಾಯಕನು ಮುದ್ದು ದನಿಯಿಂದ]

ಏಳು, ಮಗಳೇ ಏಳು; ಸಾಲ್ಗುವಿಹಾಯಾಸರಂ!
ಎದ್ದೇಳು! (ಗೌರಾಂಬೆಯು ಕಣ್ಣುಜ್ಜಿಕೊಂಡು ಏಳುತ್ತ)

ಗೌರಾಂಬೆ— ನಿನ್ನ ಕತೆಯನು ಕೇಳುತಲ್ಲಿಯೇ ನಿದ್ರಿಸಿದೆ.

ಭೈರವ— ಮೇಲೇಳು! ಶನಿಶಕ್ತಿಯಿರ್ಪೆಡೆಗೆ ತೆರಳುವಂ.
ಆ ಕುಬ್ಜನಾವೊರಟನೇನುಜ್ಜುಗಂಗೈವನೋ
ನೋಡುವಂ!

ಗೌರಾಂಬೆ— ಅತಿನೀಚನವಂ ತಾತ; ಅಮಂಗಳಂ!
ಅವನ ಮುಸುಡಂ ಕಂಡರೆನಗಾಗದು.

ಭೈರವ— ಈಗಳೆಮಗವನಿಲ್ಲದಾಗದು ಎಲೆ ಮಗಳೆ,
ಬೆಂಕೆಯಂ ಪೊತ್ತಿಪನು; ಕಾಷ್ಟವಂ ತಂದಪನು.
ಬೇಹ ಕಜ್ಜಗಳನಿತುವಂ ಮಾಳ್ಪನು—(ಕೂಗುವನು)
ಏ! ಗುಲಾಮ!
ಶನಿಶಕ್ತಿ! ಕೆಸರ್ಮಣ್ಣೆ! ಮಾತಾಡು!

ಶನಿಶಕ್ತಿ— (ಒಳಗಿನಿಂದ) ಕಟ್ಟಿಗೆ ಒಳಗೆ ಬೇಕಾದಷ್ಟಿದೆ!

ಭೈರವ— ಹೊರಗೆ ಬಾರಾ ಇಲ್ಲಿ; ಇತರ ಕಾರ್ಯಗಳೊಳವು.
ಬೇಗ ಬಾರಾ, ಗೂಬೆ! ಬರ್ಪೆಯೊ? ಬರ್ಪುದೋ?

[ಕಿನ್ನರನು ಹೊಳೆಯ ದೇವತೆಯಾಗಿ ಬರುವನು.]

ಏಂ ಚೆಲ್ವಿನಾಕಾರಂ! ಕಿನ್ನರಾ ಬಳಿಗೆ ಬಾ!

(ಕಿವಿಯಲಾಡುವನು.)

ಕಿನ್ನರ— ಪೇಳ್ದಿಲ್ಲಮಂ ಬಿಡದೆ ಕೈಗೂಡಿಪೆಂ! (ಹೋಗುವನು)

ಭೈರವ— ಎಲವೋ ದುರಾತ್ಮ, ಬರುವೆಯೋ? ಇಲ್ಲವೋ?

[ವಿಕಾರಾಕೃತಿಯ ಶನಿಶಕ್ತಿಯು ಹೆಜ್ಜೆಯಮೇಲೆ ಹೆಜ್ಜೆಯಿಡುತ್ತ ಸೋಮಾರಿತನದಿಂದ ಬಾಯಿಗೆ ಬಂದಂತೆ ಶಪಿಸುತ್ತ ಬರುವನು]

ಶನಿಶಕ್ತಿ— ಎನ್ನ ಜನನಿಯ ಮಂತ್ರಗಳ್ಪೆತ್ತ ಮರುಳ್ಗ-
ಳೆಲ್ಲರುಂ ನಿಮ್ಮಗಳ ಪೀಡಿಸಲಿ! ಕಾಡಿಸಲಿ!
ನಿಮ್ಮಿರ್ವರೆರ್ದೆಗಳ್ಗೆ ಬರಸಿಡಿಲ್ ಬಡಿಯಲಿ!

ಭೈರವ— ಇಂದಿನಿರುಳೆಯೆ ನಿನ್ನ ಪಕ್ಕೆಲುಬು ನುಚ್ಚುನೂ-
ರಪ್ಪಂತೆ ನಕ್ತಂಚರಿಗಳೆಲ್ಲ ಹರಕೆಗೈಗೆ!
ಅಂತರ ಬೆಂತರಗಳು ಭೂತ ಬೇತಾಳಗಳು
ರಾತ್ರಿ ನಿನ್ನಂ ನುಚ್ಚುಗೈವಂತೊರೆಯುವೆಂ!

ಶನಿಶಕ್ತಿ— ನಾನು ಇವನನ್ನವನು ತಿನ್ನಬೇಕಂತೆ!
ನಾನೇನನುಂಡರೂ ಅದಿವನ ಕೂಳಂತೆ!
ನನ್ನ ತಾಯಿಯ ನೆಲಂ, ನನ್ನದೀ ದ್ವೀಪಂ!
ನಿನ್ನದೆಂತಪ್ಪುದೋ? ಮೊದಲಿಲ್ಲಿಗೈತಂದ
ಕಾಲದಲಿ ಎನಿತು ಗೌರವದಿಂದಲೆನ್ನ ಕಾ-
ಣುತಲಿದ್ದೆ! ತಲೆಸವರಿ, ಮುದ್ದಿಸಿ ಮರುಳ್ಮಾಡಿ,
ನನ್ನನೀಗತಿಗೀಗ ತಂದಿರುವೆ. ಆಗಳುಣ್ಣಲು
ಹಣ್ಗಳನು ಕೊಡುತಿದ್ದೆ; ಈಗ ಮಣ್ಣನು ಕೊಡುವೆ!
ಹಗಲಾವುದಿರುಳಾವುದೆಂಬುದನು ನನಗಾಗ

ಬೋಧಿಸಿದೆ. ಬಿಸಿಗದಿರ ಚಳಿಗದಿರರಾರೆಂಬ
ನನ್ನಿಯುನು ತಿಳಿಸಿದೆ. ನಿನಗಾನು ಮರುಳಾಗಿ
ತಿಳಿನೀರ ಬುಗ್ಗೆಗಳ ತೋರಿದೆನು. ಮಧುರತರ
ಫಲವೀವ ಮರಗಳನು ತೋರಿದೆನು. ರಮಣೀಯ
ದೃಶ್ಯಗಳ ಕಾಣಿಸಿದೆ.—ಸರ್ಪಗಳು, ಸಿಂಹಗಳು,
ತೋಳಗಳು, ರೋಗಗಳು, ಹಾವು ಚೇಳುಗಳೆಲ್ಲ
ನನ್ನ ತಾಯಿಯ ಮಾಯೆಯಿಂದುದಿಸಿ ನಿಮ್ಮಗಳ
ಭಕ್ಷಿಸಲಿ! —ಅರಸನಾಗಿದ್ದಾನು ನಿಮಗೀಗ
ಆಳಾಗಬೇಕೆ? ಎನಗಿರಲರೆಯ ಪೊಟರೆ;
ನಿಮಗಾದರಾ ಗುಹೆಯ ಮಂದಿರವು!

ಭೈರವ— ಚಿಃ ದುಷ್ಟ!
ಸನ್ನೆ ಸಾಲದು, ನಿನಗೆ ದೊಣ್ಣೆಯೇ ಬೇಕು.
ಬೆಂಕಿಗಲ್ಲದೆ ಲೋಹ ತಂಪಿಗದು ಮಣಿಯುವುದೆ?
ಪುಡಿಗಿಂತ ಕಡೆಯಪ್ಪ ನಿನಗೆ ನಾನೆನಿತು
ದಯೆ ತೋರಿದೆನು! ನೀಚ, ಪಾಪದಿಂದೊಗೆತಂದ
ಪಾಪಿ, ಉಪಕಾರವೇನೆಂಬುದನು ನೀನರಿಯೆ!
ಕರುಣೆಯಿಂ ನಿನಗೆನಿತೊ ಬಿಜ್ಜೆಗಳನೊರೆದೆ;
ಮಿಗಗಳಂತೊರಲುತಿರ್ದವಗೆ ನುಡಿಗಳನಿತ್ತೆ;
ಕಗ್ಗಲ್ಲಿನರೆಯಮೇಲ್ ಮಳೆಗರೆದ ತೆರನಾಯ್ತು!
ನೀನೊಂದನುಂ ಕಲಿಯದಿರಲು ಮಳ್ಗಿಪ ಬದಲು
ಕಲ್ಪೊಟರೆಯಿಲ್ಲಿಟ್ಟು ಪೊರೆದಿರ್ಪೆ.

ಶನಿಶಕ್ತಿ— ನುಡಿವುದನು
ಎನಗಿತ್ತೆ; ಬಯ್ಗುಳವೆ ನಿನಗೆ ಗುರುದಕ್ಷಿಣೆಯು!
ನಿನ್ನ ನುಡಿ ಹಾಳಾಗ! ನಿನಗೆ ಸಾವಾಗ!

ಭೈರವ— ಚಿಃ ತೊಲಗು ಎಲೆ ನೀಚ! ಕಟ್ಟಿಗೆಯ ಕೊಂಡು ಬಾ;
ನಡೆ, ಬೇಗ! ಬೇಗ ಬಾ, ಮಾಳ್ಪ ಕಜ್ಜಗಳೊಳವು!
ಮಚ್ಚರದಿ ಮರುಗತಿಹೆಯೇಂ, ದುರುಳ? ತಳುವಿದರೆ,

ಎನ್ನಾಣತಿಯನೆಸಗದಿರೆ ನಿನ್ನೆಲುಬುಗಳಲಿ
ಬಲ್ಬೇನೆವೊಳೆಯುಂ ಪರಿಸಿ ನರಳಿಸುವೆ!
ನಿನ್ನ ಗೋಳನು ಕೇಳಿ ಬನದ ಮಿಗಗಳು ಕೂಡ
ಬೆದರಿ ಕಂಪಿಸುವ ತೆರದಿ ಮಾಡುವೆನು!

ಶನಿಶಕ್ತಿ— ನಿನ್ನ ದಮ್ಮಯ್ಯಾ! ಅಂತೆಸಗದಿರು, ಜೀಯ!
(ಸ್ವಗತ) ಎನ್ನಳವಂ ಮೀರಿರ್ಪುದಿವನ ಮಂತ್ರದ ಬಲಂ
ಬೆಸವೇಳ್ದವೊಲಿರೆ ಲೇಸು! ಎನ್ನ ದೇವತೆ ಶನಿಯೆ
ಬೆದರುತಿರೆ, ನಾನಳುಕಲತಿಶಯವೆ?

ಭೈರವ— ಹೋಗು ನಡೆ!
ತೊಲಗಾಚೆ! (ಶನಿಶಕ್ತಿ ತೆರಳುವನು.)

[ಕಿನ್ನರನು ಇತರರಿಗೆ ಅದೃಶ್ಯನಾಗಿ ಕುಣಿಯುತ್ತ ಹಾಡುತ್ತ ಬರುವನು. ಶಿವನಾಯಕನು ಅವನ ಹಿಂದೆಯೇ ಬರುವನು.]

ಕಿನ್ನರ— (ಹಾಡು)
ತಳಿತಿಹ ತರುಗಳ ತಣ್ಣೆಳಲಲ್ಲಿ
ಚೆಲ್ವಿನ ಚೆಲ್ವೆಣ್ಣಿಹಳಿಲ್ಲಿ!
ಮುದ್ದಿಸಲೊಲಿ ಬಾ, ಚುಂಬಿಸಿ ನಲಿ ಬಾ,
ನಲಿನಲಿಯುವ ತಣ್ಣೆಲರಲ್ಲಿ!
ಸಳನಳಿಸುವ ಹೊಸ ಹಸುರಿಹುದಿಲ್ಲಿ!
ಕಿನ್ನರಿಯರ ಸುರಗಾಯನವಿಲ್ಲಿ!

ಶಿವನಾಯಕ—ಎತ್ತಣಿಂದೈತರ್ಪುದೀ ಗಗನದಿಂಚರಂ?
ಸಗ್ಗದಿಂದವತರಿಪುದೋ? ಬುವಿಯಿನೇಳುವುದೊ?
ನಾನರಿಯೆ. (ಆಲಿಸಿ) ಗಾಯನವು ನಿಂತಿಹುದು—ಆವುದೋ
ದ್ವೀಪದಧಿದೇವತೆಯು ಹಾಡುತಿದೆ. ತೀರದಲಿ
ಕುಳಿತು ನಾನೆನ್ನ ತಂದೆಯ ದುರ್ಗತಿಯ ನೆನೆದು
ಕಂಬನಿಯ ಸೂಸುತಿರೆ, ಬೀಣೆಯಿನಿದನಿಯಂತೆ
ಮಧುರ ಮೋಹನವಾದ ಸವಿಗೊರಲಿನಿಂಚರವು
ಮಳೆಗಾಳಿ ಹೊಳೆಗಳನು ಜೋಗುಳದಿ ಮಲಗಿಸುತ
ಎನ್ನೆದೆಯ ಸಂತವಿಸಿ ಶಾಂತಿಯನು ತುಂಬುತ್ತ

ಒಯ್ಯೊಯ್ಯನೆಲರಿಸಲಿ ತೇಲಿಬಂದುದು, ಎನ್ನ
ಕಿವಿದೆರೆಗೆ! ಇಂಚರವನನುಸರಿಸುತ್ತಿತರೆ
ಮೆಲ್ಲಮೆಲ್ಲನೆ ಎನ್ನನೆಳೆದಿಲ್ಲಿಗೊಯ್ದಿರ್ಪುದು:—
ಆದರದು ನಿಂತಿಹುದು! —ಇಲ್ಲ! ಮರಳಿ ಬರುತಿಹುದು!

ಕಿನ್ನರ— (ಹಾಡುವನು)

ಕಡಲಿನ ಕಾಣದ ಪಾತಾಳದಲಿ
ತಂದೆಯು ಮಲಗಿಹನಾಳದಲಿ!
ಹವಳಗಳಾಗಿಹವೆಲುಬುಗಳೆಲ್ಲ;
ಮುತ್ತುಗಳಾದುವು ಕಣ್ಣುಗಳು!
ಮೊದಲಿನ ಮಾನವ ರೂಪವನೀಗಿ
ಹೊಳೆಹೊಳೆವನು ನವರತ್ನಗಳಾಗಿ!

ಶಿವ— ಮೆಯ್ಯಿಲಿದನಿಯೆನ್ನ ತಂದೆಯ ಮರಣವನೆ
ನುಡಿಯುತಿದೆ. ಮಾನವರ ಕೊರಲದನಿಯಲ್ಲವಿದು.
ತಿರೆಯಿಂದಲೇಳುತಿಹ ಸರವಲ್ಲ; ಬಾನಿನಿಂ-
ದಿಳಿಯುತಿದೆ.

ಭೈರವ— ಅಲರಂಚಿನಿಂ ಸಮೆದ ಕಣ್ಣುಗಳ
ಜವನಿಕೆಯ ಮೇಲೆತ್ತಿ ನೋಡಮ್ಮ. ನಿನಗೇನು
ಕಾಣುತಿದೆ ಹೇಳು.

ಗೌರಾಂಬೆ— ಅದೇನದು? ದೇವತೆಯೆ?
ಶಿವ ಶಿವಾ! ಸುತ್ತಲೂ ನೋಡುತಿಹುದೆಂತುಟು!
ಸೊಬಗಿನಾಕಾರವದು ದೇವತೆಯೆ ದಿಟವು!

ಭೈರವ— ಇಲ್ಲ; ನಮ್ಮಂತೆ ಅದು ತಿನ್ನುವುದು, ಮಲಗುವುದು;
ನಮ್ಮಂತೆ ತಿರುಗುವುದು, ನುಡಿವುದು, ನೋಡುವುದು.
ಮಗಳೆ, ನೀನೋಡುವೀ ಸುಂದರನು ಮುಳುಗಿದಾ
ದೋಣಿಯೊಳಗಿದ್ದವನು. ಶೋಕದಿಂದವನ ಮೊಗ-
ಗುಂದಿಹುದು. ಸೊಬಗಿಂಗೆ ಅಳಲೆಂಬುದೆಯೆ ರುಜೆಯು?
ಅಂತಿದೆರ್ೊಡಮಿವಂ ಚೆಲ್ವನೆಂದೊರೆಯಲಹುದು.
ತನ್ನ ಸಂಗಾತಿಗಳನರಸಿ ಸಂಚರಿಸುತಿರ್ಪಂ.

ಗೌರಾಂಬಿ— ನಾನೀತನಂ ಅಮರನೆಂದೆಯೆ ಕರೆಯಲಾಸಿಪೆಂ.
ಇನಿತು ಸೊಬಗನು ತೋರ್ಪ ವಸ್ತುವನು ಬುವಿಯುಮೇ
ಲಾನು ಕಂಡರಿಯೆ.

ಭೈರವ— (ಸ್ವಗತ) ಪುಟ್ಟಿರ್ಪುದಿನಿವೇಟಂ!
ಎನ್ನೆದೆಯ ಬಯಕೆ ಕೈಗೂಡುವುದು—(ಕಿನ್ನರಗೆ) ಕಿನ್ನರಾ
ಇನ್ನೆರಡು ದಿನಗಳಲಿ ನಿನಗೆ ಬಿಡುಗಡೆಯುಂ.

ಶಿವ— (ಗೌರಾಂಬಿಯನು ಕಂಡು)
ನೀನಾರು ದೇವಿ? ಕಿನ್ನರರ ಗಾಯನದಿ
ನಿರುತಮಾನಂದದಿಂದೀ ಸಗ್ಗವನ್ನಾಳ್ವ
ದ್ವೀಪರಾಣಿಯೊ? ಮೇಣ್ ಬರ್ದಿಲ ನಾಡಿನಿಂ-
ದಿಳೆಗೆ ಇಳಿತಂದಿರ್ಪ ಅಚ್ಚರಿಯೊ? ಪೇಳು!

ಗೌರಾಂಬಿ— ನಾನು ದೇವತೆಯಲ್ಲ, ಮಾನವ ಕನ್ಯೆ.

ಶಿವ— ಏನಿದು? ಎನ್ನ ತಾಯ್ನುಡಿಯನಾಡುತಿಹಳು!
ನಾ ತಿರುಳ್ಗನ್ನಡವನಾಡುತಿರೆ, ಈ ತರಳೆ
ಸಿರಿಗನ್ನಡವನಾಡುವಳು!

ಭೈರವ— ಪೊಗಳ್ಕೆ ಇದೇಂ!
ನಗರದರಸಿದನು ಕೇಳ್ದೊಡೆ ಸುಮ್ಮನಾದಪನೆ?

ಶಿವ— ಏನಿದಚ್ಚರಿಯ ಮೇಲಚ್ಚರಿಯುಂ! ನೀನೆಂತು
ನಗರದೊಡೆಯನ ಬಲ್ಲೆ?—ನಾನಾಡಿದೀನುಡಿಯ-
ನವನಾಗಲೇ ಕೇಳಿಹನು. ಅದಕೆ ಮರುಗುತಿಹೆ.
ಈಗ ನಗರದ ನಾಯಕನು ನಾನೆ. ತಂದೆ ಬಿರು-
ಗಾಳಿಯಲಿ ಸಿಲ್ಕಿ ನೌಕೆಯುಂ ಮುಳುಗೆ ಮುಳುಗಿದನು?

ಗೌರಾಂಬಿ— ಅಯ್ಯೋ ಪಾಪಾ!

ಶಿವ— ಸಟೆಯಲ್ಲ; ಅನಿಬರುಂ ಮುಳುಗಿದರು, ಕೆಳದಿ
ನಾಯಕನು, ಜಯದೇವ ಮೊದಲಾದರೆಲ್ಲರುಂ!

ಭೈರವ— (ಸ್ವಗತ) ಕೆಳದಿಯ ನಾಯಕನೂ, ಅವನ ಮಗಳೂ ಸೇರಿ
ನಿನ್ನನಿಲ್ಲಿಯೆ ಸೆರೆಯೊಳಿಡಬಹುದು—ತರವಲ್ಲ—
ಕಣ್ಣುಕೂಡುವ ಮುನ್ನಮೆದೆಯೆರಡು ಕೂಡಿದುವು!—
(ಕಿನ್ನರಗೆ) ಇದಕಾಗಿ ಗಗನಚಾರಿಯೆ ನಿನಗೆ ಬಿಡುಗಡೆಯು!
(ಶಿವನಾಯಕಗೆ) ಯುವಕನೇ ಪೊಳ್ಳುಪುಸಿಯಿಂ
ಎನ್ನೊಳಾಡದಿರು!

ಗೌರಾಂಬಿ— ತಂದೆಯೇ ನಿಷ್ಕರುಣೆಯಿಂದಿಂತೇಕೆ ನುಡಿಯುತಿಹೆ?
ನಾನರಿತ ಪುರುಷರಲ್ಲಿವನೆ ಮೂರನೆಯವನು;
ಕಂಡು ನಾ ಬಿಸುಸುಯ್ದವರೊಳಿವನೆ ಮೊದಲಿಗನು.
ಅಕ್ಕರಿಂ ನುಡಿ, ತಂದೆ; ಎನಗಾಗಿ ಕೃಪೆದೋರು.

ಶಿವ— ತರಳೆಯೇ ನೀನಿನ್ನುಮವಿವಾಹಿತಳೆಯಾಗಿ,
ನಿನ್ನೊಲ್ಮೆ ಇತರರೆದೆಗಂಡಿರದ ಪಕ್ಷದಲಿ
ನಿನ್ನನಾನೆನ್ನರಸಿಯನ್ನಾಗಿ ಮಾಡುವೆನು.

ಭೈರವ— ಸಾಕು, ಸಾಕೀ ಬಣ್ಣದಾಲಾಪಂ!—(ಸ್ವಗತ)
ತರುಣ ತರುಣಿಯರಾಗಳೇ ಬೇಟದುರಳಿನಲಿ
ಸಿಲುಕಿಹರು. ಮೊತ್ತಮೊದಲನೆ ನೋಟದಿಂದುದಿಸಿ
ಬರ್ಪಾ ಬೇಟಮುಸ್ಥಿರಮೆಂದು ತಿಳಿದವರ
ಮತವಿಹುದು. ಸುಲಭದೊಳೆ ದೊರೆತುದಕೆ ಬೆಲೆಯಿರದು
ಎಂಬುವರು. ಅದಕಾಗಿ ಎಡರುಗಳ ತಂದೊಡ್ಡುವೆನು.—
(ಶಿವನಾಯಕಗೆ) ಯುವಕನೇ ನೀನೆನ್ನ ಸೆರೆಯಾಳು! ಇಲ್ಲದ
ಸಲ್ಲದ ಬಿರುದುಗಳನೊರೆಯದಿರು. ಶತ್ರುಗಳ
ಬೇಹುಗಾರನು ನೀನು; ನಾನಿಲ್ಲಿಗರಸು.

ಶಿವ— ನಗರದರಸನು ನಾನು ಶಿವರಾಯನೆಂದು ತಿಳಿ.

ಗೌರಾಂಬಿ— ಪಾವನಮಂದಿರದೊಳು ಪಾಪಗಳು ಜೀವಿಸವು.
ಶಾಪಗಳ್ಗೀತೆರದ ಗುಡಿಯಿರ್ಪುದಾದೊಡಂ
ಪುಣ್ಯತಾನಲ್ಲಿ ನೆಲೆಗೊಳ್ಳಲೆಳಸುವುದು.

ಭೈರವ— (ಶಿವನಿಗೆ)

ಬಾ ನನ್ನ ಹಿಂದೆ—(ಗೌರಾಂಬೆಗೆ) ನೀನು ಮಾತಾಡದಿರು
ರಾಜದ್ರೋಹಿಯು ಅವನು—(ಶಿವಗೆ) ನೋಡುತಿಹೆ ಏಕೆ, ಬಾ,
ನಿನ್ನ ಕೈಕಾಲುಗಳಿಗೆ ಕಬ್ಬಿಣ್ಣ ತೊಡರುಗಳ
ತೊಡಿಸಿ, ಕಳಕಸು ಕುಡಿಸಿ, ಹುಲ್ಲು ಸೊಪ್ಪನು ತಿನಿಸಿ,
ಬೇರುಬಿತ್ತ್ರವನುಣಿಸಿ, ಹೊರೆಯನು ಹೇರಿ ದಣಿಸಿ,—
ನಿಂತಿರ್ಪೆಯೇಕೆ ಬಾ!

ಶಿವ— ಬರಲೊಲ್ಲೆ, ನಿನ್ನಾಣೆಯಂ
ಪಳಿವೆಂ. ನಿನ್ನ ಬಲವೆನ್ನ ಬಲವಂ ಮೀರ್ದೊಡೆ
ಆಗಳಾಂ ನಿನ್ನ ಹಿಂಬಾಲಿಪೆಂ. [ಖಡ್ಗವನ್ನು ಒರೆಯಿಂದ ಕಳಚು
ವನು. ಭೈರವನ ಸಂವನನದಿಂದ ಮಂತ್ರಮುಗ್ಧನಾಗಿ ನಿಲ್ಲುವನು.]

ಗೌರಾಂಬೆ— ತಂದೆಯೇ,
ನೋಯಿಸದಿರೀತನಂ. ಸುಂದರಂ, ಕೋಮಲಂ,
ಕಣ್ಗಮತಿ ಚೆಲುವಂ!

ಭೈರವ— ಏಂ ಪೇಳ್ದೆ? ಎನ್ನಡಿಯೆ
ಎನಗೆ ನೀತಿಯನೊರೆಯುವಂತಿಹುದು— (ಶಿವಗೆ)
ರಾಜದ್ರೋಹಿ,
ಕೂರಸಿಯನೊರೆಗಾಣಿಸೊಡನೆ, ತಡಮಾಡದಿರ್!
ಬೀರನಂತಭಿನಯಿಸಿ ಇರಿಯಲಾರದ ನೀನು
ಚಿತ್ತ್ರದೊಳ್ ಕಡುಪಾಪಿ ಎಂಬುದಂ ತೋರುತಿರ್ಪೆ!
ಮನಬಂದರೀ ಕಿರಿಯ ಕಡ್ಡಿಯಿಂದಲೆ ನಿನ್ನ
ಕೃಪಾಣಮಂ ಕಿತ್ತೆಸೆದು ನಿನ್ನನಿಳೆಗೊರಗಿಪೆಂ!

ಗೌರಾಂಬೆ— ಬೇಡ, ಬೇಡ! ಬೇಡಿದಪೆನಪ್ಪಾ!

ಭೈರವ— ನೀನೆನ್ನ ಬಳಿಸಾರದಿರು, ದೂರವಿರು!

ಗೌರಾಂಬೆ— ಕರುಣಿಸೈ ತಂದೆ, ನಾನವಗೆ ಹೊಣೆಯಾದಪೆನು.

ಭೈರವ— ಸುಮ್ಮನಿರು, ನೀನಿನ್ನು ಗಳಪಿದರೆ ಮುನಿಯುವೆನು.
ಬೇಹುಗಾರಗೆ ನೀನುಂ ಸಹಕಾರಿಯಾದಪೆಯೇಂ?

ತಿರೆಯೊಳೀತನಿಗಿಂತಲುಂ ಚೆಲ್ವರೆನಿತಿಲ್ಲ?
ಶನಿಶಕ್ತಿಗಿವನ ಹೋಲಿಸಿ ನೀನು ಮರುಳಾದೆ!
ಸುಂದರರನೇಕರಿಗೆ ಇವನೆಯೆ ಶನಿಶಕ್ತಿ!
ಅವರಿವಂಗೆ ದೇವತೆಗಳಾದಪರು!

ಗೌರಾಂಬೆ— ಎನ್ನೊಲ್ಮೆಗತಿಕಾಂಕ್ಷೆಯಿಲ್ಲ; ಮೋಣಿವಗಿಂತ
ಚೆನ್ನಿಗನ ಪಡೆಯಬೇಕೆಂಬಾಸೆಯುಂ ಇರದು.

ಭೈರವ— (ಶಿವಗೆ) ಹೇಳಿದಂತಾಚರಿಸು; ಬಾ ಹಿಂದೆ. ಎಲ್ಲಿಹುದೊ
ನಿನ್ನದಟು! ಅಬಲೆಯಂತಬಲನಾಗಿಹೆ ಈಗ!

ಶಿವ— ಅಹುದಹುದು, ಎನಗೆಲ್ಲ ಕನಸಾಗಿ ತೋರುತಿದೆ.
ನನ್ನ ಸೆರೆಮನೆಯಿಂದ ದಿನಕೊಂದು ಸಾರಿ
ಈ ಚೆಲ್ವೆಯನು ನೋಳ್ಪ ಸೌಭಾಗ್ಯವೊಂದಿರಲು,
ನನ್ನ ತಂದೆಯ ಮರಣ, ನನ್ನ ಗೆಳೆಯರ ಸಾವು,
ನನ್ನ ದುರ್ಗತಿ, ನನ್ನ ಅವಮಾನ, ಬಿರುನುಡಿಗ-
ಳಾಡುತಿಹ ಈತನ ದುರಭಿಮಾನ, ಎಲ್ಲವನು
ಸಂತಸದಿ ಸಹಿಸುವೆನು. ಬಿತ್ತರದ ತಿರೆಯೆಲ್ಲ
ಸ್ವಾತಂತ್ರ್ಯಕಿರಲಿ; ನನಗೀಕೆಯಂ ತೋರ್ಪೊಂದು
ಕಿಟಕಿಯಿರಲದುವೆ ಸಾಕು!

ಭೈರವ— (ಸ್ವಗತ) ಇಚ್ಛೆ ನೆರವೇರುತಿದೆ! (ಶಿವನಾಯಕಗೆ)
ಹುಂ, ಹೊರಡು! (ಕಿನ್ನರಗೆ) ಕಿನ್ನರಾ ನೀನೊಳ್ಳಿತೆಸಗಿರ್ಪೆ!
(ಮಾತಾಡುವರು)

ಗೌರಾಂಬೆ— (ಶಿವಗೆ) ಪ್ರಿಯತಮ, ಎನ್ನೆದೆಯ ಚೆನ್ನಿಗನೆ, ಬೆದರದಿರು.
ಎನ್ನ ತಂದೆಯ ಬಗೆಯು ಬೇರೆಯಾಗಿಹುದಿಂದು.
ಮಾತಿನಲಿ ಕಠಿನತೆಯ ತೋರಿದರು, ಎದೆಯಲಿ
ಕೋಮಲತೆಯಡಗಿಹುದು. ಇಂತಾವಗಂ ತಂದೆ
ಕೋಪಗೊಂಡಿರಲಿಲ್ಲ. ಇಂದಿಂತಿರ್ಪನೇಕೊ?

ಭೈರವ— (ಕಿನ್ನರಗೆ) ಮಲೆಯ ತಂಗಾಳಿಗಳ ತೆರದಿ ಸಂಚರಿಸು.
ಆದೊಡಂ ನಾಂ ಪೇಳ್ವುದೆಲ್ಲಮಂ ಮಾಳ್ಪುದು.
ತಪ್ಪದೆಯೆ ಮಾಳ್ಪುದು.

ಕಿನ್ನರ— ಒಂದಿನಿತು ಕುಂದಿರದೆ
ಬೆಸಕೆಯ್ವೆಂ!

ಭೈರವ— (ಶಿವಗೆ) ಬಾ, ನಿನ್ನ ಸೆರೆಮನೆಗೆ—(ಗೌರಾಂಬೆಗೆ) ಮಾತಾಡ-
ದಿರು ನೀನು!

[ಎಲ್ಲರೂ ತೆರಳುವರು.]

# ದೃಶ್ಯ ೩

[ದ್ವೀಪದ ಮತ್ತೊಂದು ಭಾಗ. ರಣನಾಯಕ, ರಂಗನಾಯಕ, ರುದ್ರನಾಯಕ, ಜಯದೇವ—ಇವರುಗಳು ಬಂಡೆಯಮೇಲೆ ಕುಳಿತು ಮಾತಾಡುತ್ತಿರುವರು.]

ಜಯದೇವ— ರಣನಾಯಕರೆ ಶಾಂತಿಯನು ಹೊಂದಿ, ವೀರರಿಗೆ
ದುಃಖವು ತರವಲ್ಲ. ನಾವೆಲ್ಲರುಳಿದಿಹುದೆ
ಸಂತಸದ ಸಂಗತಿಯುಂ. ಬಾಳಿನೊಳು ದುಃಖಗಳು
ಬರ್ಪುದೇಂ ಪೊಸತಲ್ಲ. ಆತ್ಮವಚ್ಯುತವೆಂದು
ಶಾಸ್ತ್ರಗಳು ಸಾರುತಿರೆ, ಶಿವನಾಯಕರ ಜೀವ
ಸಗ್ಗದೊಳು ಸೊಗದಿ ಬಾಳುತಲಿಹುದು. ಸಂದೇಹ-
ಮೇಕಿದಕೆ?

ರಣನಾಯಕ— ಜಯದೇವ, ದಯಮಾಡಿ ಸುಮ್ಮನಿರು.
(ಚಿಂತಿಸುವನು)

ರುದ್ರನಾಯಕ—ಜಯದೇವನುಪದೇಶವೆನೆ ಬೇಯ್ವ ಕಂಗಳಿಗೆ
ಕಾರವನೂಡಿದಂತೆ!

ರಂಗನಾಯಕ— ಬಣಗುವೇದಾಂತವನು
ನೀನೆಲ್ಲಿ ಕಲಿತೆಯೋ? ಸರ್ವದಾ ನಿನ್ನ ಬಣ
ಉಪದೇಶವನು ಕೇಳಿ ಕೇಳಿ ಕಿವಿಗಳು ಜಿಡ್ಡು
ಗಟ್ಟಿಹವು. ತಲೆ ಚಿಟ್ಟು ಹಿಡಿದುಹೋಗಿರ್ಪುದು.

ಜಯ— ಅಹುದಹುದು; ರೋಗಿಗಳಿಗಾವಗಂ ಸಿಹಿಯೆ
ಕಹಿಯಂತೆ!

ರುದ್ರ— ಭೋಗಗಳ ಪಡೆಯಲಾರದ ಜನರು
ಯೋಗವನು ನಟಿಸುವರು!

ರಣ— ಹೊಳೆಯ ಪಾಲಾದೆಯಾ
ಮಗನೆ? ಎನ್ನ ಬಾಳ್ಕೆಯ ಕಣ್ಣನಿರಿದೆಯಾ?
ಬದುಕಿನೊಳ್ ಕತ್ತಲೆಯ ಕವಿಸಿದೆಯಾ? ನಿನ್ನಬ್ಬೆ
ಬೆಸಗೊಂಡೊಡಾನೇನಂ ಪೇಳಲಿ? ನಿನ್ನನುಜೆ

ಬಂದಂಕದಲಿ ಕುಳಿತು 'ಎನ್ನಣ್ಣನೆಲ್ಲಿ?' ಎಂದು
ಕೇಳುವಾ ಸಮಯದಲಿ ನಾನೆಂತು ಸೈರಿಸಲಿ?
ನಿನ್ನ ಪ್ರಜೆಗಳ್ ಬಂದು 'ಎಮ್ಮ ಚಿಕ್ಕರಸರೆಲ್ಲಿ?'
ಎಂದು ಬೇಡಲು ಆವ ನಾಲಗೆಯೊಳೊರೆಯುಲಿ?
ಹಾ ಕಂದ! ಮುದಿಯ ತಂದೆಯುಸಗಲಿ ಪೋದೆಯೇಂ!

ರುದ್ರ— ನಾಯಕರೆ, ತಮ್ಮ ಮಗನಿನ್ನುಮುಳಿದಿರಬಹುದು.
ತೆರೆಗಳಂ ಬಗೆಬಗೆದು ತಲೆಯ ಮೇಗಡೆಗೆತ್ತಿ,
ಚಿಮ್ಮಿ ಮುಂದಕೆ, ಈಜಿ ಸಾಗುತಿದ್ದುದ ಕಂಡೆ.
ಶಕ್ತಿಯೊಳ್, ಯುಕ್ತಿಯೊಳ್, ಜಾಣ್ಮೆಯೊಳ್,
ತಾಳ್ಮೆಯೊಳ್
ಎಮ್ಮೆಲ್ಲರಂ ಮೀರಿದಾತಂ ಮುಳುಗಿದಪನೆ?
ಆತನೆಲ್ಲಿಯೊ ಕುಳಿತು ಸೊಗದೊಳಿಹನೆಂಬುದೆಯೆ
ಎನ್ನ ನಂಬುಗೆ! ಎನ್ನ ಆಸೆ!

ರಣ— ಇಲ್ಲ, ಇನ್ನೆಲ್ಲಿ
ಅವನಿಹನು? ಅವನು ಹೋದನು, ಇನ್ನು ಬಾರನು.

ರಂಗ— ಆ ಪುಸಿಗ ಜೋಯಿಸನು ಹೊರಡುವಾಗೇನೊದರಿ
ಕಳುಹಿದನು! ಬಾಯಲ್ಲಿ ಹರಸುತ್ತ ಮನದಲ್ಲಿ
ಶಪಿಸಿದನೆ? ನಾನೆಂದೆ:—ಮುಂಗಾರ ಸಮಯವಿದು
ಪೆರ್ದೊರೆಯ ನಂಬಲಾಗದು ಎಂದು. ನೀರು
ಬೆಂಕಿಗಳ ನಂಬುವರೆ? ನಾನೊರೆದುದಂ ಪುಡಿಗೆ
ಕಡೆಯಂದೆಣಿಸಿದರು. ಈಗಳೋ—ಮುಳುಗಿದುದು
ದೋಣಿ; ನಾವಿನಿಬರೆಮ್ಮ ಸಯ್ಪಿನ ಬಲದಿ
ಬದುಕಿದೆವು. ವೀರ ಶಿವನಾಯಕನೊ ಹೊಳೆಯು
ಹೆಮ್ಮಾನಿಗುಣಿಸಾದನು!

ರಣ— ಬದುಕಿಲ್ಲವೆಂಬೆಯೇಂ? (ಶೋಕಿಸುವನು)

ಜಯ— ರಂಗನಾಯಕರೆ,
ಆವ ಪೊಳ್ತಿನೊಳಾವು ದೊರೆಯಬೇಕೆಂಬುದಿಯೆ

ನಿಮಗೆ ತಿಳಿಯದು. ಪುಣ್ಣಿಗೆಣ್ಣಿಯಂ ಬಳಿಯುವರೆ?
ಮೋಣದನು ಇರಿಯುವರೆ? ಜೀಯ, ರಣನಾಯಕರೆ,

ರಣ— ಬೇಡ, ಮಾತಾಡದಿರು—ಮೌನದಲಿ ಶಾಂತಿಯಿದೆ—

ಜಯ— ಅದೋ, ದೂರದಿಂದೈತಪ್ಪ ಸಂಗೀತವಂ ಕೇಳಿ!
ಇಲ್ಲಿ ಅರೆಗಳು ಕೂಡ ಹಾಡುವುದನರಿತಿಹವು!
ಆಗಸದೊಳೆಲ್ಲಿಯುಂ ಗಾನಮಯಮಿಲ್ಲಿ!

(ಕಿನ್ನರನು ಅದೃಶ್ಯನಾಗಿ ಹಾಡುತ್ತಾ ಬರುವನು.)

ಕಿನ್ನರ— (ಹಾಡು) ಹಬ್ಬಿದಮಲೆಗಳ ಮೇಲಲೆದಾಡುವ ಮುಗಿಲುಗಳೆಬನ್ನಿ;
ಬನಬನದಲಿ ಚಿಮ್ಮುತ ನಲಿದಾಡುವ ಚಳಿಗಳೆ ಬನ್ನಿ!
ಮುಗಿಲಂಚಿನ ಕುಡಿಮಿಂಚಿನ ನವಕಾಂಚನವನು ತೊಟ್ಟು,
ನವನೀರದ ಸುರಚಾಪದ ಪೊಂದಾರದ ಉಡೆಯುಟ್ಟು
ಬಹುವೇಗದಿ ಬಿರುಗಾಳಿಯೆ ಬಾರೈ!
ಕಡಲೂರಿಗೆ ನಾವ್ ಪೋಗುವ ಬಾರೈ!
ನೀಂ ಗೆಲಿದಿಹ ಪೊಸ ಜೀವರ ತಾರೈ!
ನಮ್ಮೂರಿಗೆ ಹೊಸ ದಾರಿಯ ತೋರೈ!

ಜಯ— ನನಗೇಕೊ ನಿದ್ದೆಬರುತಿಹುದು.

ರುದ್ರ— ನಡೆ, ಮಲಗು. (ಜಯದೇವ ಮಲಗುವನು.)

ರಣ— ನಿದ್ರಿಸಿದನವನೆಂತು ಶೀಘ್ರದೊಳೆ! ಎನಗುಂ
ಕಣ್ಣೆವೆಗಳೇಕೊ ಕೆಳಗೆಳೆಯುತಿವೆ.

ರಂಗ— ಮಲಗಣ್ಣಾ,
ಶೋಕದಲಿ ನಿದ್ದೆಬರುವುದೆ ವಿರಳ. ಬಂದಾಗ
ಮಲಗದಿರುವುದೆ ಕೇಡು! ನಿದ್ದೆಗೈದೊಡೆ ಶಾಂತಿ
ಲಭಿಸುವುದು.

ರುದ್ರ— ಅಂಗರಕ್ಷಣೆಗಾಗಿ ನಾವುಗಳು
ಕಾದಿರ್ಪೆವು. ನಾಯಕರೆ, ಮಲಗಿ ನಿರ್ಭಯದಿಂದ.

ರಣ— ಅಂತಕ್ಕೆ— ಏಂ ನಿದ್ದೆ! (ಮಲಗುವನು ; ಕಿನ್ನರ ಹೊರಡುವನು.)

2

ರಂಗ— ಇದೇನಿವರಿಗೀಸಿದ್ದೆ ?

ರುದ್ರ— ಈ ಹವದ ವೈವೆಯುದು.

ರಂಗ— ಹಾಗಾದರೆಮಗೇತಕಾನಿದ್ದೆ ಬಾರದಿದೆ ?
ಎನ್ನ ಕಂಗಳಲದರ ಸುಳಿವುವಿಲ್ಲ.

ರುದ್ರ— ಎನಗುಮಂತೆಯೆ ಇಹುದು.
ಮಾತಾಡಿಕೊಂಡಂತೆ ಸಿದ್ದೆಮಾಡಿದರಿವರು !
ಸಿಡಿಲು ಬಡಿದೊರಗಿದವರಂತೆ ಬಿದ್ದಿಹರು.
(ಸ್ವಲ್ಪ ಕುಹಕಾಲೋಚನೆ ಮಾಡಿ) ನಾಯಕರೆ.

ರಂಗ— ಏನು ?

ರುದ್ರ— ಇರಲಿಯುದನೀಗಳೊರೆಯೆ.

ರಂಗ— ಅದೇಕೆ ? ಪೇಳ್ವುದನೀಗಳೆ ಪೇಳಲದುವೆ ಲೇಸು.

ರುದ್ರ— (ರಂಗನಾಯಕನ ತಲೆಯುಕಡೆ ದುರುದುರನೆ ನೋಡುತ್ತ) ಇದೇನು !

ರಂಗ— ನಾಯುಕರೆ ನೀವೇನಂ ಕಂಡಿಂತುಟು ಬೆಚ್ಚಿಬೀಳುವಿರಿ ?

ರುದ್ರ— (ಕಣ್ಣುಜ್ಜಿಕೊಂಡು ಮತ್ತೆ ನೋಡುತ್ತ) ಇದೇನು ? ಯಾವ
ರಾಜನ ಮುಕುಟವಿದು ?

ರಂಗ— ಎಲ್ಲಿ ?

ರುದ್ರ— ಹಾ ! ರಣನಾಯುಕರ ಮಣಿಖಚಿತ ಮುಕುಟಂ !

ರಂಗ— ಇದೇನಿದು ನಾಯುಕರೆ ? ನಿಮಗುಂ ನಿದ್ದೆಯೊ ಏನು ?

ರುದ್ರ— ಹಾ ! ತಳಿಸುತಿಹುದೆಂತು ! ನಿಮಗದು ಕಾಣಿಸದೆ ?
ನಗರದರಸರ ಮುಕುಟಂ ! ನೋಡಲ್ಲಿ ! ನೋಡಲ್ಲಿ !
ಗಗನದಿಂದವತರಿಪ ಚಾರು ಸುರಚಾಪದೊಲು
ನಿಮ್ಮ ಮೇಲಿಳಿಯುತಿದೆ !

ರಂಗ— ಎಲ್ಲಿ ? ಎಲ್ಲಿ ? ನಾಕಾಣೆ !

ರುದ್ರ— ನೀವೇನು ಕುರುಡರೇ ?

ರಂಗ— ನೋಡಿದರೆ ಕಾಣಿಸದು.
ಕನಸು ಕಾಣುವಿರೇನು ? ಅಚ್ಚರಿಯು ! ಈ ನಿದ್ದೆ-
ಯಚ್ಚರಿಯು ! ನಡೆಯುತ್ತ, ನುಡಿಯುತ್ತ, ಚರಿಸುತ್ತ,
ಇಂತಪ್ಪ ಗಾಢನಿದ್ರೆಯೊಳಿರ್ಪುದಾಶ್ಚರ್ಯಂ! ಆಶ್ಚರ್ಯಂ?

ರುದ್ರ— ನಾಯಕರೆ,
ಕಣ್ಣಿಲ್ಲದಿರ್ದರುಂ ಕಲ್ಪನೆಯು ಕುರುಡಹುದೆ?
ಬುದ್ಧಿಯಿಲ್ಲದೆ ನೀವು ಹಾಳಾಗುವಿರಿ ! ಅಯ್ಯೋ !

ರಂಗ— ನಿಮ್ಮದಿದು ತಿರುಳು ತುಂಬಿರ್ಪ ಕನಸಿನಂತಿಹುದು !

ರುದ್ರ— ನಾಯಕರೆ, ಬರುಗನಸಲ್ಲ, ಎನ್ನ ದರ್ಶನಂ !
ಬಿಸದವಲ್ಲೆನ್ನ ನುಡಿ; ಕಿವಿಗೊಡುವಿರಾದೊಡೆ
ನೀವರಸರಾಗುವಿರಿ !

ರಂಗ— ಬೇಡ ! ಎನಗದು ಬೇಡ !

ರುದ್ರ— ನಗರದ ಸಿಂಹವಿಷ್ಟರಕೊಡೆಯರಪ್ಪಂತೆ
ಮಾಡುವೆಂ !

ರಂಗ— ಇನ್ನೊಮ್ಮೆ ನುಡಿಯದಿರಿ, ನಾಯಕರೆ !

ರುದ್ರ— ವೀರಪಾರ್ಥಿವರಾಗಿ, ನವಯುವಕರಾಗಿ ನೀವ್
ಬೆದರುವುದೆ? ನಾನಿಮಗೆ ನೆರವಾಗಿ ಬಂದಿರಲು
ನಿಮಗದೇತರ ಭಯಂ?

ರಂಗ— ನಾನೊಲ್ಲೆ ನಾನೊಲ್ಲೆಂ!

ರುದ್ರ— ವೀರಪುಂಗವ ರಂಗನಾಯಕರೆ,
ನಿಮ್ಮೆದೆಯ ನಾ ಬಲ್ಲೆ : ಒಳಗಿರ್ಪುದಾಕಾಂಕ್ಷೆ,
ತೋರಿಕೆಗೆ ಬೇಡೆಂಬುವಭಿನಯವು. ಹಂಗಿಸುತ
ನಿಮ್ಮ ಬಯಕೆಯ ನೀವೆ, ಮುಂದರಿಯಲಳುಕುವಿರಿ!
ದೊರೆತ ಸಮಯವ ಬಿಡಲು ಮರಳಿ ಬರುವುದೆ? ಹೇಳಿ!

ರಂಗ— ನಿಮ್ಮಾಸೆಯೆಂತಿರ್ಪುದೋ ಹೇಳಿ; ನೀವೆನ್ನ
ಮಂಗಳಾಕಾಂಕ್ಷಿಗಳು. ನಿಮ್ಮ ಸಲಹೆಗೆ ನಾನು
ಶರಣಾದೊಡೊಳ್ಳಿತಹುದು.

ರುದ್ರ— ನಾಯಕರೆ, ನೀವೆನ್ನಂ
ಸಾಮಾನ್ಯನೆಂದರಿಯದಿರಿ; ನರಕದೊಡೆಯನಿಗೆ
ಸಲಹೆಗಳನೀಯಲರಿವೆ! –ದೊರೆಯಮಗನುಳಿದಿಹನೆ?
ಯಾರು ಹೇಳುವ ಮಾತು ? ಯಾರು ನಂಬುವ ಮಾತು ?
ಅವನು ಮುಳುಗಿದುದು ಸುಳ್ಳಾದೊಡೆ, ಇವರಿಲ್ಲಿ
ಮಲಗಿಹುದೆ ಪುಸಿಯಹುದು.

ರಂಗ— ನನಗೆ ನೆಚ್ಚಿಲ್ಲ,
ಅವನು ಬದುಕಿಹನೆಂಬ ಮಾತಿನಲಿ.

ರುದ್ರ— ನೆಚ್ಚಿಲ್ಲ !
ನೆಚ್ಚು ! ನಿಮಗಿಹ ನೆಚ್ಚು ! ಕೆಚ್ಚೆದೆಯ ಬೀರನಿಗೆ
ನೆಚ್ಚು ತೊತ್ತಾಗುವಳು ! ಆ ಶಿವನಾಯಕನು
ಮಳುಗಿರ್ಪನೆಂಬಿರಾ ?

ರಂಗ— ಸಾಯದೆಯೆ ಮತ್ತೇನು ?

ರುದ್ರ— ಅವನು ಅಳಿದೊಡೆ ಮುಂದೆ ಯುವರಾಜನಾರಹನು ?
ನಗರದೊಡೆತನವಾರ್ಗೆ ?

ರಂಗ— ಸಿಂಗಣ್ಣನಾಯಕಗೆ !

ರುದ್ರ— ಆದರ ಬದಲೊಂದರೆಗೆ ಪಟ್ಟಕಟ್ಟಲು ಲೇಸು !
ಮಂಕನಿಗೆ ರಾಜ್ಯವೇ ? ಹಗಲಾವುದಿರುಳಾವು-
ದೆಂಬುದನೆ ತಿಳಿಯದವಗೇಕೆ ಪಟ್ಟದ ಪೆರ್ಮೆ ?

ರಂಗ— ನಿಮ್ಮೆದೆಯ ನಾನರಿಯಲಾರದಿಹೆ.

ರುದ್ರ— ಅಹಹಾ !
ಎನ್ನ ಬಗೆ ನಿಮಗಿರ್ದೊಡೆ!—ಎನಿತು ಮಲಗಿಹರಿವರು ?

ಶಯ್ಯೆಯಾಗಿರ್ಪರೆಗಳಂತೆವೋಲ್. ಮುನ್ನುಡಿಯು
ಎವ್ಮೇಳ್ಗಿಗೀ ನಿದ್ದೆ! ತಿಳಿಯಿತೇ?

ರಂಗ— ತಿಳಿದಂತೆ
ತೋರುತಿದೆ.

ರುದ್ರ— ನಿಮ್ಮ ಭಾಗ್ಯದ ಲಕ್ಷ್ಮಿ ಬಾಗಿಲಿಗೆ
ಬಂದಿಹಳು: ಒಳಗೆ ಕರೆವಿರೋ? ತಳ್ಳುವಿರೋ?

ರಂಗ— ನಿಮ್ಮಣ್ಣನನು ನೀವು ರಾಜ್ಯದಿಂದೋಡಿಸಿದಿ-
ರಲ್ಲವೇಂ?

ರುದ್ರ— ಅಹುದು, ಯುಕುತಿಯಿಂದೋಡಿಸಿದೆ.
ನೋಡೀಗಳೆಂತರಸನುಡುಗೆಗಳು ಸಿಂಗರಿಸು
ತಿಹವೆನ್ನ ರೂಪವನು! ಎನ್ನಣ್ಣನಾಳುಗಳು
ಅಂದಿರ್ದರೆನಗೆ ಎಣೆಯಾಗಿ. ನೋಡಿಂದು
ಅವರೆಲ್ಲರೆನ್ನ ಕಿಂಕರರಾಗಿ ಗೆಯ್ಯುತಿಹರು.

ರಂಗ— ಧರ್ಮವೆತ್ತಣ್ಗಾಯ್ತು? ಭೀಮ ಅರ್ಜುನರಂಥ
ಮೂರುಲೋಕದ ಗಂಡರುಂ ಕೂಡ ಧರ್ಮಜನ
ನುಡಿಗಳನು ವೇದವೆಂದೇ ತಿಳಿದು ಅವನಿತ್ತ
ಆಜ್ಞೆಯನು ಮೀರುತಿರಲಿಲ್ಲ. ಲಕ್ಷ್ಮಣನು
ಅಗ್ರಜನ ನೆಳಲಾಗಿ ಸೇವಿಸಿದನಣ್ಣನನು!

ರುದ್ರ— ಸಾಕು, ಸಾಕಿದು ರಂಗನಾಯಕರೆ; ನಿಮಗಾರು,
ಜಯದೇವನಿದನೆಲ್ಲ ತಿಳುಹಿದನೆ? ಧರ್ಮ!
ಧರ್ಮವೆಂಬುದು ಹೇಡಿಗಳ ಮರ್ಮ! ಕಬ್ಬಿಗರ
ಕಲ್ಪನೆಯ ಕತೆಗಳಲಿ ಹೇಳಿದಾ ತತ್ತ್ವಗಳ-
ನೀರಾಜಕೀಯದಲಿ ತರಬೇಡಿ; ಕತೆಗಳವು!
ನಮ್ಮದಿದ್ದು ಕತೆಯಲ್ಲ! ಧರ್ಮ ಸತ್ಯಗಳೆಲ್ಲ
ಮುದಿತನದ ಮಾತುಗಳು; ಕೆಚ್ಚೆದೆಯ ಜವ್ವನದ
ವೀರವಾಕ್ಯಗಳಲ್ಲ. ಮುದಿತನವಾವರಿಸಿ

ಬಂದಾ ಕಾಲದಲಿ, ನಾವೂ ಸನ್ನಿಯು ಕುರಿತು
ತಿಳಿಯದಿಹ ಮಕ್ಕಳಿಗೆ ಬುದ್ಧಿ ಹೇಳಿದರಾಯ್ತು!
ನೀವೇನು ಮಾಡುವಿರೊ ಅದೆ ನಿಮ್ಮ ಧರ್ಮ.
ಬೇರೆ ಧರ್ಮವದೆಲ್ಲಿ? ನಿದ್ರೆಯಲಿ ಮುಳುಗಿಹನು
ನಗರದರಸನು ಮಣ್ಣಿಗಿಂತಲುಂ ಮಣ್ಣಾಗಿ,
ಕಲ್ಲಿಗಿಂತಲು ತಾನೆ ಕಲ್ಲಾಗಿ. ಮಿಂಚುತಿಹ
ಎನ್ನ ಕೂರಸಿಯುವನ ಮುಂಡಮಂ ರುಂಡದಿಂ
ಬೇರ್ಕ್ಯೆದಕೂಡಲೇ ನೀವರಸರಾಗುವಿರಿ!

ರಂಗ— ಜನಪದದಪವಾದಂ?

ರುದ್ರ— ಹೊಳೆಯಲ್ಲಿ ಮುಳುಗಿದನು;
ಎಂದರಾಯ್ತೋಳಿ!

ರಂಗ— ಕತ್ತಿಯನು ಒರೆಗಳಚಿ
ನಾಯಕರೆ! ನಗರದರಸಗೆ ನೀವು ಸಲ್ಲಿಸುವ
ಕಪ್ಪವನು ನಿಲ್ಲಿಸುವೆ. ನೀವೆನ್ನ ನೇಹಿಗರು.

ರುದ್ರ— ನಾನು ರಣನಾಯಕನ ಕಡಿದೊಡನೆ, ನೀವು
ಜಯದೇವನಂ ತುಂಡುಗೈವುದು!—(ಕತ್ತಿಗಳನೆಳೆಯುವರು)

ರಂಗ— ಒಂದು ಮಾತಿಹುದು. (ಪಿಸುಮಾತು)

[ಅದೃಶ್ಯನಾಗಿ ಕಿನ್ನರನು ಬರುವನು]

ಕಿನ್ನರ— ದಿವ್ಯದೃಷ್ಟಿಯನಟ್ಟಿ ಎನ್ನೊಡೆಯನರಿತಿಹನು
ನಿನಗಂ ಮೇಣ್ ನಿನ್ನ ಗೆಳೆಯಂಗಂ ಬಂದಿರ್ಪ
ದುರ್ಗತಿಯ ಪರಿಯುಂ. ಎನ್ನನಟ್ಟಿದನಿಲ್ಲಿ-
ಗದಕಾಗಿ; ನಿಮ್ಮಿರ್ವರನ್ನೆಚ್ಚರಿಸಲೆಂದು.

[ಜಯದೇವನ ಕಿವಿಯಲ್ಲಿ ಹಾಡುವನು]

ಮಲಗಿರಲು ನೀವಿಂತು
ಸಾವಿಹುದು ಬಳಿ ನಿಂತು
ಹಸಿದು, ಬಾಯ್ದೆರೆದು;

ಜೀವನದೊಳಾಸೆಯಿರೆ
ಬಿಟ್ಟೇಳು ನಿದ್ದೆಯನು,
ಏಳು, ಮೇಲೇಳು !

ರುದ್ರ— ಇನ್ನು ತಡವಮಾಳ್ಪುದೇಕೆ?

ಜಯ— (ಎಚ್ಚೆತ್ತು ಗಾಬರಿಯಿಂದ) ಶಿವ ಶಿವಾ! ಶಿವ ಶಿವಾ!
ದೊರೆಯಂ ಕಾಪಾಡು! (ರುದ್ರ ರಂಗನಾಯಕರನ್ನು ನೋಡಿ)
ಏನಿದೇನಿದು? (ರಣನಾಯಕಗೆ) ಹೋ
ಎದ್ದೇಳು! ಎದ್ದೇಳು! (ರುದ್ರ ರಂಗನಾಯಕರಿಗೆ)
ಕತ್ತಿಗಳನೊರೆಗಳಚಿ
ನಿಂತಿರುವಿರೇಕೆ? ಬೆಚ್ಚುವಿರದೇಕಿಂತು?

ರಣ— (ಎಚ್ಚೆತ್ತು) ಏನು! ಏನು! ಏನು!

ರಂಗ— ನಾವಿಲ್ಲಿ ನಿಂತಿರಲು, ನಿಮ್ಮ ಸಂರಕ್ಷಣೆಯ
ಕಾರ್ಯದಲ್ಲಿಯೆ ತೊಡಗಿ ನಿಂತಿರಲು, ಬಳಿಯೊಳೇ
ಆನೆಗಳೊ, ಸಿಂಹಗಳೊ ಗರ್ಜಿಸಿದ ತೆರನಾಗಿ—
ಅದರಿಂದಲೇ ನೀವು ಎಚ್ಚೆತ್ತು ಕೂಗಿದುದು—
ಅಬ್ಬಬ್ಬಾ! ಏಂ ಭಯಂಕರನಾದಂ! ಎನ್ನೆದೆಯು
ನಡನಡ ನಡುಗಿತು!

ರಣ— ಎನಗಾವ ನಿಡುದನಿಯು ಕೇಳ್ವುದಿಲ್ಲ.

ರುದ್ರ— ಅಬ್ಬಬ್ಬ! ಗಿರಿಗಳನು ನಡುಗಿಸುವ ಹೂಂಕಾರ!
ಭೂಕಂಪಮಂ ಗೈವ ಹರಿಕಂಠ ಗರ್ಜನೆ!
ಸಿಂಹಗಳೆ ಇರಬೇಕು!

ರಂಗ— ಮೇಣ್ ರಕ್ಕಸರೋ?

ರಣ— ಜಯದೇವ ನೀನುಂ ಕೇಳ್ದಿಯೇಂ?

ಜಯ— ಎನ್ನಾಣೆ, ಏನೊ ಮೊರೆದಂತಾಗಿ ಎಚ್ಚೆತ್ತು
ನಿಮ್ಮನುಂ ಎಚ್ಚರಿಸೆ ಕೂಗಿದೆನು. ಕಣ್ದೆರೆದು
ನೋಡಲ್ಕೆ ಕತ್ತಿಗಳನೊರೆಯಿಂದ ಹಿರಿದೆತ್ತಿ

ನಿಂತಿದ್ದರಿವರಿರ್ವರುಂ ಬೆಕ್ಕಸಂ ಬಡುತ.
ನಾವಿನ್ನು ಎಚ್ಚರಿಕೆಯಿಂದಿರ್ಪುದೇ ಲೇಸು!
ಇಲ್ಲಿಂದ ತೊಲಗುವಂ; ಕತ್ತಿಗಳನೆಳೆಯಿರಿ!

ರಣ— ಪೊರಡುವಂ. ಮಗನ ಗತಿ ಏನಾದುದೆಂಬುದಂ
ತಿಳಿಯುವಂ; ನಡೆಯಿಂ!

ಜಯ— ಆ ಬನದ ಮಿಗಗಳಿಂ-
ದಾತನಂ ಪರಶಿವಂ ರಕ್ಷಿಸುಗೆ! ಅವನಿನ್ನುಂ
ಬದುಕಿರ್ಪಂ! ಆಂ ಬಲ್ಲೆಂ!

ರಣ— ಬನ್ನಿಂ! ಬೇಗ ನಡೆಯಿಂ!

(ಹೊರಡುವರು)

ಕಿನ್ನರ— ಭೈರವನಿಗಿದನೆಲ್ಲ ತಿಳುಹುವೆಸು. ದೊರೆಯೆ,
ಹೋಗು, ಪುತ್ರನ ಹುಡುಕು. ನಿನಗಕ್ಕೆ ಮಂಗಳಂ!

## ದೃಶ್ಯ ೪

[ದ್ವೀಪದ ಮತ್ತೊಂದು ಭಾಗ. ಶನಿಶಕ್ತಿಯು ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ಬರುವನು. ಗುಡುಗಿನ ಸದ್ದು ಕೇಳಿಸುವುದು.]

**ಶನಿಶಕ್ತಿ—** ಭೂಮಿಯೊಳು ಅಲೆಯುತಿಹ ರುಜೆಗಳನಿತುಮುಂ:
ಚಳುಕುಳುಕು, ತೊನ್ನು, ಹೊಟ್ಟೆಯನೋವು, ಕಣ್ಬೇನೆ,
ಕಿವಿನೋವು, ತಲೆನೋವು, ನಾಯ್ಗೆಮ್ಮು, ಬದಿಶೂಲೆ,
ಕಾಲೊಡಕ, ವಾತಪಿತ್ತಗಳೆಲ್ಲ ಭೈರವಸ
ಸೆರೆಗೈದು ಪೀಡಿಸುಗೆ! ಬುವಿಯೊಳಿಹ ಸರ್ವ ಕ್ರಿಮಿ
ಕೀಟಗಳು: ಹೇನುಗಳು, ಕೂರೆಗಳು, ತಿಗಣೆಗಳು,
ಜಿಗಣೆಗಳು, ಸೊಳ್ಳೆಗಳು ಗಿಳ್ಳೆಗಳು ಎಲ್ಲ
ಅವನ ನೆತ್ತರವೀಂಟಿ ಸಂತಸದಿ ಜೀವಿಸುಗೆ!—
ಅವನ ಕಿನ್ನರದೂತರಿದನಾಲಿಸುತಲಿರಬಹುದು!
ಆಲಿಸುಗೆ, ಬೈಯುವೆನು! ಆಲಿಸುಗೆ, ಶಪಿಸುವೆನು!
ಅವನಾಜ್ಞೆಯಿಲ್ಲದೆಯೆ ಅವುಗಳೇನನು ಮಾಡ-
ಲಾರವು.— ಹೋದುದಕೆ, ಬಂದುದಕೆ; ಕುಳಿತುದಕೆ,
ನಿಂತುದಕೆ 'ಥೂ' ಬಿಡುವನಾಕುನ್ನಿಗಳನೆನ್ನಮೇಲೆ.
ಮಂಗನಂದದಿ ಕೆಲವು ಪಲ್ಕಿರಿದು ಪರಿಹಾಸ್ಯ
ಮಾಡುವುವು. ಕಣೆಹಂದಿಗಳ ತೆರದಿ ಕಾಲಸಡು
ನುಸಿಯುವುವು ಹಾದಿಯಲಿ ಹೋಗುತಿರೆ. ಹೆಮ್ಮರದ
ತುಂಡುಗಳ ರೂಪವನು ಹೊಂದಿ ದಾರಿಯೊಳಡ್ಡ
ಬೀಳುವುವು, ನಾಮುಗ್ಗರಿಸುವಂತೆ. ಒಮ್ಮೊಮ್ಮೆ
ಕೆಸರಿನಲಿ ತಳ್ಳುವುವು. ಬಟ್ಟೆಗೆಡಿಪವು ಒಮ್ಮೆ.
ಹಾವುಗಳ ಹೋಲುತ್ತ ಅಂಗಾಂಗಗಳ ಬಿಗಿದು
ಬುಸ್ಸೆಂದು ಬೆದರಿಸುತ ಹುಚ್ಚುಹಿಡಿಸುವುವು.—
ಹೋ! ಅಗೋ! ಆಗಲೇ ಅಲ್ಲೊಂದು ಬರುತಿಹುದು.

ಕಟ್ಟಿಗೆಯ ತರಲು ತಳುವಿದ ತಪ್ಪಿಗಾಗೊಬ್ಬ
ಕಿನ್ನರನನಟ್ಟಿಹನು ನನ್ನ ಪೀಡಿಸಲೆಂದು.
ಏಗೈವೆನೀಗಳಾನರಿಯೆಂ! ಇರಲಿ
ಸತ್ತವೊಲು ಮಲಗುವೆನು! ಶನಿಯು ದಯೆಯಿಂದವನು
ನನ್ನನವಲೋಕಿಸದೆ ಮುಂದರಿಯಬಹುದು.

[ಕಂಬಳಿ ಮುಚ್ಚಿಕೊಂಡು ಮಲಗುವನು. ತ್ರಿಶಂಕು ಬರುವನು.]

ತ್ರಿಶಂಕು— (ಸುತ್ತ ನೋಡಿ) ಏನು ಬಟ್ಟಬಯಲಿದು! ನೆಳಲೀಯಲೊಂದು ಗಿಡವಿಲ್ಲ, ಮರವಿಲ್ಲ. ಹುದುಗಿಕೊಳ್ಳಲು ಒಂದು ಬಂಡೆ ಕೂಡ ಇಲ್ಲ. (ಮೇಲೆ ನೋಡಿ) ಇದೇನಿದು? ಗಗನದಲಿ ಮತ್ತೆ ಕರ್ಮುಗಿಲು ಕವಿಯುತಿದೆ. ಸುಯ್ಯೆಂದು ಮರಳಿ ಬೀಸ ತೊಡಗಿದೆ ಬಿರುಗಾಳಿ. ಆ ಕರಿಯ ಮೋಡ, ಕರಿಯುರೆಯ ಹೋಲುತಿಹ ಆ ದೊಡ್ಡ ಮೋಡ ಇನ್ನೇನು ಈಗಲೋ ಆಗಲೋ ಗುಂಡುಗಳ ಮಳೆಗರೆವ ಸಿಡಿಮದ್ದಿನುಂಡೆಯಂತೆ ಹುಬ್ಬುಗಂಟಿಕ್ಕಿಕೊಂಡಿದೆ. ಗುಡುಗಿದರೆ ಎಲ್ಲಿ ಅಡಗುವುದೊ ನಾನರಿಯೆ. ನನ್ನ ಈ ಮುದಿತಲೆಯ ಮೇಲೆಯೇ ಬೀಳಬೇಕೆಂದು, ಹಾರೈಸಿ ಕಣ್ಣಿಟ್ಟು ಹವಣಿಸಿ ಕಾಯ್ದುಕೊಂಡಿರುವ ಆ ಮಳೆಗಲ್ಲು ಉದುರತೊಡಗಿದರೆ ಎಲ್ಲಿ ಮೈಮರಸಿಕೊಳ್ಳುವುದೊ ನಾನರಿಯೆ—(ಎರಡು ಹೆಜ್ಜೆ ನಡೆದು ನೆಲದ ಕಡೆ ನೋಡಿ) ಇದೇನಿದು?—ಕಲ್ಲೋ? ಮರವೋ? ಮಾನೋ? ಮನುಷ್ಯನೋ? ಸತ್ತಿದೆಯೋ? ಬದುಕಿದೆಯೊ!—ಮಾನೆಂದೇ ತೋರುತ್ತದೆ.—(ಮೂಸಿ ನೋಡಿ) ಹೌದು, ಅದೇ ವಾಸನೆ! ಹಳೆಯ ಕಾಲದ ಮಾನೆಂದು ತೋರುತ್ತದೆ. ರಾಮಾಯಣ ಕಾಲದ್ದಿರಬೇಕು! ಬಹಳ ವಿಚಿತ್ರವಾಗಿದೆ. ಇದು ನಮ್ಮೂರಿನಲ್ಲಿ ಸಿಕ್ಕಿದ್ದರೆ ಏನು ಹಣ ಸಂಪಾದನೆ ಮಾಡುತ್ತಿದ್ದೆ! ತಿರುಕನೂ ಕೂಡ ಕಾಸು ತೆತ್ತು ನೋಡಲು ಬರುತ್ತಿದ್ದ!—ಓಹೋ; ಮನುಷ್ಯರ ಕಾಲುಗಳಿವೆ! — ಓಹೋ ರೆಕ್ಕೆಗಳು ತೋಳುಗಳಂತಿವೆ!—

(ಮುಟ್ಟಿ ನೋಡಿ) ಓಹೋ ಬೆಚ್ಚಗಿದೆ!— ಓಹೋ ಗಡ್ಡ ಬೇರೆ!—ಅಯ್ಯೊ ನಾನೆಂತಹ ದಡ್ಡ! ಏಾನಲ್ಲ ಇದು. ಯಾವನೋ ಈ ದ್ವೀಪದ ನಿವಾಸಿಯು ಸಿಡಿಲಿನಿಂದ ಈಗ ತಾನೇ ಸತ್ತು ಬಿದ್ದಿದ್ದಾನೆ! (ಗುಡುಗುವುದು) ಅಯ್ಯಯೋ ಕೆಟ್ಟೆನಲ್ಲಾ! ಮತ್ತೆ ಪ್ರಾರಂಭವಾಯಿತು ಆ ಮಾರಿ ಮಳೆ!—ಇವನ ಕಂಬಳಿಯೊಳಗೆ ಹುದುಗುವುದೆ ಲೇಸು! ಅಡಗಲು ಇನ್ನೆಲ್ಲಿಯೂ ತಾವಿಲ್ಲ! ಏನು ಮಾಡುವುದು? ಹೊಸ ಊರು, ಹೊಸ ಪರಿಚಯು, ಅಯ್ಯೋ ನನ್ನ ಹಣೆ ಬರಹವೇ! ಎಲ್ಲಿಯೋ ಎಂಥೆಂಥವರ ಜೊತೆಯಲ್ಲಿಯೋ ಮಲಗಬೇಕಾಗಿದೆ! ಹೆಣದೊಡನೆ ಮಲಗುವುದಾದರೂ ಹೇಗೆ? ಅದರಲ್ಲಿಯೂ ಬದುಕಿರುವಾಗ! (ಗುಡುಗು) ಇನ್ನೇನು ಮಾಡುವುದು! ಮಾರಿಮಳೆ ಮುಗಿವತನಕ ಇಲ್ಲಿಯೇ ಹುದುಗಿರುವೆನು!

[ಶನಿಶಕ್ತಿಯು ಕಂಬಳಿಯೊಳಗೆ ಹುದುಗುವನು. ಬೀಮಣನು ಹೆಂಡದ ಪಾತ್ರೆಯನ್ನು ಹಿಡಿದು ಹಾಡುತ್ತ ಪ್ರವೇಶಿಸುವನು.]

ಬೀಮಣ— (ಹಾಡು)

ದೋಣಿಯನೇರೆನು, ದೋಣಿಯನೇರೆನು,
ದೋಣಿಯನೇರೆನು ನಾನಿನ್ನು—

ರಾಗವೇ ಸರಿಯಾಗಿಲ್ಲ. ಮಸಣದಲ್ಲಿ ಅತ್ತಂತಿದೆ. ಕೊರಲನ್ನಿನಿತು ಸರಿಪಡಿಸಿಕೊಳ್ಳುವೆನು. (ಕುಡಿಯುವನು)

(ಹಾಡು) ಬನದಲ್ಲಿ ನನಗೊಂದು ಹೆಣ್ಣು ಸಿಕ್ಕಿತು, ಹೆಣ್ಣು!
ಹೆಣ್ಣಂದರೇನೆಂಬೆ ಸುಲಿದ ಬಾಳೆಯಹಣ್ಣು!
ಹಣ್ಣು ನೇರಿಲಹಣ್ಣು ಹೆಣ್ಣ ಹೊಳೆಯುವಕಣ್ಣು!
ಹೆಣ್ಣ ದೇಹದ ಬಣ್ಣ ಮಣ್ಣು, ಚಿನ್ನದ ಮಣ್ಣು!
ಅವಳ ಕೈಗಳ ದುಂಡು ಬೆಳೆದ ಬಾಳೆಯದಿಂಡು!
ಅವಳ ಕಾಲ್ಗಳ ಕಂಡು ಮುತ್ತುಕೊಟ್ಟೆನುಗಂಡು!
ಬನದಲ್ಲಿ ನನಗೊಂದು ಹೆಣ್ಣುಸಿಕ್ಕಿತು, ಹೆಣ್ಣು!
ಹೆಣ್ಣೆಂದರೇನೆಂಬೆ ಸುಲಿದ ಬಾಳೆಯಹಣ್ಣು!

ಇಂದೇಕೊ ಸಂಗೀತವೆ ಸರಿಯಾಗುವುದಿಲ್ಲ. ಹೊಳೆಯಲ್ಲಿ ಮುಳುಗಿ ಮಳೆಯಲ್ಲಿ ತೊಯ್ದು ಕಂಠ ಕೆಟ್ಟಿದೆಯೆಂದು ತೋರುತ್ತದೆ. ಸ್ವಲ್ಪ ಗಂಟಲು ಸರಿಮಾಡಿಕೊಳ್ಳುತ್ತೇನೆ.

(ಕುಡಿಯುವನು)

ಶನಿಶಕ್ತಿ— ಅಯ್ಯೋ—ಪೀಡಿಸಬೇಡ—ಅಯ್ಯೋ!

ಬೀಮಣ— ಓಹೋ! ಇದೇನು ಸಮಾಚಾರ? ಇಲ್ಲೇನು ದೆವ್ವಗಳಿವೆಯೋ?— ಓಹೋ ನನ್ನ ಮುಂದೆ ನಿಮ್ಮ ಆಟವೋ?— (ಕೆಳಗೆ ನೋಡಿ) ಓಹೋ, ನಿನ್ನ ನಾಲ್ಕು ಕಾಲುಗಳನ್ನು ಕಂಡು ಹೆದರಿಕೊಳ್ಳುವನಾಗಿದ್ದರೆ ಹೊಳೆಯಿಂದ ಮೇಲೆ ಬರುತ್ತಿದ್ದೆನೇ ಇಂದು? ಎರಡು ಕಾಲು ಸಾಲದೆ ನಾಲ್ಕು ಕಾಲಿನಮೇಲೆ ನಡೆಯುವ ನಿನಗೆ, ನಾನು, ಎರಡು ಕಾಲಿನ ವೀರ, ಹೆದರುವೆನೇ?

ಶನಿಶಕ್ತಿ— ಪಿಶಾಚ ಪೀಡಿಸುತ್ತಿದೆ—ಅಯ್ಯೋ!

ಬೀಮಣ— ಯಾವುದೋ ಚಳಿಜ್ವರ ಹಿಡಿದ ರಾಕ್ಷಸವಿರಬೇಕು. ಹಾಗಲ್ಲದಿದ್ದರೆ, ಇದರ ಮನೆ ಕಾಯುವಾಗ, ನನ್ನಂತೆಯೆ ಮಾತಾಡುವುದಂದರೇನು? ಅದರಲ್ಲಿಯೂ ಕನ್ನಡದಲ್ಲಿ? ಪಾಪ! ಚಳಿಯಿಂದ ಒರಲುತಿರಬಹುದು; ಸ್ವಲ್ಪ ಮದ್ದು ಹಿಂಡುವೆನು. ಇದನ್ನು ಹೇಗಾದರೂ ಮಾಡಿ ಪಳಗಿಸಿ ನಮ್ಮೂರಿಗೆ ತೆಗೆದುಕೊಂಡು ಹೋದರೆ ಚಕ್ರವರ್ತಿಯು ಕೂಡ ನನ್ನ ಮನೆಗೆ ಬರುವನು!

ಶನಿಶಕ್ತಿ— ದಮ್ಮಯ್ಯ! ಕಾಡಬೇಡ! ಇನ್ನುಮೇಲೆ ಬೇಗ ನೌದೆ ತರುವೆನು!—ಅಯ್ಯೊ!

ಬೀಮಣ— ಪಾಪ! ಪಿತ್ತ ನೆತ್ತಿಗೇರಿದೆ, ಚಳಿಯಿಂದ! ಅದರಿಂದಲೆ ಹುಚ್ಚುಹಿಡಿದಂತೆ ಕಿರಿಚುತ್ತಿದೆ. ಸ್ವಲ್ಪ ಈ ಸೋಮರಸ ಪಾನ ಮಾಡಿಸಿದರೆ ಒಡನೆಯೆ ಚಳಿಬಿಟ್ಟು ಪರಾರಿಯಾಗುವುದು. ಪಳಗಿಸಿಟ್ಟುಕೊಂಡರೆ ಲಾಭವಾದರೆ ನನಗೆ, ವೆಚ್ಚವಾದರೆ ನನ್ನೊಡೆಯನಿಗೆ!

**ಶನಿಶಕ್ತಿ—** ನಾನೆಲ್ಲ ಬಲ್ಲೆ! ನಿನ್ನ ಕೈಲಿ ಏನೂ ಸಾಗುವುದಿಲ್ಲೆಂದು! ಸಾಗುವುದಾಗಿದ್ದರೆ ಹೀಗೇಕೆ ನಡುಗುತಿದ್ದೆ.—ನನಗೆ ಗೊತ್ತು, ಎಲ್ಲ ಭೈರವನ ಕುತಂತ್ರ!

**ಬೀಮಣ—** ಎಲ್ಲಿ, ಬಾಯಿತೆರೆ ಕೊತ್ತಿ! ಚಳಿ ಹೋಗುವಂತೆ ಮದ್ದು ಹಿಂಡುವೆನು. ಹುಂ, ಬಾಯಿತೆರೆ! ನಡುಕವೆಲ್ಲ ನಿಂತೇ ಹೋಗುವುದು. ಹಾಗೆ, ನನ್ನ ಮಾತುಕೇಳು. (**ಶನಿಶಕ್ತಿಗೆ ಹೆಂಡ ಕುಡಿಸುವನು**) ಅಯ್ಯೋ ಮಂಕು ರಕ್ಕಸಾ, ನಿನಗೆ ಹಿತ ವರಾರೆಂಬದೇ ತಿಳಿಯದಲ್ಲಾ! ಹುಂ, ಬಾಯಿತೆರೆ!

**ತ್ರಿಶಂಕು—** (**ಸ್ವಗತ**) ಇದೇನು? ಬೀಮಣನ ದನಿಯಂತೆಯೆ ಕೇಳುತಿದೆ—ಅಯ್ಯೋ ಅದೆಲ್ಲಿಯ ಮಾತು? ಯಾವುದೋ ಪಿಶಾಚವಿರಬೇಕು—(**ಗಟ್ಟಿಯಾಗಿ**) ಅಯ್ಯೋ ದಮ್ಮಯ್ಯ! ಕಾಪಾಡು!

**ಬೀಮಣ—** ನಾಲ್ಕು ಕಾಲು, ಎರಡು ಕಂಠ!— ಇದೆಂತಹ ರಕ್ಕಸ! ಈ ಕಡೆಯ ಬಾಯಿಂದ ಒಳ್ಳೆಯ ಮಾತಾಡುತಿದೆ. ಆ ಕಡೆಯ ಬಾಯಿಂದ ಬರಿಯ ಹೊಲ್ಲಮೆಯೆ ಹೊರಹೊಮ್ಮುತಿದೆ. ಈ ಪಾತ್ರೆಯ ಮಧುವೆಲ್ಲ ಮುಗಿದರೂ ಸರಿಯೆ; ಇದರ ಚಳಿ ಬಿಡಿಸಲೇಬೇಕು.—ಎಲ್ಲಿ? ಬಾಯಿತೆರೆ. (**ಶನಿಶಕ್ತಿಗೆ ಕುಡಿಸುವನು**) ಹುಂ; ಸಾಕು. ಈ ಬಾಯಿಗೆ ಸಾಕು! ಉಳಿದುದನು ಆ ಬಾಯಿಗೆ ಹೊಯ್ಯುವೆನು.

**ತ್ರಿಶಂಕು—** ಬೀಮಣಾ!

**ಬೀಮಣ—** ಆ ಬಾಯಿಂದ ನನ್ನನ್ನೇ ಕರೆಯುತಿದೆ! ನನ್ನ ಹೆಸರು ಇದಕೆಂತು ಗೊತ್ತು?—ಅಯ್ಯೋ ದೇವರೆ! ರಾಕ್ಷಸವಲ್ಲ; ಇದಾವುದೋ ದುಷ್ಟ ಪಿಶಾಚವಿರಬೇಕು? ಸಾಕಪ್ಪ, ನನಗಿದರ ಗೊಡವೆಯೇ ಬೇಡ. (**ದೂರ ಸರಿದು**) ಮದ್ದು ಹೊಯ್ಯಲು ಒಂದು ಉದ್ದವಾದ ಸೌಟು ಕೂಡ ಇಲ್ಲ!

**ತ್ರಿಶಂಕು—** ಬೀಮಣಾ! ನೀನು ಬೀಮಣನೆ ಹೌದಾದರೆ, ಸಟ್ಟುಗದಾಣೆಗೂ ನೀನು ಕೈತವದ ಮರುಳಲ್ಲದಿರೆ ನನ್ನನ್ನು ಮುಟ್ಟಿ

ಮಾತಾಡು. ನಾನು ತ್ರಿಶಂಕು. ಹೆದರಬೇಡ; ನಿನ್ನ ಪ್ರಾಣಸ್ನೇಹಿತ ತ್ರಿಶಂಕು, ನಾನು.

ಬೀಮಣ— ನೀನು ದಿಟವಾಗಿಯೂ ತ್ರಿಶಂಕುವೆ ಹೌದಾದರೆ ಹೊರಗೆ ಬಾ; ಈ ಕುಳ್ಳ ಕಾಲುಗಳನ್ನು ಹಿಡಿದೆಳೆಯುವೆ. (ಬಗ್ಗಿ ನೋಡಿ) ಅಯ್ಯೋ ಚತುಷ್ಪಾದಿ! ಈ ನಾಲ್ಕು ಕಾಲುಗಳಲ್ಲಿ ತ್ರಿಶಂಕುವಿನ ಕಾಲ್ಗಳಾವುವು? ಯಾವುದಾದರೂ ಆಗಲಿ. ದೇವರೇ ಗತಿ. ಕಣ್ಣುಮುಚ್ಚಿಕೊಂಡು ಎಳೆದೇ ಬಿಡುವೆನು! (ಕಣ್ಣುಮುಚ್ಚಿಕೊಂಡು ಎಳೆಯುವನು. ತ್ರಿಶಂಕುವು ಹೊರಗೆ ಬರವನು.) ಹೋ, ಹೌದು! ನೀನೇ ನಮ್ಮ ತ್ರಿಶಂಕು! ಇಲ್ಲಿಗೆ ಹೇಗೆ ಬಂದೆ?

ತ್ರಿಶಂಕು— ಅರಸನನ್ನು ಅರಸುತ್ತ ಇಲ್ಲಿಗೆ ಬರಲು, ಗುಡುಗಿತು. ಇವನು ಸಿಡಿಲು ಬಡಿದು ಸತ್ತವನೆಂದು ಭಾವಿಸಿ, ಸದ್ಯಕ್ಕೆ ಕಂಬಳಿಯೆ ಗತಿ ಎಂದು ಒಳಗೆನುಗ್ಗಿಬಿಟ್ಟೆ—(ಪೆದ್ದುಪೆದ್ದಾಗಿ) ಬಿರುಗಾಳಿ ನಿಂತಿದೆಯೆ? (ಮೇಲೆ ನೋಡುವನು.)

ಬೀಮಣ— ಅದರ ಬಲ್ಮೆಗೂ ಮೇರೆಯಿರುವುದು. ಅದರಾಟ ಮುಗಿದುದಿನ್ನು.

ಶನಿಶಕ್ತಿ— (ಎದ್ದುನಿಂತು ಸ್ವಗತ) ಆಹಾ! ಎಂತಹ ದಿವ್ಯವಾದ ಸುಂದರ ದೇವತೆಗಳಿವರು! ಕರದಮೃತಕಲಶದಿಂ ಮೆರೆವ ಆ ಚೆಲ್ವಿನಾಕೃತಿಯು ಗೀರ್ವಾಣನೇ ದಿಟವು. ಪಾದಗಳಿಗೆರಗಿ ಕೃಪೆಯನ್ನು ಬೇಡಿದರೆ ನನಗೊಳ್ಳಿತಾಗುವುದು! (ಬೀಮಣನ ಮುಂದೆ ಬಂದು) ನಿನ್ನ ದಾಸನು ನಾನು; ನೀನಿತ್ತ ಆ ಮದ್ದು ಬರ್ದಿಲರಮರ್ದೆ ದಿಟಂ. (ಅಡ್ಡಬೀಳುವನು.)

ಬೀಮಣ— ಹೇಗೆ? ಚಳಿ ಈಗ ಕಡಿಮೆಯಾಗಿದೆಯೆ?

ಶನಿಶಕ್ತಿ— ನೀನು ಸ್ವರ್ಗದಿಂದ ಬಂದೆಯಾ?

ಬೀಮಣ— ಹೌದು, ಸೋಮಲೋಕದಿಂದಲೆ ಇಳಿದುಬಂದೆ.—ನಿನ್ನೆ ನಾನಲ್ಲಿಯೇ ಇದ್ದೆ!

ಶನಿಶಕ್ತಿ— ಅಹುದಹುದು, ನಾ ಬಲ್ಲೆ. ಎನಿತೊ ಸಲ ಚಂದ್ರನಲಿ ನಿನ್ನ ನಾ ನೋಡಿಹೆನು. ನಿನ್ನ ನಾ ತಿಂಗಳೊಳೆ ಎನ್ನೊಡತಿ ತೋರಿದಳು; ನಿನ್ನ ಎಲೆವನೆಯಿರ್ಪ ತಾಣವನು ಅಲ್ಲಿ ತೋರಿದಳು.

ಬೀಮಣ— ಬಾ, ಇಲ್ಲಿ! ಬಾ ಇಲ್ಲಿ!! ನೀನು ನೋಡಿದುದು ದಿಟವೆಂದು ಈ ಅಮರ್ದಿನ ಮೇಲಾಣೆಯಿಟ್ಟು ಒದರು.—ಮರಳಿ ನಿತು ಅಮರ್ದನಿಕ್ಕುವೆನು. ಹುಂ, ಪ್ರಮಾಣಮಾಡು! (ಕುಡಿಸುತಿರೆ)

ತ್ರಿಶಂಕು— ಅಯ್ಯಯ್ಯೋ ಇದೆಂತಹ ಬಡ ರಕ್ಕಸ! ಈ ದರಿದ್ರಪ್ರಾಣಿಗೆ ಸುಮ್ಮನೆ ಬೆದರಿದೆನಲ್ಲಾ! ಬಲ್ಮೆಯಿಲ್ಲದ ರಕ್ಕಸ! ಅರಿವು ಗೆಟ್ಟ ರಕ್ಕಸ!—ಸಾಕು! ಸಾಕು!—ಭಲಾ! ಚೆನ್ನಾಗಿ ಹೀರಿತು ಪ್ರಾಣಿ!

ಶನಿಶಕ್ತಿ— ಸಗ್ಗಿಗನೆ, ಈ ದ್ವೀಪದೊಳಿಹ ಫಲವತ್ತಾದ<br>ಭೂಭಾಗಗಳನೆಲ್ಲಮಂ ನಿನಗೆ ತೋರುವೆನು.<br>ಬೇಕಾದ ತನಿವಣ್ಗಳಂ ತಂದು ನೀಡುವೆನು.<br>ತಿಳಿಗೊಳನ ತಣ್ಣೀರ್ಗಳಂ ತಂದು ಅರ್ಪಿಸುವೆ.<br>ನೀನೆನ್ನ ದೇವತೆಯು! ನಿನ್ನ ಅಡಿಗಳಿಗಿದೋ<br>ಕಂಬನಿಯ ಅಭಿಷೇಕಮಂ ಗೈದು ಮುತ್ತಿಡುವೆ.

ಬೀಮಣ— ಹಾಗಾದರೆ ಬಾ; ಅಡ್ಡಬಿದ್ದು ಪ್ರಮಾಣಮಾಡು! (ಶನಿ ಶಕ್ತಿಯು ಹಾಗೆಯೆ ಮಾಡುತ್ತಿರೆ)

ತ್ರಿಶಂಕು— ಇದೆತ್ತಣ ಮರುಳು ರಕ್ಕಸ! ಬೀಮಣ, ನಿನಗೆ ಒಳ್ಳೆಯ ಭಕ್ತನೇ ಸಿಕ್ಕಿದನು! ನೀನು ಮಲಗಿರುವಾಗ ಅಮರ್ದೆಲ್ಲ ಬತ್ತುವುದು, ನಾ ಬಲ್ಲೆ.

ಬೀಮಣ— (ಶನಿಶಕ್ತಿಯ ತಲೆಯನ್ನು ಚೆನ್ನಾಗಿ ನೆಲಕೊತ್ತಿ) ಚೆನ್ನಾಗಿ! ಚೆನ್ನಾಗಿ ಆಣೆಯಿಡು! ಸರಿಯಾಗಿ ನಮಸ್ಕರಿಸು!

ತ್ರಿಶಂಕು— ಇದೆಲ್ಲಿಯ ಪೋಲಿ ರಕ್ಕಸ! ಬರಿಯ ಹೈಲು! (ಹಲ್ಲುಕಡಿಯುತ್ತ) ಕಂಡರೆಯೆ ಹಿಡಿದು ಗುದ್ದುವಂತಾಗುತ್ತದೆ.

**ಬೀಮಣ—** ಸಾಕು, ಏಳು! (ಶನಿಶಕ್ತಿ ಏಳುವನು) ಪಾಪ! ಬಹಳ ಬಳಲಿದೆ! ಇಗೋ ಕುಡಿ! (ಕುಡಿಸುವನು)

**ತ್ರಿಶಂಕು—** ಬೀಮಣ, ಸ್ವಲ್ಪ ಮುಂದಾಲೋಚನೆ ಇಟ್ಟುಕೊಂಡು ಕೆಲಸಮಾಡು! ಈ ಹೈಲು ರಕ್ಕಸಗೆ ಈ ರೀತಿ ಕುಡಿಸಿದರೆ ಮುಂದೆ ನಮ್ಮ ಗತಿ?

**ಶನಿಶಕ್ತಿ—** ತಿಳಿನೀರ ಬುಗ್ಗೆಗಳ ತೋರ್ದಪೆನು. ನಿನಗಾಗಿ
ಪಣ್ಗಳಂ ಕೊಯ್ದಪೆನು. ಮೀನ್ಗಳಂ ಪಿಡಿದಪೆನು.
ಕಟ್ಟಿಗೆಯ ತಂದೊಟ್ಟುವೆನು. ಎನ್ನ ಮೊದಲನೆಯ
ಯಜಮಾನ ಭೈರವನು ಹಾಳಾಗಿ ಹೋಗಲಿ!
ಅವನ ಗೊಡವೆಯೆ ಸಾಕು! ದೇವತೆಯೆ ನೀನೆಯೆ
ಎನ್ನ ಮುಂದಿನ ಒಡೆಯ!

**ತ್ರಿಶಂಕು—** ಅಯ್ಯೊ ಕುಡುಕನನ್ನು ದೇವತೆಯೆಂದು ಕರೆಯುತ್ತಿದೆಯಲ್ಲಾ! ಇದೆಂತಹ ಮರುಳು ರಕ್ಕಸ!

**ಶನಿಶಕ್ತಿ—** ನಳ್ಳಿಗಳು ನಲಿದಿರ್ಪ ನೆಲವ ತೋರ್ದಪೆನು.
ಎನ್ನುಗುರ್ಗ್ಳದುವಿಂ ಗೆಡ್ಡೆಗಳನಗೆದಪೆನು.
ಗೂಡಿನಲಿ ಮಲಗಿರ್ಪ ಹಕ್ಕಿಗಳ ಮೊಟ್ಟೆಗಳ
ತೋರುವೆನು. ಗೊಂಚಲ್ಗಳಿಂ ಪೂವುಗಳ ಕೊಯ್ದು
ಮಾಲೆಯಂ ಸೂಡುವೆನು. ಸಿಂಗರದ ಪವಳಗಳ
ನೆಯ್ದು ಹಾರವಮಾಡಿ ನಿನಗದನು ತೊಡಿಸುವೆನು.

**ತ್ರಿಶಂಕು—** ಎಲವೋ ಮಂಕು! ಸಾಕು, ನಿಲ್ಲಿಸು!

**ಬೀಮಣ—** ಮಾರಾಯ, ಮಾತು ಸಾಕು. ಮೊದಲು ದಾರಿಯ ತೋರು.—ತ್ರಿಶಂಕು, ನಾಯಕರು ಪರಿವಾರದೊಡನೆ ಮುಳುಗಿದರು. ನಾವೆ ಇಲ್ಲಿಗೆ ಚಕ್ರವರ್ತಿಗಳಾಗಿ ಮನ ಬಂದಂತೆ ಕುಡಿದು ತಿಂದು ಬದುಕಬಹುದಷ್ಟೆ?

**ಶನಿಶಕ್ತಿ—** (ಹಾಡುವನು) ನಮೋ! ನಮೋ! ಭೈರವಗೆ ನಮೋ!
ನಮೋ! ನಮೋ!

ತ್ರಿಶಂಕು— ಏ! ಹೈಲು! ಮಂಕು! ಪೋಲಿ! ಹುಚ್ಚು! ಒದರ ಬೇಡಪೋ ತೆಪ್ಪಗಿರು!

ಶನಿಶಕ್ತಿ— (ಹಾಡು)

ನಮೋ! ನಮೋ! ಭೈರವಗೆ ನಮೋ! ನಮೋ! ನಮೋ!
ಇನ್ನುಮೇಲೆ ಅವನಿಗಾಗಿ ನಾನು ಮೀನು ಹಿಡಿವುದಿಲ್ಲ.
ಇನ್ನುಮೇಲೆ ಅವನಿಗಾಗಿ ನಾನು ಕೆಲಸ ಮಾಳ್ಪುದಿಲ್ಲ.

ಬೆಂಕಿಯನು ಮಾಡೆನು!
ಕಟ್ಟಿಗೆಯ ಕೂಡೆನು!
ಹಣ್ಣು ಹೂವು ಮೀನುಗಳನು
ಒಂದನುಂ ತಾರೆನು!
ತಿಳಿಯುಕೊಳನ ನೀರುಗಳನು
ಎಂದಿಗುಂ ತೋರೆನು!

ಉಂಡು ಬಿಟ್ಟ ಪಾತ್ರೆಗಳನು ನಾನು ಇನ್ನು ತೊಳೆವುದಿಲ್ಲ.
ಕಂಡ ಕಂಡ ಕೆಲಸಗಳನು ನಾನು ಇನ್ನು ಮಾಳ್ಪುದಿಲ್ಲ.

ಶನಿಶಕ್ತಿಗಿಂದು ಬೇರೆ
ದೇವತೆಯು ದೊರಕಿಹುದು!
ಶನಿಶಕ್ತಿಗಿಂದು ಮುಕ್ತಿ
ತನಗೆ ತಾನೆ ದೊರಕಿಹುದು.

ನಮೋ! ನಮೋ! ಭೈರವಗೆ ನಮೋ! ನಮೋ! ನಮೋ!

ೀಮಣ— ಭಲಾ! ವೀರರಾಕ್ಷಸಾ! ಎಲ್ಲಿ? ದಾರಿ ತೋರು. ನಡೆ, ಮುಂದೆ! (ಹೊರಡುವರು)

---

## ದೃಶ್ಯ ೫

[ಭೈರವನ ಗುಹೆಯ ಮುಂದೆ. ಶಿವನಾಯಕನು ಒಂದು ಭಾರವಾದ ಮರದ ತುಂಡನ್ನು ಹೊತ್ತುಕೊಂಡು ಬಂದು ನೆಲದ ಮೇಲೆ ಹಾಕುವನು.]

ಶಿವನಾಯಕ— ಸೊಗದ ಕಜ್ಜಗಳೊಳವು ಕೆಲವು ; ಸೊಗವಿಲ್ಲದಿಹ
ಕಜ್ಜಗಳುಂ ಕೆಲವಿಹವು. ಕೆಲವು ಕಾರ್ಯಗಳಲ್ಲಿ
ಕಾರ್ಯಭಾರವೆ ನಮಗೆ ಸಂತಸವ ನೀಡುವುದು ;
ಕೆಲವರೊಳು ಕಾರ್ಯಂ ಬಹುಭಾರವಾದಪುದು !
ಎದೆಯ ಬಡತನವ ಸೂಚಿಸುವ ಸಿರಿಗೆಯ್ಮೆಗಳು
ಕೆಲವಿಹವು. ಕೆಲವು ಬಡಗೆಯ್ಮೆಗಳು ಬಗೆಯ
ಸಿರಿತನದ ಚಿಹ್ನೆಗಳು ! ನಾನೆಸಗುವೀ ಗೆಯ್ಮೆ
ಸುಂದರಿಯ ಮಧುರ ಸಾನ್ನಿಧ್ಯದಿಂ ಹೀನಮುಂ,
ಕಠಿನಮುಂ, ಭಾರಮುಂ ಆಗಿರದೆ ಸವಿಗೆಲಸ-
ಮಾಗಿಹುದು. ಬಳಲಿಕೆಗೆ ಜೀವಕಳೆ ತುಂಬಿರ್ಪ-
ಳಾ ಎನ್ನ ನಳಿನನಯನೆ !—ಅವಳ ತಂದೆಯ ಕ್ರೌರ್ಯಕೆ
ಈರ್ಮಡಿಯಿರ್ಪುದವಳೆದೆಯ ಸೌಜನ್ಯಂ !
ಜಗ್ಗದಿಹ ಕಗ್ಗಲ್ಲು ಆ ಮುದುಕನ್ ! ಸೂರಾರು
ತೊಲೆಗಳನು ತಂದಿಲ್ಲಿ ರಾಶಿಗೈಯೆಂದೆನಗೆ
ಕಟ್ಟಾಣತಿಯ ಬೆಸಸಿ ಪೋದನ್ ! ಕಂಬನಿಯ
ಚೆಲ್ಲುವಳು ನನ್ನ ಚಲ್ವೆಯುಂ ನನ್ನ ಬಳಲಿಕೆಯ
ಕಂಡು ಕನಿಕರದಿನೆದೆ ಬೆಂದು, ಬೇಟಂ ನೊಂದು.—
ಮರೆತು ಕೈಗೆಲಸವನು ಸವಿವಗಲ್ಗನಸಿನಲಿ
ಅಲೆದೊಡೇನಪ್ಪುದು ? ಆದರೇನೀ ಮಧುರ
ಭಾವಗಳು ಎನ್ನಾಸರಂಗಳೆದು ಪೊಸವುರಳ-
ನಿತ್ತಪವು.

[ಗೌರಾಂಬೆ ಬರುವಳು. ಭೈರವನು ದೂರದಲಿ ಕಾಣಿಸಿಕೊಳ್ಳದೆ ಬರುವನು.]

ಗೌರಾಂಬೆ— ಶಿವ ಶಿವಾ! ದಣಿವನಾರಿಸಿಕೊಳದೆ
ಏಕಿಂತು ಗೆಯ್ಯುತಿಹೆ? ಆ ಸೌದೆಗಳನೆಲ್ಲ
ಮಿಂಚೆರಗಿ ಬೂದಿಮಾಡಿದ್ದರೊಳಿತಾಗುತಿತ್ತು.
ಅವುಗಳಂತಿರ್ಕೆ, ಬಾ; ದಣಿವಾರಿಸಿಕೊ. ಈ ತೊಲೆಗಳ್
ಉರಿವಾಗ ನಿನ್ನ ಕಷ್ಟವ ನೆನೆದು ಕಣ್ಣೀರು
ಕಾರುವುವು, ಹೊಗೆಯು ಸಿಟ್ಟುಸಿರೆಳೆದು. ತಂದೆಯು
ಜಾನದಲಿ ಮುಳಗಿಹನು. ದಯೆಗೈದು ಇನಿತು ದಣಿ-
ವಾರಿಸಿಕೊ. ಪಗಲ ಬೆಂಗದಿರನುರಿ ಚುರ್ಚುತಿಹುದು!

ಶಿವ— ಎನ್ನ ಕಂಗಳ ಚೆಲ್ವೆ, ಎನ್ನ ಮುದ್ದಿನ ಪೆಣ್ಣೆ,
ಬೈಗುಗೆಂಪಳಿದು ಇರುಳ ನೆರಳ್ ಇಳಿವ ಮುನ್ನಮೇ
ಕೈಕೊಂಡ ಕಜ್ಜಮನ್ ಮಾಡಿ ಮುಗಿಸಲೆವೇಳ್ಕುಂ.

ಗೌರಾಂಬೆ— ನೀನ್ ಆಸರಂಗಳೆ. ನಾನು ಸೌದೆಯನೆತ್ತಿ
ತಂದಿಲ್ಲಿ ರಾಶಿಮಾಡುವೆನು. ನೀಡಿತ್ತಲದನ್;
ಬೇಡುವೆನು ಕೊಡು, ಗುದ್ದಿಗೊಯ್ವೆನ್.

ಶಿವ— ಅದಾಗದು,
ಪೂಮೆಯ್ಯ ನಲ್ಲೆ. ನಾನು ಬಳಿಯೊಳೆ ಕುಳಿತು
ನಿನ್ನ ಕೈಯಲಿ ಕಟ್ಟಿಗೆಯ ಹೊರಿಸುವುದಕಿಂತ
ನನ್ನ ಬೆನ್ಮುರಿದು, ನರ ಹರಿದು ಹೋದರೆ ಲೇಸು!

ಗೌರಾಂಬೆ— ನೀನುರೆ ಬಳಲಿರ್ಪೆ. ನಾನು ಹೊರುವುದು ಧರ್ಮ.
ನೀನಿನಿತು ಪೊಳ್ತು ವಿಶ್ರಮಿಸಿಕೊಳ್ವುದುಂ ಧರ್ಮ!
ನಾನು ಹೊರುವುದು ಉಚಿತಂ. ಏಕೆನೆ ಅದರೊಳ್
ಎನಗೆ ಬೇಸರವಿಲ್ಲಂ. ಎನ್ನ ಬಗೆಯೊಪ್ಪಿದುದು;
ನಿನ್ನ ಬಗೆಯ್ಯಾದರೋ ಆಜ್ಞೆಯಂತೆಸಗುತಿದೆ.

ಭೈರವ— (ಸ್ವಗತ) ಜವ್ವನೆಗೆ, ಬೇಟಂ ಬಲಿತಿಹುದು! ಇನ್ನೇನು?
ಬೇಟಕಾಹುತಿಯಾಗಿಬಿಟ್ಟಳ್ ಎನ್ನಣುಗಿ.

**ಗೌರಾಂಬೆ—** ಬಹಳ ಬಳಲಿಹೆ ನೀನು.

**ಶಿವ—** ಇಲ್ಲ, ಎನ್ನಿನಿಯಳೇ
ಇರುಳಾದೊಡಂ ನೀನು ಬಳಿಯಿರಲ್ ಎನಗದುವೆ
ಮುನ್ನೇಸರ್ ಐತರ್ಪ ಸಮಯಮಾದಪುದು!
ಏಣಾಕ್ಷಿ, ಎನ್ನದೊಂದು ಬಿನ್ನಪಂ: ಹಕ್ಕಿಗಳು,
ಬನಗಳಲಿ ಸುಙ್ಕಾರವ ಬೀರುವ ಕೋಗಿಲೆಯೆ
ಮೊದಲಹ ವಿಹಂಗಗಳು, ನಿನ್ನನಾವ ಪರಿಯಿಂ
ಸಂಬೋಧಿಪವೊ ತಿಳಿಯಲಾಸಿಪೆನ್.

**ಗೌರಾಂಬೆ—** 'ಗೌರಾಂಬೆ'
ಎಂದೆನ್ನನ್ ಉಲಿದಪವು!—ಅಯ್ಯೋ ತಪ್ಪಿದೆನ್,
ತಂದೆಯಾಣತಿಯಿಹುದು: ಪೆಸರನಾರೊಡನೆಯುಂ
ಪೇಳಲಾಗದು ಎಂದು.

**ಶಿವ—** 'ಗೌರಾಂಬೆ!' 'ಗೌರಾಂಬೆ'
ಎನಿತು ಮುದ್ದಿನ ಪೆಸರ್! ಜೇನು ಸೋರುವ ಪೆಸರ್!
ಮನಸಿಜನ ವೇದಸಾರದ ಮುಖ್ಯಮಂತ್ರಮಿದು!
ಮಾಧುರ್ಯ ಮಂಜೂಷೆಯಾದೆನ್ನ ಗೌರಾಂಬೆ,
ನಾನೆನಿತೊ ಚೆಲುವೆಯರನೀಕ್ಷಿಸಿದೆನಾದೊಡಂ
ಆರನುಂ ಇನಿತು ಎದೆದುಂಬಿ ನಾನೋವಿಲ್ಲ.
ಕೆಲವರನು ಸೊಬಗಿಂಗೆ ಮೆಚ್ಚಿದೆನು. ಕೆಲವರನು
ಸುಜನತೆಗಾಗೊಲಿದೆನ್. ಮತ್ತೆ ಪಲಂಬರನು
ನಂಟಿನ ನಣ್ಪಿಗಾಗಿ ಪ್ರೀತಿಸಿದೆ. ಹಲವರನು
ಕೊರಲಿನಿಂಚರಕಾಗಿ, ಇನಿಬರನು ಕಲಿತಿರ್ಪ
ಬಿಜ್ಜೆಗಾಗೋವಿದೆನು. ಚಂಚಲಿಪ ಕಣ್ಗಳಿಗೆ,
ಕಿಕ್ಕಿರಿದ ಮುಂಗುರುಳಿಗಾಗಿನಿಬರನ್ ಪೊಗಳಿದೆನ್.
ಆದರೀ ನಿರುಪಮ ಲಾವಣ್ಯಮಯಮೂರ್ತಿಯು,
ಪೂರ್ಣತೆಯೆ ಮೂರ್ತಿವೆತ್ತಂದದಲಿ, ಉತ್ತಮರ
ಉತ್ತಮ ಗುಣಂಗಳೆಲ್ಲಮನ್ ಪಡೆದು ಮೆರೆದಪಳ್!

ಗೌರಾಂಬೆ— ತರುಣಿಯರು ಎಂತಿರ್ಪರೋ ಅದನು ನಾನರಿಯೆ !
ಕನ್ನಡಿಯೊಳ್ ಎನ್ನ ಮೊಗಮನ್ ನಾನ್ ನೋಡಿರ್ಪೆನ್ !
ಅದುಹೊರತು ಭಾಮೆಯರ ಮೊಗವ ನೋಡಿಯೆ ಇಲ್ಲ,
ಸುಂದರನೆ, ನಿನ್ನನುಂ ಮೇಣೆನ್ನ ತಂದೆಯುಮಂ
ಬಿಟ್ಟರೀ ಲೋಕದಲಿ ಇನ್ನುಳಿದ ಪುರುಷರನು
ಕಂಡಿಲ್ಲ. ಚನ್ನೆಯರ, ಚೆನ್ನಿಗರ, ಚೆಲ್ವುಗಳ
ವಿವಿಧತೆಯ ಅನುಭವಂ ಎನಗಿಲ್ಲ.—ಆದೊಡಂ
ನೀನಲ್ಲದಿನ್ನಾರನ್ ಆನೊಲಿಯೆ ; ಮೇಣೆನ್ನ
ಕಲ್ಪನೆಯು ನಿನ್ನಂ ವಿರ್ಾದ್ಧ ಸೊಬಗಿನಾಕೃತಿಯುಂ
ಕಡೆಯುಲರಿಯದು. ಇನಿಯ, ನಿನಗೆ ನೀನೇ ಎಣೆಯು!
ಪಿತನ ವಿಧಿಯನು ಮೀರಿ ನಿನ್ನೊಡನೆ ಗಳಪಿದೆನು.
ಮುನಿಯುವನ್ ಅವನರಿಪೊಡೆ !

ಶಿವ— ಉತ್ತಮರ ವಂಶದೊಳೆ
ಜನಿಸಿರ್ಪ ಅರಸುಕುವರನು ನಾನು, ಗೌರಾಂಬೆ.—
ಅರಸನಾಗಿಹೆನೆಂದೆ ಭಾವನೆಯು—ಅಂತಾಗ-
ದಿರಲೆಂದೆ ಸನ್ಯಾಸೆ !—ಕಾಷ್ಟ ಕಷ್ಟವನಿನ್ನು
ಸಹಿಸಲಾರೆನು ; ಮುಚ್ಚುಮರೆಯೇಕೆ ? ನಿನ್ನೆದುರು
ನನ್ನೆದೆಯನರಳಿಪೆನು : ಮೊದಲ ದರ್ಶನದೊಳೆಯೆ
ನಿನ್ನೊಲ್ಮೆಗಾನ್ ಸೆರೆಯಾಗಿ ಸಂದೆನ್. ಸೊಬಗಿನಾ
ಸೆರೆಯಿಂದ ನಾನ್ ಬಿಡುಗಡೆಯ ಬಯಸೆ. ನಿನಗಾಗಿ
ಕೂಲಿಯಾಳಾಗಿರ್ಪೆನ್.

ಗೌರಾಂಬೆ— ಪ್ರೀತಿಪೆಯೇಂ ನೀನೆನ್ನನ್ ?

ಶಿವ— ಸ್ವರ್ಗದ ಸಾಕ್ಷಿಯಾಗಿ, ಭೂಮಿಯ ಸಾಕ್ಷಿಯಾಗಿ,
ಸೂರ್ಯ ಚಂದ್ರರು ತಾರೆಗಳ ಸಾಕ್ಷಿಯಾಗಿ,
ಸರ್ವ ದೇವಾನುದೇವತೆಗಳ ಸಾಕ್ಷಿಯಾಗಿ
ನಾನ್ ನಿನ್ನನೊಲಿದಿರ್ಪೆನ್. ಎರಡಿರದ ಒಮ್ಮನದೊ-
ಳೊಲಿದಿರ್ಪೆನ್ ; ಮೆಚ್ಚಿದೆನ್, ಓವಿಹೆನ್, ಪೂಜಿಪೆನ್ !

ಗೌರಾಂಬೆ— (ಆನಂದಬಾಷ್ಪಗಳನ್ನು ಸುರಿಯುತ್ತ)
ಸಂತಸದ ಸುದ್ದಿಯನು ಕೇಳಿ ಕಂಬನಿಗರೆವ
ನಾನು ಎಂತಹ ಮರುಳು!

ಭೈರವ— (ಸ್ವಗತ) ನಿರುಪಮ ಪ್ರೇಮಗಳ ಮಧುರ ಸಂಗಮಂ ಇದು!
ಎಲೆ ಎಲೆ ದೇವತೆಗಳಿರಾ ಪೂವಲಿಯ ಚೆಲ್ಲಿ!

ಶಿವ— ಏತಕಳುತಿಹೆ, ನಲ್ಲೆ?

ಗೌರಾಂಬೆ— ನನ್ನ ಬಡತನಕೆ ನಾನೆ
ಬೆದರಿರ್ಪೆ. ಈವೆನೆಂದುದನ್ ಈಗಳರ್ಪಿಸಲು
ಎದೆಯುಳುಕುತಿದೆ; ಎದೆಗೆ ಕೆಚ್ಚಿಲ್ಲ. ಕೊಡಲ್ ಒಮ್ಮೆ
ನೀಡಿದುದನ್ ಇನ್ನೊಮ್ಮೆ ತೆಗೆದುಕೊಳ್ಳಲು ಆರೆ.
ನೀಡದಿರಲ್ ಅಳಿಯುವೆನು. ಏಕೆಂದರೀ ದಿವ್ಯ
ದಾನದೊಳು ಅಮೃತವಿದೆ! ಆದರಾನ್ ಪುಲ್ಗಣೆಯು!—
ಮರೆಯಾಗಲ್ ಎಳಸುವಾಗಳೆ ಎದ್ದು ತೋರುತಿಹ
ನಾಚಿಗೆಯೆ ತೊಲಗಾಚೆ! ಬಾರಮ್ಮ, ಮುಗ್ಧತೆಯೆ!
ಪಾವನಳು ನೀನು, ಬಳಿಸಾರಮ್ಮ!

ಶಿವ— ನಲ್ಲೆ, ಪೆಣ್ಮಣಿಯೆ, ಫಲವ ಕೋರದು ಪ್ರೇಮ!
ಛಲವ ತೋರದು ಪ್ರೇಮ! ಭಯವನರಿಯದು ಪ್ರೇಮ!
ಪ್ರೇಮ ಸಾಮ್ರಾಜ್ಯದಲಿ ಬಡತನವೆ ಸಿರಿತನಂ!

ಗೌರಾಂಬೆ— ನೀನೆನ್ನನ್ ಓವಿದರೆ ಅರ್ಧಾಂಗಿಯಾದಪೆನ್!
ಓವದಿರೆ ನಿನ್ನ ಸೇವಕಿಯಾಗಿ, ಸೇವೆಯೊಳೆ
ಜೀವಮಾನವ ಸವೆದು, ನಿನ್ನ ಜೊತೆಗೂಡುವೆನು
ಸಾವಿನಲಿ! ನೀನೆನ್ನ ತೊರೆದರುಂ ನಾನಿನ್ನ
ಸೇವಕಿಯು! ನೀನ್ ಪಳಿದರುಂ ನಾನ್ ಭಕ್ತಳೆಂದುಂ!

ಶಿವ— (ಮೊಳಕಾಲೂರಿ) ಎನ್ನ ಮುದ್ದಿನ ಚೆಲ್ವೆ, ನೀನ್ ಎನ್ನ
ದೇವತೆಯು!
ಎನ್ನ ಬಿಜ್ಜೆಗೆ ನೀನೆ ಸರಸತಿಯು! ಮೇಣ್ ಎನ್ನ

ಸಿರಿಗೆ ನೀನೇ ಲಕುಮಿ! ಎನ್ನ ತವಸಿಗೆ ನೀನೆ
ಪಾರ್ವತಿಯು! ಎನ್ನ ಬಾಳ್ಕೆಗೆ ನೀನೆ ಮೋಕ್ಷಂ!
ದೇವಿ, ನಾನಿಂದು ಸಂಪೂರ್ಣನಾದೆನ್!

**ಗೌರಾಂಬೆ—** ನೀನಿನ್ನು ಎನ್ನೆರೆಯನ್?

**ಶಿವ—** ಬಂಧನಂ ಮುಕ್ತಿಯಂ
ಬಿಗಿದಪ್ಪುವಂತೆವೋಲ್ ನಿನ್ನ ಕೈಪಿಡಿದಿರ್ಪೆನ್.
ವ್ಯಕ್ತಂ ಅವ್ಯಕ್ತವಂ ಮುದ್ದಿಸುವ ತೆರದಿಂದೆ
ನಾನಿನ್ನ ಮುದ್ದಿಪೆನು. ನಶ್ವರವು ಶಾಶ್ವತವ-
ನಾಲಂಗಿಪಂದದಲಿ ನಿನ್ನನಾಸಪ್ಪುವೆನು.

**ಗೌರಾಂಬೆ—** ನಾನಿದೋ, ಅಂಜಲಿಯೊಳ್ ಎದೆಯೊಲ್ಮೆಯಂ ತುಂಬಿ
ನಿನಗಿತ್ತಪೆನ್. [ಪಾಣಿಗ್ರಹಣಮಂ ಗೈವರ್]
ಪ್ರಾಣೇಶ, ತಂದೆಯ್ಕೆತರ್ಪ
ಪೊಳ್ತು ಬಳಿ ಸಾರಿಹುದು. ನಾನೀಗ ತೆರಳುವೆನು!

[ಹಿಂದೆ ಹಿಂದೆ ನೋಡುತ್ತ ಹೋಗುವಳು. ಶಿವನಾಯಕನು ಅವಳನ್ನೇ ನೋಡುತ್ತ ಮತ್ತೊಂದು ಕಡೆಗೆ ಹೋಗುವನು.]

**ಭೈರವ—** ಅವರ ಸೊಗಕಿಂತಲುಂ ಎನ್ನ ಸೊಗಮಧಿಕತರಂ!
ಮಗಳ ಸಂತಸವಲ್ಲದಿನ್ನಾವ ಸಂತಸವು
ನನಗಿಹುದು? ಬೈಗಿಳಿವ ಮುನ್ನಮೇ ನನ್ನ
ಕಜ್ಜಮಂ ಕೊನೆಗಾಣಿಸಲೆವೇಳ್ಕುಂ. ನೋಳ್ಪೆಂ!

(ಹೊರಡುವನು)

# ದೃಶ್ಯ ೬

[ದ್ವೀಪದ ಮಗುಡೊಂಡು ಭಾಗ.  ಹೆಂಡ ತಲೆಗೇರಿ ಶನಿಶಕ್ತಿ, ಬೀಮಣ, ತ್ರಿಶಂಕು ಇವರ ಪ್ರವೇಶ.]

**ಬೀಮಣ**— ಬೇಡ, ನೀನು ಹೇಳುವುದೇನೂ ಅವಶ್ಯವಿಲ್ಲ. ಸುಮ್ಮನಿರು, ನನಗೆಲ್ಲ ಗೊತ್ತು. ಕಳ್ಳು ಮುಗಿದ ಮೇಲೆಯೇ ನೀರು ಕುಡಿಯುವುದು. ಅದಕಿಂತ ಮುಂಚೆ ಒಂದು ತೊಟ್ಟು ನೀರನ್ನೂ ಕುಡಿಯುವವನಲ್ಲ ನಾನು. ಆದ್ದರಿಂದ ಭಯವೇಕೆ? ಕುಡಿ, ರಾಕ್ಷಸ, ಕುಡಿ. ಕುಡಿ ನನ್ನ ಹೆಸರಿನ ಮೇಲೆ.

**ತ್ರಿಶಂಕು**— ರಾಕ್ಷಸವೊ? ಮೈಗೊಂಡ ಮರುಳ್ತನವೊ? ಈ ದ್ವೀಪದಲ್ಲಿ ಇರುವವರು ನಾವೈದು ಜನರಂತೆ: ಅವರೊಳಗೆ ಮೂವರು ನಾವು. ಇನ್ನುಳಿದ ಇಬ್ಬರೂ ನಮ್ಮಂತೆ ಬುದ್ಧಿವಂತರಾಗಿದ್ದರೆ, ನಮ್ಮ ಸಾಮ್ರಾಜ್ಯವು ಮೂರು ದಿನಗಳಲ್ಲಿಯೆ ತಲೆತಿರುಗಿ, ತತ್ತರಿಸಿ ಮುರಿದುಕೊಂಡು ಬೀಳುವುದೇ ನಿಶ್ಚಯ!

**ಬೀಮಣ**— ಕುಡಿ, ರಾಕ್ಷಸಾ, ಕುಡಿ! ನನ್ನ ಅಪ್ಪಣೆಯಾದ ಮೇಲೆ ನಿನಗೇನು ಹೆದರಿಕೆ?—ನಿನ್ನ ಕಣ್ಣಗಳೇನು ಬುರುಡೆಯ ತೂತುಗಳಲ್ಲಿ ಹೆದರಿ ಹುದುಗಿದಂತಿವೆ!

**ತ್ರಿಶಂಕು**— ಮತ್ತೆಲ್ಲಿ ಹುದುಗಬೇಕು? ಬಾಲದಲ್ಲಿಯೇ?

**ಬೀಮಣ**— (ಮತ್ತೇರಿ) ಈ ನನ್ನ ನರರಾಕ್ಷಸನು ಕಳ್ಳಿನಲ್ಲಿ ನಾಲಗೆ ಮುಳುಗಿಸಿಬಿಟ್ಟಿದ್ದಾನೆ!—ನನ್ನನ್ನೇನೋ ಹೊಳೆಯು ಕೂಡ ಮುಳುಗಿಸಲಾರದು!—ಏನು ಸ್ವಲ್ಪ ದೂರ ಈಜಿದೆನೇ?—ಅದೆಲ್ಲ ನಿನಗೇಕೆ ಸುಮ್ಮನಿರು.—ನಾನೇನು ಮಾಡಲಿ ಸ್ವಾಮಿ? ದೋಣಿ ಗಾಳಿಯನ್ನು ಮುಳುಗಿಸುತ್ತಾ ಇದೆ!—ನಲ್ವತ್ತು ಯೋಜನ ಈಜಿಬಿಟ್ಟೆ.—ಎಲೋ ರಕ್ಕಸಾ,

ಕಳ್ಳಿನಾಣೆಗೂ   ನೀನು–ನನ್ನ–ಸಾರಥಿ– ಆಗುವೆಯೊ?—
ಅಥವಾ–ಧ್ವಜ–ವಾಗುವೆಯೊ?

ತ್ರಿಶಂಕು— ಸಾರಥಿ ಬೇಕಾದರಾಗಲಿ ; ಧ್ವಜವಾಗುವುದಂತೂ ಖಂಡಿತ ಬೇಡ. ಏಕೆಂದರೆ ಧ್ವಜವು ದೃಢವಾಗಿ ನಿಂತಿರುವ ವಸ್ತು.

ಬೀಮಣ— ರಾಕ್ಷಸ ಮಹಾಶಯ, ನಾವು–ಯುದ್ಧದಲ್ಲಿ–ಓಡಬಾರದು.

ತ್ರಿಶಂಕು— ಓಡುವುದೂ ಇಲ್ಲ ; ನಿಲ್ಲುವುದೂ ಇಲ್ಲ. ಕುಡಿದು ತಲೆಗೇರಿ ಸತ್ತವರಂತೆ ಬೀಳುವಿರಿ ಅಷ್ಟೆ!

ಬೀಮಣ— ಮಾತಾಡು, ರಾಕ್ಷಸ! ನೋಡು, ಒಳ್ಳೆಯ ರಾಕ್ಷಸ ವಾದರೆ ಮಾತಾಡಬೇಕು.

ಶನಿಶಕ್ತಿ— ತಾವು ಹೇಳಿದ್ದೇನು? ನಿಮ್ಮ ಪಾದಕ್ಕೆ ಬಿದ್ದೆ. [ತ್ರಿಶಂಕು ವನ್ನು ಕರಾಗ್ರದಿಂದ ತೋರಿಸಿ] ಅವನು ಶೂರನಲ್ಲ. ನಾನು ಅವನ ಸೇವೆ ಮಾಡುವುದಿಲ್ಲ.

ತ್ರಿಶಂಕು— ಏನಂದೆ! ಏನಂದೆ, ಮೂರ್ಖ ರಾಕ್ಷಸ! ಸುಳ್ಳು ಬೊಗಳು ವೆಯಾ? ಹೇಡಿಗಳಾದವರು ಯಾರೇ ಆಗಲಿ ನಾನು ಇಂದು ಕುಡಿದಷ್ಟು ಸುರೆಯನ್ನು ಸೇವಿಸಬಲ್ಲರೇ? ಛಿಃ! ನರಮುತ್ತ್ಯಾವತಾರ! (ಕೈತೋರಿಸುವನು)

ಶನಿಶಕ್ತಿ— (ಬೆದರಿ) ಅಯ್ಯೋ ಅವನೆಂತು ಹಲ್ಲುಕಿರಿಯುವನು! (ಬೀಮಣಗೆ) ದೇವ ಕಾಪಾಡು! ನೀನಲ್ಲದಿನ್ನಾರು ಗತಿ ಯೆನಗೆ!

ತ್ರಿಶಂಕು— "ದೇವ!" ಇದೆಲ್ಲ ಎಲ್ಲಿಂದ ಬಂತು ಈ ರಾಕ್ಷಸಗೆ? (ಪುನಃ ಹೊಡೆಯುವಂತೆ ನಟಿಸುವನು)

ಶನಿಶಕ್ತಿ— ನೋಡು, ನೋಡು! ಅಯ್ಯೊ! ಪುನಃ!—ಅವನನ್ನು ಕಚ್ಚಿ ಕೊಂದುಬಿಡಬಾರದೇ?

ಬೀಮಣ— ತ್ರಿಶಂಕು, ಎಚ್ಚರಿಕೆಯಿಂದ ಮಾತಾಡು. ಹುಂ, ಏನೆಂದು ತಿಳಿದೆ! ಬಾಯಿಗೆ ಬಂದಂತೆ ಬೊಗಳಬೇಡ! ಇದು ನನ್ನ ರಾಜ್ಯ. ನೀನೆಲ್ಲಿಯಾದರೂ ದಂಗೆಯೆದ್ದರೆ, ದಂಗೆಯೇಳುವ

ಸೂಚನೆಯನ್ನು ತೋರಿಸಿದರೆ, ನೋಡು, ನಿನಗೆ ಆ ಮರವೇ ಗತಿ!—ಈ ರಾಕ್ಷಸವು ನನ್ನ ಪ್ರಜೆ. ಅದಕ್ಕೆ ತೊಂದರೆಕೊಡಬೇಡ ಎಚ್ಚರಿಕೆ! ಹುಂ?

ಶನಿಶಕ್ತಿ— ದೇವ, ನಿನಗೆ ಅಭಿವಂದಿಪೆನು. ನಾನು ಬೇಡಿದ ವರವ ದಯಪಾಲಿಪೆಯಾ?

ಬೀಮಣ— ಆಗಲಿ, ದಯಪಾಲಿಸುವೆ! ಕಾಲಿಗೆ ಅಡ್ಡಬಿದ್ದು ಬೇಡಿಕೊ; ಸ್ವಲ್ಪ ನಿಲ್ಲು, ನಾನು ಸರಿಯಾಗಿ ನಿಂತುಕೊಳ್ಳುತ್ತೇನೆ. (ಕಾಲನ್ನು ಜೋಡಿಸಿ ನಿಲ್ಲುತ್ತ) ತ್ರಿಶಂಕು, ನೀನು ಸರಿಯಾಗಿ ನಿಂತುಕೊಳ್ಳೋ! ಇನ್ನಾವಾಗಲೋ ನಾವು ನಮಸ್ಕಾರ ಮಾಡಿಸಿಕೊಳ್ಳುವುದು? ಇನ್ನಾರೋ ನಮಗೆ ನಮಸ್ಕಾರ ಮಾಡುವರು? ಸಿಕ್ಕಿದ್ದೇ ಲಾಭ!—ಹುಂ ಸರಿಯಾಗಿ!

[ಶನಿಶಕ್ತಿ ನಮಸ್ಕಾರಮಾಡುವನು. ಕಿನ್ನರನು ಅದೃಶ್ಯನಾಗಿ ಬರುವನು.]

ಶನಿಶಕ್ತಿ— ಪಿಂತೆ ನಾನೊರೆದಂತೆ ದುರುಳನೋರ್ವನ ಬಲೆಗೆ
ನಾನ್ ಸಿಲ್ಕಿ ಬಿದ್ದಿಹೆನು. ಮಾಟಗಾರನು ಅವನು;
ಮೋಸದಿಂದೀ ನೆಲವನ್ ಎನ್ನಿಂದ ಕಸಿದಿಹನು!

ಕಿನ್ನರ— ಸುಳ್ಳು! [ಶನಿಶಕ್ತಿಯು ಕೋಪದಿಂದ ತ್ರಿಶಂಕುವಿನ ಕಡೆ ನೋಡಿ]

ಶನಿಶಕ್ತಿ— ಸುಳ್ಳಾಡುವನು ನೀನು, ಕತ್ತೆಯೇರಿದ ಮಂಗ!
ನಿನ್ನನೀಗಳೆ ಎನ್ನ ಈ ಶೂರ ದೇವತೆಯು
ಜವನ ಮನೆಗಟ್ಟಿದರೆ—ಹುಸಿಯಾಗದೆನ್ನ ನುಡಿ!

ಬೀಮಣ— ತ್ರಿಶಂಕು, ಅದರ ಹೇಳಿಕೆಗೆ ನೀನು ಇನ್ನೆಲ್ಲಿಯಾದರೂ ಅಡ್ಡಬಂದರೆ, ನೋಡಿಕೋ, ಇದೇ ಕೈಯಿಂದ ನಿನ್ನ ಹಲ್ಲೆಲ್ಲ ಹೊಟ್ಟೆಗೆ ಹೋಗುವಂತೆ ಹೊಡೆಯುವೆನು.

ತ್ರಿಶಂಕು— ಯಾಕೆ? ನಾನೇನು ಮಾಡಿದೆ? ನಾನು ಸುಮ್ಮನಿದ್ದೇನೆ.

ಬೀಮಣ— ಹುಂ, ಇನ್ನುಮೇಲೆ ಸೊಲ್ಲೆತ್ತದಿರು. (ಶನಿಶಕ್ತಿಗೆ) ಮುಂದೆ?

ಶನಿಶಕ್ತಿ— ಹೇಳುವೆನು.—ಮಂತ್ರದಿಂದೀ ದ್ವೀಪವನು ಕಸಿದು
ಕೊಂಡಿಹನು. ಬಲ್ಮೆಯಿಂದವನನ್ ನೀನ್ ಅಳಿಪಿದೊಡೆ—
ನಿನಗೆ ಬಲವಿದೆ, ಬಲ್ಲೆ—(ತ್ರಿಶಂಕುಗೆ) ಇದರ ಕೈಲಾಗದು!

ಬೀಮಣ— ಸರಿ, ಸರಿ! ನಿಜ! ನಿಜ!

ಶನಿಶಕ್ತಿ— ನೀನು ಅರಸಾಗಿರುವೆ. ನಾನು ಆಳಾಗಿರುವೆ.

ಬೀಮಣ— ಅವನನ್ನು ಕೊಲ್ಲುವುದು ಹೇಗೆ! ನನಗೆ ಅವನಿರುವ ತಾಣ ವನ್ನು ತೋರಿಸುವೆಯೋನು?

ಶನಿಶಕ್ತಿ— ಅವನು ಮಲಗಿರ್ಪಾಗ ತೋರ್ದಪೆನ್. ನೀನವನ ತಲೆಯೊಡೆದು, ಚರ್ಮವನು ಸುಲಿಸುಲಿದು, ಎಲುಬುಗಳು ನುಚ್ಚಾಗುವಂತೆ ಮಾಡಿಬಿಡು! ಹ! ಹ! ಹ! ಹ!

ಕಿನ್ನರ— ಸುಳ್ಳು! ನಿನ್ನಿಂದಾಗದ ಕೆಲಸವದು!

ಶನಿಶಕ್ತಿ— (ತ್ರಿಶಂಕುಗೆ) ಎಲ್ಲಿ ರಣಗೇಡಿಯಿದು! ಎದೆಗೆಟ್ಟ ನೊಣಗವಿದು! ದೇವತೆಯೆ ಬೇಡುವೆನು. ಅವಗೆರಡು ಗುದ್ದಿ, ಆ ನಿನ್ನ ಅಮರ್ದುಗವಟ್ಟಲನು ಕಸಿದುಕೊ! ಆಮೇಲೆ ಕುಡಿಯುಲಿ ಕೆಸರ್ನೀರಂ! ನಾನವನಿಗೆಂದಿಗುಂ ತಿಳಿಗೊಳನ ತೋರಿಸೆನು!

ಬೀಮಣ— ತ್ರಿಶಂಕು, ತೊಂದರೆಗೆ ಕಾರಣ—ನೋಡು, ಹೇಳಿದ್ದೇನೆ. ನಡುವೆ ಬಾಯಿ ಹಾಕಬೇಡ. ಸುಮ್ಮನಿರು, ಇಲ್ಲವಾದರೆ ಅಪಾಯು ಸಂಭವಿಸುವ ಕಾಲಬಂದೀತು. ಅಡುಗೆ ಮನೆ ಯಿಂದ ಇಲ್ಲಿಯವರೆಗೆ ಎಡೆಬಿಡದೆ ಬಂದಿರುವ ನನ್ನ ನಿನ್ನ ಸ್ನೇಹವು ಭಸ್ಮವಾದೀತು—ನಿನ್ನ ಹೆಣದೊಡನೆ!

ತ್ರಿಶಂಕು— ಇದೇನಿದು? ನಾನೇನು ಮಾಡಿದೆ ನಿಮಗೆ! ಸುಮ್ಮನೆ ಕಲ್ಲು ನಿಂತಂತೆ ನಿಂತಿದ್ದೇನೆ!—ಬೇಕಾದರೆ ದೂರ ಸರಿದು ನಿಲ್ಲುವೆನು. (ಹಾಗೆ ಮಾಡಿ)

ಬೀಮಣ— "ಸುಳ್ಳು" ಎಂದು ಒರಲಲಿಲ್ಲವೇ ನೀನು?

ಕಿನ್ನರ— ಸುಳ್ಳು!

ಬೀಮಣ— ಏನಂದೆ? ಏನಂದೆ? ನನ್ನದೂ ಸುಳ್ಳೆ? ನನ್ನದೂ ಸುಳ್ಳೆ? ಹಾಗಾದರೆ ಇಗೋ ಕೈಗಡುಬುಗಳು. (ತ್ರಿಶಂಕುವನ್ನು

ಗುದ್ದುವನು) ಈಗ ನಿನಗೆ ಬೇಕಾದಷ್ಟು ಉಂಡೆಗಳನ್ನು ತೆಗೆದುಕೊ! ಆಮೇಲೆ ಸುಳ್ಳಿನ ಹೊರೆಯನ್ನು ನನ್ನಮೇಲೆ ಹೊರಿಸುವಿಯಂತೆ.

ತ್ರಿಶಂಕು— ನಾನು ಕೂಗಿದೆನೆ?—ಕಿವಿ ಕೆಟ್ಟಿದೆ; ತಲೆ ಸರಿಯಿಲ್ಲ ನಿನಗೆ—ನಿನ್ನ ಹೆಂಡದ ಬುರುಡೆ ಹಾಳಾಗ!—ಒಡೆದು ಚೂರಾಗ!—ನೀನು ಕುಡಿಯದೆ ಹೋಗ!—ಗಂಟಲು ಕಟ್ಟಿಹೋಗ!—ನಿನ್ನ ರಕ್ಕಸಗೆ ರೋಗ ತಗಲಿ ಮಣ್ಣು ತಿಂದು ಹೋಗ!—ನಿಮ್ಮಿಬ್ಬರನ್ನೂ ಮಾರಿ ಬಡಿದುಕೊಂಡು ಹೋಗ!—

ಶನಿಶಕ್ತಿ— (ನಗುವನು) ಹ! ಹ! ಹಹಹ!

ಭೀಮಣ— ಹುಂ, ನಿನ್ನ ಕತೆ ಮುಂದೆ ಸಾಗಲಿ! (ತ್ರಿಶಂಕುಗೆ) ಇನ್ನೂ ಸ್ವಲ್ಪ ದೂರ ಹೋಗಿ ನಿಲ್ಲು!

ಶನಿಶಕ್ತಿ— ಹುಂ, ಹೇರು ಅವನಿಗೆ, ಚೆನ್ನಾಗಿ! ಬೇಕಾದರೆ ನಾನೂ ಸಹಾಯಕ್ಕೆ ಬರುತ್ತೇನೆ!

ಭೀಮಣ— ಇನ್ನೂ ಸ್ವಲ್ಪ ದೂರ ನಿಲ್ಲು. (ಶನಿಶಕ್ತಿಗೆ) ಹುಂ, ಈಗ ಹೇಳು!

ಶನಿಶಕ್ತಿ— ಹಿಂದೆ ನಾನೊರೆದಂತೆ, ಹಗಲಿನಲಿ ನಿದ್ದೆ ಗೈ-
ವುದು ಅವನ ಪದ್ಧತಿಯು, ಮೊದಲು ಅವನ ಹೊತ್ತಗೆಗ-
ಳೆಲ್ಲವನು ಸುಲಿದು, ಆಮೇಲೆ ಅವನ ತಲೆಯಿಂದ
ಮೆದುಳನೆಳೆಯಲು ಬಹುದು. ಸೌದೆಯಿಂ
ಬುರುಡೆಯಂ ನುಚ್ಚುನೂರಾಗೊಡೆದು, ಮೊನೆಚಾದ
ಕಟ್ಟಿಗೆಯ ಇಟ್ಟಿಯಿಂ ತಿವಿದು, ಕೂರಸಿಯಿಂದ
ತುಂಡರಿಸಿ, ಪರ್ದುಗಳ್ಗೆ ಬಿರ್ದಿಕ್ಕಬಹುದು.
ಮೊದಲವನ ಗ್ರಂಥಗಳನೆಲ್ಲ ಕದಿಯಲೆ ಬೇಕು;
ಮರೆಯದಿರು, ಪುಸ್ತಕಗಳಿಲ್ಲದಿರೆ ಅವನೊಂದು
ಮಣ್ಮುದ್ದೆ; ನನ್ನಂತೆ! ಮಂತ್ರಗಳೆ ಅವನ ಬಲ.
ಅವನ ಕೈವಶವಾಗಿರುವ ದೆವ್ವಗಳು ಕೂಡ
ನನ್ನಂತೆ ಒಳಗೊಳಗೆ ಅವನನ್ನು ಹಳಿಯುತಿವೆ.

ಗ್ರಂಥಗಳನುರಿಸಿಬಿಡು : ನಮಗೆ ಜಯವಾದಂತೆ
ಆಮೇಲೆ ! —ಅವನ ಬಳಿ ಬೆಲೆಯುಳ್ಳ ವಸ್ತುಗಳು
ಬಹಳವಿವೆ. ಅವನ ಮಗಳವುಗಳಲಿ ಅತ್ಯಂತ
ಬೆಲೆಯುಳ್ಳ ವಸ್ತು ! ಸೌಂದರ್ಯದಲಿ ಅವಳು
ದೊರೆಯಿಲ್ಲದವಳೆಂದು ಅವನೆ ಹೇಳುವನು.
ನನ್ನ ತಾಯಿಯ ಹೊರತು, ಇವಳ ಹೊರತು ನಾನಾವ
ರಮಣಿಯನು ಕಂಡಿಲ್ಲ. ಅವನ ಮಗಳಾ ಚೆಲ್ವಿ-
ನೆದುರಿನಲಿ ನನ್ನ ತಾಯಿಯು ಕರಿಯ ಕಸವೆಂದೆ
ಹೇಳುವೆನು ! ನನ್ನ ತಾಯಿಯೊಳೆನಗೆ ಭಕ್ತಿಯಿದೆ !

ಬೀಮಣ— ಹಾಗಾದರಾ ರಮಣಿಯು ಅನಿತು ಸುಂದರಿಯೆ ? ಬಿಡು, ರಕ್ಕಸಾ, ಅವನನ್ನು ಕೊಂದೇ ಬಿಡುವೆನು. ಅವನ ಮಗಳೂ ನಾನೂ ಅರಸ ಅರಸಿಯರಾಗಿ ರಾಜ್ಯವನ್ನಾಳುವೆವು. ಸುಖದಿಂದ ಬಾಳುವೆವು !—ತ್ರಿಶಂಕೂ ನೀನೂ ಮಂತ್ರಿಗಳಾಗಿರಿ.—ಏನಯ್ಯಾ, ತ್ರಿಶಂಕು, ನಿನಗೆ ಸಮ್ಮತವೆ ?

ತ್ರಿಶಂಕು— ಭಲಾ ! ನಮ್ಮ ಪುಣ್ಯವೆ ಪುಣ್ಯ !

ಬೀಮಣ— ತ್ರಿಶಂಕು, ಬಾ ಇಲ್ಲಿ. ಬಾ ಇಲ್ಲಿ. ನಿನ್ನ ಕೈಯನ್ನು ಇತ್ತ ನೀಡು. (ಕೈಹಿಡಿದು) ನಿನ್ನನ್ನು ಹೊಡೆದುದು ತಪ್ಪಾಯ್ತು! ಆದರೆ ಬದುಕಿರುವ ತನಕ ನಾಲಗೆಯನ್ನು ಸ್ವಲ್ಪ ಹತೋಟಿಯಲ್ಲಿ ಇಟ್ಟುಕೊ !

ಶನಿಶಕ್ತಿ— ಇನ್ನು ಅರೆಗಳಿಗೆಯಲಿ ಅವನು ಮಲಗುವನು.
ಆಗ ಕೊಲ್ಲುವೆಯೇನು ?

ಬೀಮಣ— ನಿನ್ನಾಣೆ ! ಕೊಲ್ಲುವೆನು !

ಕಿನ್ನರ— ನನ್ನೊಡೆಯನಿಗೆ ಇದನರುಹುವೆನು.

ಶನಿಶಕ್ತಿ— ನಿನ್ನ ಸಾನ್ನಿಧ್ಯದಲಿ ಆನಂದವಾದಪುದು
ಎನಗೆ. ನೀನಾಗ ಹಾಡಿದ ಸಮರ ಗೀತೆಯನು
ಇನ್ನೊಮ್ಮೆ ಹಾಡುವೆಯಾ ದೇವ ?

ಭೀಮಣ— ರಕ್ಕಸಾ, ನೀನೇನು ಹೇಳಿದರು ಮಾಡುವೆನು. ಸರಿಯೋ ತಪ್ಪೋ!—ಬಾ, ತ್ರಿಶಂಕು, ಹಾಡೋಣ! (ಹಾಡುವರು)

ವೀರ ಧೀರ ಶೂರರೆಲ್ಲ
ಬೇಗ ಬನ್ನಿರಿ!
ಬಿಲ್ಲು ಬಾಣಗಳನು ಹಿಡಿದು
ಹಾರಿ ಬನ್ನಿರಿ!
ಸಮರಧರೆಗೆ ಪೋಗುವಾ!
ಶತ್ರುಗಳನು ತಾಗುವಾ!
ಹಿಡಿದು, ಬಡಿದು, ತಲೆಯ ಕಡಿದು,
ಬಿಸಿಯ ರಕ್ತವನ್ನು ಕುಡಿದು,
ಇರಿದು, ಮುರಿದು, ತರಿದು, ಹರಿದು,
ಚುಚ್ಚಿ, ಕೊಚ್ಚಿ, ಸುಣ್ಣಸರೆದು,
ಜಯವ ಹೊಂದಿ ಮರಳುವಾ!
ಭಟರೆ, ಗೆದ್ದು ತೆರಳುವಾ!
ವೀರ ಧೀರ ಶೂರರೆಲ್ಲ
ಬೇಗ ಬನ್ನಿರಿ!
ಬಿಲ್ಲು ಬಾಣಗಳನು ಹಿಡಿದು
ಹಾರಿ ಬನ್ನಿರಿ!

ಶನಿಶಕ್ತಿ— ರಾಗ ಸರಿಯಾಗಿಲ್ಲ.

[ಕಿನ್ನರನು ತಾಳಹಾಕಿ ಆ ರಾಗವನ್ನು ಬಾರಿಸುವನು.]

ಭೀಮಣ— ಇದಾರ ಗಾನ?

ತ್ರಿಶಂಕು— ಮಾರುತ ಮಹಾಶಯನು, ನಮ್ಮ ಹಾಡಿಗೆ ತಕ್ಕಹಾಗೆ ತಾಳ ಹಾಕುತ್ತಿರುವನು.

ಭೀಮಣ— ನೀನು ನಿಜವಾಗಿಯೂ ಮನುಷ್ಯನಾಗಿದ್ದರೆ ನಿನ್ನ ನಿಜರೂಪವನ್ನು ತೋರು. ದೆವ್ವವಾಗಿದ್ದರೆ ಮನಸ್ಸು ಬಂದಹಾಗೆ ಮಾಡು.

ತ್ರಿಶಂಕು— ದಮ್ಮಯ್ಯ! ನನ್ನಿಂದ ತಪ್ಪಾಗಿದ್ದರೆ ಕ್ಷಮಿಸು! ಊರಿಗೆ ಹೋದಮೇಲೆ ಕೋಳಿಯನ್ನಾಗಲಿ, ಕುರಿಯನ್ನಾಗಲಿ ಯಾವ ಹರಕೆಯನ್ನು ಬೇಕಾದರೂ ಸಲ್ಲಿಸುವೆನು!

ಬೀಮಣ— ಸತ್ತರೆ ನಿನ್ನ ಋಣ ತೀರಿತು! ನೀನಾರು? ನೋಡಿಯೇ ಬಿಡುತ್ತೇನೆ.—(ಮುಂದುವರಿದು ಹೆದರಿ) ಅಯ್ಯೋ ಕಾಪಾಡು! ಕಾಪಾಡು!

ಶನಿಶಕ್ತಿ— ಏನು, ಹೆದರಿಬಿಟ್ಟೆಯಾ?

ಬೀಮಣ— ಎಲ್ಲಾದರೂ ಉಂಟೆ? ಬೀಮಣಗೆ? ಹೆದರಿಕೆ?

ಶನಿಶಕ್ತಿ— ಹೆದರದಿರು. ಇಲ್ಲಿ ಯಾವಾಗಲೂ ಸದ್ದುಗಳು
ತುಂಬಿರುವ ದ್ವೀಪವಿದು. ಗಾನಗಳು ಸಂತೋಷ
ವೀಯುವುವು. ಅದು ಹೊರತು ನೋಯಿಸವು.
ಕೆಲವು ಸಲ ನೂರಾರು ವಾದ್ಯಗಳು ಕರ್ಣದೆಡೆ
ಹಾಡುವುವು; ಕೆಲವು ಸಲ ತಂತಿಗಳ ಮಿಡಿಯುವುವು.
ಕೆಲವು ಸಲ ನಾನು ಮಲಗಿ ಎದ್ದು ತಿರುಗುತಿರೆ
ಮೃದುಮಧುರ ವಾಣಿಗಳು ಮರಳಿ ನಾನ್ ಜೋಂಪಿಪೊಲು
ಜೋಗುಳವ ಹಾಡುವುವು.—ಕನಸಿನಲಿ ಮೋಡಗಳು
ಬಾಯ್ದೆರೆದು, ಮೈಮೇಲೆ ಉದುರುವಂತಿಹ ಹೊಳೆವ
ರತ್ನಗಳ ರಾಶಿಯನು ಮೆರೆದಪವು. ಎಚ್ಚೆತ್ತು,
ಆ ಕನಸುಗಳೆ ಮರಳಿ ಬರಲೆಂದು ಮಲಗುವೆನು.

ಬೀಮಣ— ಹಾಗಾದರೆ ಇದು ನನಗೆ ಸುಖದ ಸಾಮ್ರಾಜ್ಯವೇ ದಿಟ! ಒಂದು ಬಿಡಿಕಾಸು ಖರ್ಚಿಲ್ಲದೆ ಅಮರ ಸಂಗೀತ ದೊರಕುವುದು.

ಶನಿಶಕ್ತಿ— ಹೌದು. ಆದರದು ಭೈರವನ ಕೊಂದ ಬಳಿಕ.

ಬೀಮಣ— ಅದೇನು ಆಗಿಹೋಗುತ್ತೆ!—ಓಹೋ! ಅದನ್ನು ಆಗಲೇ ಸವಿಗನಸ್ಸಿನಲಿ ಸಿಕ್ಕಿ ಮರೆತುಬಿಟ್ಟಿದ್ದೆ!

ತ್ರಿಶಂಕು— ಗಾನವು ದೂರ ದೂರಕ್ಕೆ ಜಾರುತ್ತಿದೆ. ಈಗ ಅದನ್ನೇ ಹಿಂಬಾಲಿಸೋಣ. ಆಮೇಲೆ ನಮ್ಮ ಕೆಲಸಕ್ಕೆ ತೊಡಗೋಣ!

ಬೀಮಣ— ದಾರಿ ತೋರು, ರಕ್ಕಸಾ, ಮುಂದೆ ನಡೆ!—ಆಹಾ! ಈ ಗಗನದ ಗಾಯಕನು ಕಣ್ಣಿಗೆ ಬಿದ್ದಿದ್ದರೆ!—ಆಹಾ! ಎನಿತಿಂಪು! [ಹಿಂದೆಯೆ ತೆರಳುವನು.]

ತ್ರಿಶಂಕು— (ಶನಿಶಕ್ತಿಗೆ) ನಿಲ್ಲುವೆ ಏಕೆ? ಬಾ ಹೋಗೋಣ!

(ಹೊರಡುವರು)

---

## ದೃಶ್ಯ ೭

[ದ್ವೀಪದ ಮತ್ತೊಂದು ಭಾಗ. ರಣನಾಯಕ, ರಂಗನಾಯಕ, ರುದ್ರನಾಯಕ, ಜಯದೇವರು ಬರುವರು.]

ಜಯದೇವ— (ಬಿಸುಸುಯ್ದು) ಮುಂದೊಂದು ಹೆಜ್ಜೆಯನು ಇಡಲಾರೆ.
ಶಿವ ಶಿವಾ!
ನನ್ನ ಮುಂದಿ ಎಲುಬುಗಳು ಕಡಲೆಯಂ ಬೀಸುತಿವೆ.—
ಇದು ಚಕ್ರಭೀಮ ಕೋಟೆಯೆ ಹೌದು. ಎನಿತೊಳವು
ಸುತ್ತುಗಳು! ಏನು ತಿರುಗಣೆಗಳು! ದಿಣ್ಣೆಗಳು,
ಕಣಿವೆಗಳು! ಕಣಿವೆಗಳು, ದಿಣ್ಣೆಗಳು! ಏರಿಳಿದು,
ಇಳಿದೇರಿ ಸಾಕಾಯ್ತು! ನೀವಿನಿತು ತಳುವಿದರೆ
ವಿಶ್ರಮಿಸಿಕೊಳ್ಳುವೆನು.

ರಣ— ನಿನ್ನನಾಡುವುದೇಕೆ,
ಜಯದೇವ? ನನ್ನ ಕಾಲ್ಗಳೆ ಸೋತು, ಮುಂದೆ
ನಡೆಯಲಾರದೆಯೆ ಬರಿದೆ ತಡುವುತಿವೆ! ಕುಳಿತು ದಣಿ
ವಾರಿಸಿಕೊ.—ನನಗಿನಿತು ನೆಚ್ಚಿಲ್ಲ; ಮುಳುಗಿದನು!
ನನ್ನಣುಗನಳಿದಿಹನು! ಬಿದಿ ಎಮ್ಮ ಸಾಹಸವನ್
ಅಣಕಿಸುತಲಿರ್ಪುದು! ಹೋದನೇ? ಹೋಗಲಿ!
ಮಾಳ್ಪುದೇನ್?

ರುದ್ರ— (ರಂಗನಾಯಕಗೆ) ನನಗೇನೊ ಅವನೀ ಪರಿಯ ಕಂಡು
ಸಂತೋಷವುಕ್ಕುತಿದೆ. ನಮ್ಮ ಹವಣನು ಮರೆಯದಿರು.
ಸಮಯ ದೊರೆತಾಗ ಅದನು ಸಾಧಿಸಲೆ ಬೇಕು.

ರಂಗ— (ರುದ್ರಗೆ) ಇನ್ನೊಂದು ಸಮಯ ಸಿಕ್ಕಿದರೆ ಬಿಡಲಾಗದು.

ರುದ್ರ— (ರಂಗಗೆ) ಇಂದಿನಿರುಳೇ ಸಾಕು. ತಿರುತಿರುಗಿ ಬಳಲಿಹರು.
ಗಾಢನಿದ್ರೆಯ ತಳೆದು ಎಚ್ಚರಿಕೆ ತಪ್ಪುವರು;
ಆಗ ಮಾಡಿದರಾಯ್ತು.

ರಂಗ— ಇಂದಿನಿರುಳೇ ಇರಲಿ.

ಇನ್ನದನು ಕುರಿತಾಡುವುದು ಬೇಡ! ಸುಮ್ಮನಿರು!

[ಗಾನ ಕೇಳಿಬರುವುದು]

ರಣ— ಏನು ಸಂಗೀತವಿದು? ಮಿತ್ರರಿರಾ ಕೇಳಿ!

ಜಯ— ಏನಿದದ್ಭುತ ಗಾನ!

[ಭೈರವನು ದೂರ ಅದೃಶ್ಯನಾಗಿ ಬರುವನು. ಬಳಿಯಲ್ಲಿ ವಿಚಿತ್ರ ಆಕೃತಿಗಳು ಹಾಡುತ್ತ ಬಂದು ಕೈಲಿರುವ ಹಣ್ಣುಹಂಪಲುಗಳನ್ನು ಮುಂದಿಟ್ಟು, ನೃತ್ಯಮಾಡಿ ಎಲ್ಲರನ್ನೂ ಫಲಾಹಾರಕ್ಕೆ ಆಹ್ವಾನಿಸಿ ಮಾಯವಾಗುವುವು.]

(ವಿಚಿತ್ರಾಕೃತಿಗಳ ಹಾಡು)

ಕಿನ್ನರ ಕಿಂಕರರೆಲ್ಲರು ಬನ್ನಿ ;
ಬನದಿಂ, ಮಲೆಯಿಂ, ಕೊಳದಿಂ ಬನ್ನಿ ;
ಕಳಿತಿಹ ಗೊಂಚಲು ಹಣ್ಗಳ ತನ್ನಿ,
ಬೆಟ್ಟದ ಬಾಳೆಯ ಗೊನೆಗಳ ತನ್ನಿ,
ಚಿನ್ನದ ತೊಳೆಗಳ ಹಲಸನು ತನ್ನಿ,
ಬಣ್ಣದ ಮಾವಿನ ಹಣ್ಣನು ತನ್ನಿ,
ತಿಳಿಗೊಳದಿಂ ತಿಳಿನೀರನು ತನ್ನಿ,
ಕಂಪನು ನೀಡುವ ಬೇರ್ಗಳ ತನ್ನಿ;
ಪೊಸ ಸುಳಿಬಾಳೆಯ ಎಲೆಗಳ ತನ್ನಿ,
ತಳಿರಿನ ದೊನ್ನೆಯ ಬಟ್ಟಲ ತನ್ನಿ;
ಕಿನ್ನರ ಕಿಂಕರರೆಲ್ಲರು ಬನ್ನಿ ;
ಬನದಿಂ, ಮಲೆಯಿಂ, ಕೊಳದಿಂ, ಬಯಲಿಂ,
ಬನ್ನಿಂ! ಬನ್ನಿಂ! ಬೇಗನೆ ಬನ್ನಿಂ! [ತಟ್ಟೆಗಳನ್ನು ಇಟ್ಟು]
ಹಸಿದಿಹ ಅತಿಥಿಗಳೆಲ್ಲರು ಬನ್ನಿ;
ತಂದಿಹ ವಿಧವಿಧ ಫಲಗಳ ತಿನ್ನಿ!
ಮಾವನು ತಿನ್ನಿ, ಹಲಸನು ತಿನ್ನಿ,
ನೀರನು ಕುಡಿಯಿರಿ ಬನ್ನಿ! ಬನ್ನಿ! [ಹೋಗುವರು]

ರಣ— ಶಿವನೇ ಕಾಪಾಡು !—ಇವೇನು ರೂಪಗಳು ?

ರಂಗ— ಏಂ ಸೂತ್ರಗೊಂಬೆಗಳ ಕುಣಿದಾಟಂ !—ನಾನೀಗ
ನಂಬಿದೆನು ದಶಶಿರದ ರಾಕ್ಷಸರು ಇಹರೆಂದು.
ಈಗಳುಂ ರಾವಣನು ಲಂಕೆಯನಾಳ್ವನೆಂದು !

ರುದ್ರ— ಇನ್ನೇಕೆ ಸಂದೇಹ ? ಈಗಳಾದುದ ಕಂಡು
ಎಲ್ಲವನು ನಂಬುವೆನು. ಕಬ್ಬಿಗರ ಬಣ್ಣನೆಯೊ-
ಳೊಂದಿನಿತುಂ ಸಟೆಯಿಲ್ಲ. ಇದೆ ಎನ್ನುವರು ಮೂರ್ಖರು !

ಜಯದೇವ— ನಾವಿದನು ನಗರದಲಿ ಹೇಳಿದರೆ ಜನರು
ನಂಬುವರೆ ! ನಾವಿಂಥ ಜನಗಳನು ಕಂಡೆವೆನೆ—
ಏಕೆಂದರವರು ಈ ದ್ವೀಪದ ನಿವಾಸಿಗಳೆ
ಇರಬೇಕು.—ರೂಪಗಳು ಬೇರಾದೊಡೇನಂತೆ ?
ಮಾನವರ್ ಅರಿಯದಿಹ ಅತಿಥಿಸತ್ಕಾರವಿದು !
ಮನುಜರಲಿ ಈ ವಿನಯ ಮರ್ಯಾದೆಗಳು ವಿರಳ !
ಇಲ್ಲ ಎಂದರು ಎನ್ನಬಹುದು !

ಭೈರವ— (ಸ್ವಗತ) ಧರ್ಮಾತ್ಮನ್,
ಪುಣ್ಯಾತ್ಮನಹೆ ನೀನು. ಸನ್ನಿಯನೆ ನುಡಿದಿರ್ಪೆ.
ಏಕೆಂದರಲ್ಲಿರ್ಪ ಮೂವರಲಿ ಪಿಶಾಚಗಳ
ಮೀರಿರ್ಪ ನಕ್ರಾತ್ಮರೊಳರು !

ರಣ— ಏನು ರೂಪ ! ಏನು ಗಾನ ! ಏನು ಅಭಿನಯ !

ಭೈರವ— (ಸ್ವಗತ) ಈಗ ಹೊಗಳುವೆ ಏಕೆ ? ಮುಂದಪ್ಪುದನು ಕಂಡು
ತರುವಾಯ ಹೊಗಳುವರೇ ಜಾಣರಾದಪರು.

ರುದ್ರ— ಎವೆಯಿಕ್ಕುವುದರಲ್ಲಿಯೇ ಮಾಯವಾದರು !

ರಂಗ— ಹೋದರೆಮಗೇನಂತೆ ? ಹಣ್ಣುಗಳನೀ ಎಡೆಯೆ
ಬಿಟ್ಟಿಹರು. ’ ನಮಗೂ ಹಸಿವಾಗಿಹುದು ತೊಳಲಿ.
ಬನ್ನಿಂ ! ಚೆನ್ನಾಗಿ ಭುಜಿಸುವಂ !

ರಣ— ಶಿವಶಿವಾ, ನಾನೊಲ್ಲೆ !

ಜಯದೇವ— ಬೆದರಲೇತಕೆ ಜೀಯ? ಬಾಲ್ಯದಲಿ ಎನಿತೆನಿತೊ
ಕತೆಗಳನು ಕೇಳಿದೆವು: ಹೊಟ್ಟೆಯಲಿ ಕಣ್ಣುಳ್ಳ
ದಾನವರು! ನೆತ್ತಿಯಲಿ ಬಾಯುಳ್ಳ ಮಾನವರು!
ಶಿರದಲ್ಲಿ ಕೊಂಬುಳ್ಳ ರಕ್ಕಸರು! ಪಕ್ಕದಲಿ
ರೆಕ್ಕೆಗಳನಾಂತಿರ್ಪ ಕವಡು ರಕ್ಕಸಿಯರು!
ಈಗಳಾದರೊ ಏನು? ಕಂಡಕಂಡವರೆಲ್ಲ
ಕಂಡೆವೆಂದೊರೆಯುವರು!—ಇದಕಳುಕಲೇಕೆ?

ರಣ— ಮೊದಲ್ ನಾನೆ ತೊಡಗುವೆನು: ಮುದುಕನಾಗಿಹೆನು;
ನನ್ನ ಕಾಲವದಾಯ್ತು!—ನನಗೆ ಬೇಕಾದವನು
ಬಾಳದೆಯೆ ಹೋದನು! ಬದುಕಿ ನನಗಿನ್ನೇನು?
ಕೆಳದಿಯ ನಾಯಕರೆ, ಬನ್ನಿ ನೀವೂ ತೊಡಗಿ.

[ಮಿಂಚು, ಗುಡುಗು; ಕಿನ್ನರನು ಘೋರ ರಾಕ್ಷಸಿಯ ವೇಷದಿಂದ ನುಗ್ಗಿಬರಲು ಹಣ್ಣುಹಂಪಲುಗಳು ಮಾಯವಾಗುವುವು.]

ಕಿನ್ನರ— ನಿಮ್ಮಲ್ಲಿ ಮೂರು ಜನ ಪಾಪಿಗಳಿಹರು! ಬಿದಿಯು—
ಬೊಮ್ಮಾಂಡಮನಿತುಮಂ ಆಳುತಿಹ ಬಿದಿಯು,
ಹೇಸಿ ನರಕವು ಕೂಡ ಉಗಳಿಯಟ್ಟಿದ ನಿಮ್ಮನ್
ಈ ದ್ವೀಪಕೆಸೆದಿಹುದು. ಮರುಳುಗಳ ಗೊಟ್ಟಿಯೊಳು
ಬದುಕಲರ್ಹರು ನೀವು. ಅದರಿಂದ ದೆವ್ವಗಳ
ನೆಲೆಯು ಬೀಡಾಗಿರ್ಪ ಈ ದ್ವೀಪದಲಿ ನೀವು
ತೊಳಲುವಿರಿ. ನಿಮ್ಮೆಲ್ಲರನು ಮರುಳರನ್ನಾಗಿ
ಮಾಡಿಹೆನು. [ಎಲರೂ ಕತ್ತಿಗಳನ್ನು ಒರೆಗಳಚುವರು]
ಛೀ! ಛೀ! ಮೂರ್ಖರಿರಾ, ಹೇಡಿಗಳು
ನೀವೇನ ಮಾಡುವಿರಿ? ವಿಧಿಯ ಕಿಂಕರರಾವು;
ನಿಮ್ಮ ಕೈಲಿಹ ಕತ್ತಿಗಳು ನಾವೆ. ಚೀರುತಿಹ
ಗಾಳಿಗಳ ಖಂಡಿಸಿರಿ! ಭೋರ್ಗರೆವ ನೀರುಗಳ
ಕತ್ತರಿಸಿ! ಎನ್ನ ಮೈನವಿರನೊಂದಾದೊಡಂ

ಕೀಳಲಾರದು ನಿಮ್ಮ ಮೈಬಲ್ಮೆ. ಎಮ್ಮವರು
ಎನ್ನಂತೆ ಬಲವಂತರಾಗಿಹರು, ನೀವೀಗ
ಕತ್ತಿಗಳ ಭಾರದಿಂ ಕುಸಿಯುವಿರಿ! ಅವುಗಳನು
ಎತ್ತಲಾರದೆ ಕೆಳಗೆ ಬಿಸುಡುವಿರಿ! [ಹಾಗೆ ಮಾಡುವರು]

ಮರೆಯದಿರಿ—

ಅದನೊರೆಯೆ ಇಲ್ಲಿಗೈತಂದಿಹೆನು—ನೆನೆಯಿರಿ!
ನೀವು ಮೂವರು ಸೇರಿ ಭೈರವನಾಯಕನ
ರಾಜ್ಯವನು ಮೋಸದಿಂದಪಹರಿಸಿ, ವಾಹಿನಿಯೊ-
ಳಾತನಂ, ಮಗಳೊಡನೆ ತೇಲಿದಿರಿ. ನೆನಪಿದೆಯೆ?
ಅದರಿಂದ ಮಿಗವಕ್ಕಿ ಹೊಳೆ ಮಲೆಗಳೆಲ್ಲವುಂ
ನಿಮ್ಮ ಕೇಡನೆ ಬಯಸಿ ಕಾದಿಹವು. ಅದರಿಂದ,
ರಣನಾಯಕನೆ, ನಿನ್ನ ಕುವರನಂ ಅಪಹರಿಸಿ
ಕೊಂಡಿಹವು. ನೀವಳಿಯುವನ್ನೆವರಂ ನಿಮ್ಮ
ಪೀಡನೆಯೆ ನವಮ್ಮಾಟವಾದಪುದು. ದ್ವೀಪದಲಿ
ನಿಮ್ಮ ಬಾಳನಿತುಮುಂ ನಿಮ್ಮ ಪಶ್ಚಾತ್ತಾಪ,
ನಿಮ್ಮ ಪ್ರಾಯಶ್ಚಿತ್ತಗಳಲಿ ಪೂರೈಸುವುದು!

[ಗುಡುಗುವುದು. ಕಿನ್ನರನು ಮಾಯವಾಗುವನು. ಎಲ್ಲ ಬೆರಗಾಗೆ]

ಭೈರವ— (ಸ್ವಗತ) ಕಿನ್ನರಾ, ನಿನ್ನ ಪಾತ್ರವ ನೀನು ಚೆನ್ನಾಗಿ
ನಟಿಸಿರ್ಪೆ. ಭೀಷಣತೆ ಗಾಂಭೀರ್ಯಗಳೆರಡುಂ
ತುಂಬಿರ್ದುವದರಲ್ಲಿ. ನಾನು ಪೇಳ್ದುದನೆಲ್ಲ
ನಿಷ್ಠೆಯಿಂದೆಸಗಿರ್ಪೆ. ನನ್ನ ಕಿಂಕರರೆಲ್ಲ
ನಿನ್ನಂತೆ ತಂತಮ್ಮ ಕಜ್ಜಗಳನೆಸಗಿಹರು.
ನಿನ್ನ ಮಾಯೆಯ ಬಲದೊಳ್ ಎನ್ನರಿಗಳನಿಬರುಂ
ಹುಚ್ಚೆದ್ದು ಹೋಗಿಹರು; ನನ್ನ ಕೈಯೊಳಗಿಹರು.
ಇವರೆಲ್ಲಮಿಂತಿರ್ಕೆ. ತರುಣ ಶಿವನಾಯಕನ—
ಮರಣ ಹೊಂದಿಹನೆಂದು ಇವರೆಲ್ಲ ತಿಳಿದಿರುವ—

ತರುಣ ಶಿವನಾಯಕನ ಬಳಿಗೈದುವೆನು ; ಅಲ್ಲಿ
ಗೌರಾಂಬೆಯೆಂತಿರ್ಪಳದನು ನೋಡುವೆನು. (ಹೊರಡುವನು)

ಜಯದೇವ— ನಾಯಕರೆ, ಇಂತೇಕೆ ನಿಂತಿರ್ಪಿರಿ?

ರಣ— ಶಿವಶಿವಾ! ಶಿವಶಿವಾ! ಭೈರವನಾಯಕನ
ಪೆಸರನಾರೋ ಪೇಳಿದಂತಾಯ್ತು: ಗಾಳಿಯೋ?
ವಾಹಿನಿಯೊ? ಗುಡುಗು ಕೂಗಿತೊ ಏನೊ? ನಾನರಿಯೆ.
ನಾನು ನೆಗಳಿದ ಪಾಪವನು ಹೇಳಿ ಹಂಗಿಸಿತು.
ಅದರಿಂದಲೆನ್ನ ಸುತನ್ ಅಳಿದನೆಂದೊರೆಯಿತು.
ಹೊಳೆಯ ಬುಡದಲಿ ಮಲಗಿ ನಿದ್ರಿಸುತಲಿಹನವನು.
ನಾನವನ ಪಕ್ಕದೊಳೆ ಪೋಗಿ ನಿದ್ರಿಪೆನ್! [ನಿಷ್ಕ್ರಮಣ]

ರಂಗ— ಕೆಚ್ಚಿದ್ದರೆ ಅವುಗಳಿಗೆ, ದೆವ್ವಗಳು ಒಂದೊಂದೆ
ಬರಲಿ ನೋಡುವೆನಾಗ. ಕತ್ತರಿಸಿ ಕೆಡಹುವೆನು!

ರುದ್ರ— ನಾನೂ ನೆರವಾಗುವೆನು. [ಇಬ್ಬರೂ ಹೋಗುವರು]

ಜಯದೇವ— ಪಾಪದಿಂದಿವರ್ಗೆಲ್ಲ
ಎದೆಗೆಚ್ಚು ತೊಲಗಿಹುದು. ಎಂದೊ ಕುಡಿದಾವಿಷವು
ಇಂದು ಮೈಗೇರಿಹುದು! ಏನು ಮಾಳ್ಪರೊ ಕಾಣೆ!
ಅವರ ಹಿಂದೆಯೆ ಹೋಗಿ ಸಂತೈಸಲೆಳಸುವೆನು!
(ಹೊರಡುವನು)

## ದೃಶ್ಯ ೮

[ಭೈರವನಾಯಕನ ಗುಹೆಯ ಮುಂದೆ. ಭೈರವನಾಯಕ, ಶಿವನಾಯಕ, ಗೌರಾಂಬೆ ಇವರು ಬರುವರು.]

ಭೈರವ— ಅನಾಗರಿಕನಂದದಲಿ ಬಿರುನುಡಿಗಳಿಂ ಬೈದು,
ಇಸಿತು ಕಡುಗೆಯ್ಮೆಯಲಿ ನಿನ್ನ ಸೂಂಕಿದೆನ್; ಅದಕೆ
ತಗುವ ಸನ್ಮಾನವನೆ ಮಾಡುವೆನು; ತಕ್ಕ ಬಹು-
ಮಾನವನೆ ನೀಡುವೆನು: ನನ್ನ ಜೀವನದುಸಿರು,
ನನ್ನ ಬಾಳ್ಮೆಯ ಕಣ್ಣೆ ತಾನಾಗಿರುವ ನನ್ನ
ಸುಕುಮಾರಿ ಗೌರಾಂಬೆಯನು ನಿನಗೆ ಧಾರೆ
ಎರೆದಿರ್ಪೆ. ನಿನ್ನೊಲವಿನಾಳವನು ನೋಡಲು
ಅಂತೆಸಗಿದೆನು; ಬರಿದೆ ಚಿಂತೆಗೊಳಗಾಗದಿರು.
ಕಷ್ಟಾಪಮಾನಗಳ ಒರೆಗಲ್ಲಿನಲಿ ನಿನ್ನ
ಒಲ್ಮೆಪೊನ್ನನು ತಿಕ್ಕಿ ನೋಡಿಹೆನು. ಚಿನ್ನದೊಳು
ಇನ್ನಾವ ಕೀಳ್ಪೊನ್ನು ಬೆರೆತಿಲ್ಲವೆಂದರಿತೆ.—
ಬಾನ್ವೆಣ್ಣೆ, ತಿರೆವೆಣ್ಣೆ, ತೊರೆವೆಣ್ಣೆ, ನೀವೆಲ್ಲ
ಸಾಕ್ಷಿಯಾಗಿರಿ, ನನ್ನ ಪುತ್ರಿಯನು ಸಂತಸದಿ
ಶಿವನಾಯಕಗೆ ಧಾರೆಯೆರೆದು ಇತ್ತುದಕ್ಕೆ!—
ಗೌರಾಂಬೆ ಅತಿಚೆಲುವೆ. ಗೌರಾಂಬೆ ಅತಿಸುಗುಣೆ.
ನಾಯಕನೆ, ತಂದೆ ಮಗಳನು ಬಣ್ಣಿಸುವನೆಂದು
ತಿಳಿಯದಿರು. ಬಣ್ಣನೆಗಳೆಲ್ಲವನು ಹಿಂದಿಕ್ಕಿ
ಮುಂಚುವುದು ನನ್ನ ಗೌರಿಯ ಶೀಲ!

ಶಿವ— ಮಾವ,
ನನ್ನಿಯಾಡಲು ನಂಬದಿಹುದೆಂತು? ಬಾಂದಳದ
ದನಿಯೊಂದು 'ನಂಬದಿರ್!' ಎಂದರೂ ನಾನೊಪ್ಪೆನ್!

ಭೈರವ— ನಳನಳಿಸುವೀ ಹಸುರಿನಲಿ ಕುಳಿತು ಅವಳೊಡನೆ,
ಮಾತಾಡಿ ನೀವಿರ್ವರೂ ಸೇರಿ ಸರಸದಿಂ

ಬರುವ ಕಾಲದ ಮುಗುದ ಸವಿಗನಸುಗಳ ಕಟ್ಟಿ !—
ಕಿನ್ನರಾ, ಎಲ್ಲಿರ್ಪೆ?   [ಕಿನ್ನರನ ಪ್ರವೇಶ]

ಕಿನ್ನರ— ಬೆಸನೇನು ನನ್ನೊಡೆಯ?

ಭೈರವ— ಕೈಕೊಂಡ ಕಾರ್ಯವನು ನೀನೂ, ನಿನ್ನಾಳುಗಳೂ
ಬಿಡದೆ ನಿರ್ವಹಿಸಿದಿರಿ. ಅಂತಹುದೆ ಇನ್ನೊಂದು
ಮಾಯೆಯನು ತೋರಬೇಕಾಗಿಹುದು. ನಡೆ, ಬೇಗ
ಮೇಳವನು ಕರೆದು ತಾ. ತರುಣ ದಂಪತಿಗಳಿಗೆ
ನನ್ನ ಮಂತ್ರದ ಬಲವ ನೋಡಬೇಕೆಂಬಾಸೆ!
ತೋರ್ಪೆನೆಂದಾನುಂ ಬಾಸೆಯಿತ್ತಿಹೆನು.
ಶೀಘ್ರದಲಿ ಕರೆದು ತಾ.

ಕಿನ್ನರ— ಕರೆತರ್ಪೆನೀಗಳೇ!

ಭೈರವ— ಎವೆಯಿಕ್ಕುವುದರಲ್ಲಿ!

ಕಿನ್ನರ— ಹೋಗಿ ಬಾ, ಕರೆದು ತಾ, ಎಂದು ನೀಂ ಪೇಳ್ವ ಮುನ್ನ,
ಎರಡುಸಾರಿ ಹಿಂದೆ ಮುಂದೆ ಉಸಿರ ನೀನು ಎಳೆವ ಮುನ್ನ,
ತಮ್ಮ ತಮ್ಮ ವೇಷಗಳನು ಧರಿಸಿ ಎಲ್ಲ ಬರುವರು.
ತುದಿಯ ಬೆರಳ ಮೇಲೆ ನಿಂತು ಕುಣಿದು ನಲಿದು ಬರುವರು.
ಶುಕ ಪಿಕಂಗಳಿಂಚರಂಗಳೇಳಿಸುತ್ತ ಬರುವರು.
ನವ ಮಯೂರ ನೃತ್ಯಗಳನು ತೋರಿ, ಮೀರಿ, ಬರುವರು.

ಭೈರವ— ಹೋಗು ನಡೆ ಕಿನ್ನರಾ. (**ಕಿನ್ನರ ಹೋಗುವನು**)
ಮಾತಾಡದಿರಿ. ಕಣ್ದೆರೆದು ಮೌನದಿಂದಿರಿ.

[ಗಾನ **ಕೇಳಿಬರುವುದು**]

[ಬನದೇವಿಯ ಪ್ರವೇಶ.]

ಬನದೇವಿ— ಬನಗಳಧಿದೇವತೆಯು ಬನದೇವಿ ನಾನು,
ಸೌಂದರ್ಯ ದೇವತೆಗೆ ಹಸುರು ಕಣ್ಣಾನು;
ಸುಂದರ ವಸಂತನಿಗೆ ಸುಂದರಿಯು ನಾನು,
ಭೂಮಿದೇವಿಗೆ ನಚ್ಚಿನಾ ಕೆಳದಿ ನಾನು;
ಭೂದೇವಿಗನುದಿನವು ಪಸುರುಡೆಯನುಡಿಸಿ,

ತರತರದ ಕುಸುಮದಾಭರಣಗಳ ತೊಡಿಸಿ,
ಹೊಳೆಹೊಳೆವ ಹಿಮಮಣಿಯ ಮಾಲೆಗಳ ಸೂಡಿ,
ಪೂತ ಪೊಸ ಬಳ್ಳಿಗಳ ಹೊಂಬಳೆಯ ನೀಡಿ,
ಸಿಂಗರಿಸಿ ಕಳುಹುವೆನು ಸೃಷ್ಟಿರಂಗಕ್ಕೆ!
ಮಾನವರೆ, ನಿಮಗೆ ಗೆಲವಕ್ಕೆ! ಸೊಗಮಕ್ಕೆ!

[ನದಿಯ ದೇವತೆಯು ಬರುವಳು.]

ನದಿಯ ದೇವತೆ— ಬೆಟ್ಟದುದಿಯಲಿ ಹುಟ್ಟಿ, ಕಡಲಿಗೆ
ಹರಿವ ಹೊಳೆಗಳ ರಾಣಿಯು.
ಒಮ್ಮೆ ಹಾರುತ, ಒಮ್ಮೆ ಜಾರುತ,
ಒಮ್ಮೆ ನಿಲ್ಲುತ, ಒಮ್ಮೆ ಓಡುತ,
ನಲಿವ ನಾ ಜಲವೇಣಿಯು!

ಚಲಿಪ ಮೀನುಗಳೆನ್ನ ಕಂಗಳು,
ಪೊಳೆವ ಪವಳಗಳೊಡವೆಯು.
ಸಿಂತ ನೀರಿನ ಮೇಲೆ ಮಲಗುವ
ಗಿಳಿಗಳೆದೆಯನು ಹೋಲಿ ತೇಲುವ
ಪದ್ಮಪತ್ರಗಳುಡುಗೆಯು!

ನನ್ನ ಬಲಗಡೆ, ನನ್ನ ಎಡಗಡೆ,
ಶಾಲಿವನಗಳು ನಲಿವುವು.
ನಾನು ಹೋಹೆಡೆಯೆಲ್ಲ ತೃಪ್ತಿಯು,
ನಾನು ನಿಲ್ವೆಡೆಯೆಲ್ಲ ಸೌಖ್ಯವು,
ನನ್ನ ಪೈರುಗಳೊಲಿವುವು!

ಪುಣ್ಯತೀರ್ಥಗಳೆನ್ನೊಳಿರುವುವು,
ಪಾಪಗಳ ನಾ ತೊಳೆಯುವೆ.
ಮುಗಿಲ ಮನೆಯಿಂದೋಡಿ ಬಂದೆನು,
ಶಿವನ ಜಡೆಯನು ತುಳಿದು ನಿಂದೆನು,
ಭಕ್ತರಡಿಗಳ ತೊಳೆಯುವೆ!

ನಾನು ಹೊಳೆಗಳ ರಾಣಿಯು!
ನಲಿವ ನಾ ಜಲವೇಣಿಯು!
ನಾನು ನೀರಜಪಾಣಿಯು!
ನಾನು ಗಂಗೆಯು ವಾಣಿಯು!

[ಮುಗಿಲ ದೇವತೆಗಳ ಪ್ರವೇಶ.]

**ಮುಗಿಲ ದೇವತೆಗಳು—**

ರವಿಯು ಕಡಲ ಮುದ್ದಿಪೆಡೆಯೊಳುದಿಸಿ ಬಂದೆವು.
ಬಿತ್ತರದ ಬಾನಿನಲಿ ತೇಲಿಬಂದೆವು.
ಮಳೆಯು ಬಿಲ್ಲ ಮುಡಿದು, ಸೂಡಿ,
ಗುಡುಗಿನೊಡನೆ ಸರಸವಾಡಿ,
ಮಿಂಚುಗಳನು ಬಳೆಯು ಮಾಡಿ,
ತೇಲಿಬಂದೆವು!
ಭೂಮಿಯೆಲ್ಲ ಸೊಗದೊಳಿಹುದು,
ಪೈರುಪಚ್ಚೆ ಬೆಳೆಯುತಿಹುದು,
ಎಂಬ ಸೊಗದ ಸುದ್ದಿಯನು
ಹೇಳಬಂದೆವು!
ರವಿಯು ಕಡಲ ಮುದ್ದಿಪೆಡೆಯೊಳುದಿಸಿ ಬಂದೆವು.
ಬಿತ್ತರದ ಬಾನಿನಲಿ ತೇಲಿಬಂದೆವು.

ಬಿಸಿಲ ಬೇಗೆಯಿಂದ ಬೆಂದು
ಬಾಡುತಿರುವ ಹೂವುಗಳಿಗೆ
ಅಮರತನವ ನೀಡಲೆಂದು
ಸೊದೆಯ ತಂದೆವು!
ವಿರಹದಗ್ನಿಯಿಂದ ಬೆಂದು
ಬಳಲುತಿರ್ಪ ತರುಣರೆದೆಗೆ
ತಣ್ಪುಮುತ್ತನೀಯಲೆಂದು
ತೇಲಿಬಂದೆವು!

ರವಿಯು ಕಡಲ ಮುದ್ದಿಪೆಡೆಯೊಳುದಿಸಿ ಬಂದೆವು.
ಚಿತ್ತರದ ಚಾಸಿಸಲಿ ತೇಲಿಬಂದೆವು.

[ಊರ್ವಶಿಯು ಬರುವಳು.]

**ಊರ್ವಶಿ—** ರಂಭೆ, ತಿಲೋತ್ತಮೆ, ಮೇನಕೆಯರ ಸಖಿ
ಸಗ್ಗದ ಅಚ್ಚರಿ ಊರ್ವಶಿ ನಾನು;
ಇಂದ್ರನ ನಚ್ಚಿನ ಪೆಣ್ಮಣಿ ನಾನು,
ರಿಸಿಗಳ ತವಸನು ನುಂಗಿದಳಾನು;
ಸೃಷ್ಟಿಯ ಮೋಹಿನಿ ನಾನಾಗಿರುವೆನು
ಮಾಯೆಗೆ ಕಣ್ಣಾಗಿರುವಳು ನಾನು;
ಸವಿ ಸೆರೆಯಲಿ ನಲಿವರ ಕೆಳೆಯಾಗಿಹೆ,
ಶುಷ್ಕ ವಿಮುಕ್ತಿಯ ಶತ್ರುವು ನಾನು!

ಲೋಕಗಳೆಲ್ಲವನನುದಿನ ಸುತ್ತಿ,
ಚಾಗದ ಕೋಂಟೆಗಳೆಲ್ಲವ ಮುತ್ತಿ,
ಭೋಗದ ಬಿಂಜಗಳೆಲ್ಲಿಯು ಬಿತ್ತಿ,
ನಲಿವೆನು ಕಾಮನ ಬಾವುಟವೆತ್ತಿ!
ಮಧುಮಾಸದ ಕೋಗಿಲೆಗಳ ಕೂಡಿ
ಬನ ಬನ ಬನಗಳ ಸಂಚರಿಪೆ;
ಗಿಳಿಗಳ ಕೊರಲೊಳು ನಾನೇ ಹಾಡಿ,
ವಿರಹಿಗಳೆಲ್ಲರನುಪಚರಿಪೆ.

ಬಾ, ಬಾ, ಯುವಕನೆ, ಬನಗಳಲಿ
ತಳಿತಿಹ ಮರಗಳ ನೆಳಲಿನಲಿ
ಒಯ್ಯನೆ ಬಹ ತಂಗಾಳಿಯಲಿ
ಬಾ, ಬಾ, ಊರ್ವಶಿಯಿಹಳಲ್ಲಿ!

[ಎಲ್ಲರೂ ಸೇರಿ ಹಾಡುವರು.]

**ಎಲ್ಲರೂ—** ನರರೊಳ್ಗೆಯ್ಮೆಗೆ ಪರಶಿವ ಮೆಚ್ಚಲಿ!
ಕವಿಗಳು, ಕಲೆಗಳು, ನಾಡೊಳು ಹೆಚ್ಚಲಿ!

ಕಾಲಕೆ ಬುವಿಯಲಿ ಮಳೆಬೆಳೆಯಾಗಲಿ!
ಸಜ್ಜನವೃಂದಕೆ ಚಿರಸುಖವಾಗಲಿ!
ವೀರರು ನಾಡಿನ ಬಸಿರೊಳು ಹುಟ್ಟಲಿ!
ಧರೆಯೊಳು ದೇವರ ರಾಜ್ಯವ ಕಟ್ಟಲಿ!
ತರುಣ ತರುಣಿಯರ ಮದುವೆಗಳಾಗಲಿ!
ಭೂಮಿಯೆ ಸ್ವರ್ಗವ ವಿಾರ್ವಂತಾಗಲಿ!

[ಭೈರವನ ಕೈಸನ್ನೆಯಿಂದ ಅವರೆಲ್ಲ ಹೋಗುವರು.]

ಭೈರವ— (ಸ್ವಗತ) ಮರೆತಿದ್ದೆ! ಮಾರಿಯ ಫಿತೂರಿಯನು ಮರೆತಿದ್ದೆ!
ನನ್ನ ಕೊಲೆಯಂ ಬಯಸಿ, ಶನಿಶಕ್ತಿ ತನ್ನ ಅನು-
ಯಾಯಿಗಳ ಕೂಡಿ ಬಹ ಪೊಳ್ತು ಬಳಿಸಾರಿಹುದು.
(ಶಿವನಾಯಕಗೆ) ನೃತ್ಯವಿಂದಿಗೆ ಸಾಲ್ಗುಂ! ಚೆನ್ನಾಯ್ತೆ
ನರ್ತನಂ?

ಶಿವ— ನಮ್ಮರಸನಾಸ್ಥಾನದಲ್ಲಿಯುಂ ನಾನಿಂಥ
ಕುಣಿತವನು ಕಂಡಿಲ್ಲ, ಗಾನವನು ಕೇಳಿಲ್ಲ.
ಸ್ವರ್ಗೀಯವಾಗಿತ್ತು! ಅವುಗಳೆಲ್ಲವು ಮಾಯಾ-
ಮೂರ್ತಿಗಳೆ?

ಭೈರವ— ಅಹುದು, ಮಾಯೆಯ ಬಲದೊಳೈತಂದ
ದೇವತೆಗಳವರು. [ಉದ್ವೇಗ, ಚಿಂತೆಗಳಿಗೆ ಒಳಗಾಗುವನು.]

ಶಿವ— (ಗೌರಾಂಬೆಗೆ) ನಿನ್ನ ತಂದೆಯ ಪರಿಯೆ
ಬೇರೆಯಾದಂತಿಹುದು. ಆವುದೋ ಚಿಂತೆಯೊಳದು!

ಗೌರಾಂಬೆ—(ಶಿವನಾಯಕಗೆ) ಮೊಗದೊಳುರಿ ಹೊಮ್ಮುತಿದೆ. ಆವಗಂ
ಅವನಿಂತು
ಕೋಪವಶನಾದುದನು ನೋಡಿಲ್ಲ.

ಭೈರವ— ನಾಯಕನೆ,
ಬೆಕ್ಕಸಂಬಡುವಂತೆ ತೋರುತಿದೆ. ಏನಿಲ್ಲ,
ನೀನು ಸಂತಸದೊಳಿರು. ನಾನೊರೆದ ತೆರದಿಂದೆ
ನೀನು ನೋಡಿದುದೆಲ್ಲ ಬರಿಯ ಮಾಯೆಯೆ ದಿಟಂ!

ಗಾಳಿಯುದು, ಕರಗಿ ಗಾಳಿಯು ಹೊಂದಿ ಹೋದುದು.
ನೀನು ಕಂಡೀ ದೃಶ್ಯದಂತೆಯೇ ಸರ್ವವೂ,
ವಿಸ್ತಾರವಾದೀ ಸಮಸ್ತ ವಿಶ್ವವು ಕೂಡ
ಮಾಯೆಯೆಂದರಿಯುವುದು ; ಕನಸೆಂದು ಭಾವಿಪುದು.
ಪೊಂಬುತ್ತಳಿಗಳಿಂದ ತಲೆಯೆತ್ತಿ ರಂಜಿಸುವ
ನಮ್ಮ ಏಳುಪ್ಪರಿಗೆಯುರಮನೆಗಳೂ, ಮುಗಿಲ
ಬೆಳ್ನಿರಿಯ ತೆರೆಯೊಳ್ ಅವಿತು ಆಗಸವ ತಿವಿವೆಮ್ಮ
ಗೋಪುರಗಳೂ, ನಮ್ಮ ಗುಡಿಗಳೂ, ಮೇಣ್ ಎಮ್ಮ
ಧನಕನಕಾದಿ ಸಕಲೈಶ್ವರ್ಯ ಸಮುದಾಯವೂ ;
ಹೆಚ್ಚೇಕೆ ? ನದಿಗಳಿಂ, ಗಿರಿಗಳಿಂ, ವನಗಳಿಂ,
ಸ್ಥಿರೆ ಎಂಬ ಪೆಸರಿನಿಂ ಮೆರೆದಿರ್ಪ ಎಮ್ಮ
ಈ ಮಹಾ ಉರ್ವರೆಯೆ ಕಾಲವಾಹಿನಿಯಲ್ಲಿ
ಕರಕರಗಿ, ಒಡೆದ ನವಿಗನಸಂತೆ ಪುಚ್ಚಳಿದು
ಪೋದಪುದು ; ಸೊನ್ನೆಯೊಳಗೊಂದಾಗಿ ಅಡಗುವುದು,
ಕುರವು ಕೂಡಾ ಉಳಿಯದಂದದಲಿ ! ನಾವೆಲ್ಲ
ಕನಸುಗಳು ! ಆವನೋ ಕಾಣುತಿಹ ಕನಸುಗಳು !
ಕನಸೆಮ್ಮ ಬಾಳನಾವರಿಸಿಹುದು. ಕನವರಿಪ
ಆತನೆಚ್ಚತ್ತನೆನೆ, ನಾವೆಲ್ಲಿ ! ಶೂನ್ಯದಲಿ !—
ನಾಯಕನೆ, ಅದನೆನೆದು ಎನ್ನೆದೆಯು ನೊಂದುದು !
ಇದು ನನ್ನ ದೌರ್ಬಲ್ಯ ! ಮುದಿಮೆದುಳು ಕದಡಿದಂ-
ತಾಗಿಹುದು. ನೀವಿರ್ವರೂ ಗುಹೆಯ ಒಳಹೊಕ್ಕು
ವಿಶ್ರಾಂತಿಯನು ಹೊಂದಿ. ನಾನು ತಂಗಾಳಿಯಲಿ
ಸಂಚರಿಸಿ ಕದಡಿರುವ ಬಗೆಗೆ ಶಾಂತಿಯನೀವೆ !

ಗೌರಾಂಬೆ, ಶಿವನಾಯಕ — ಆಗಲಿ, ನಿಮ್ಮಿಷ್ಟದಂತೆಯೇ ಪೋದಪೆವು. [ನಿಷ್ಕ್ರಮಣ]

ಭೈರವ— ಕಿನ್ನರಾ, ಎಲ್ಲಿರ್ಪೆ ? [ಕಿನ್ನರನ ಪ್ರವೇಶ]

ಕಿನ್ನರ— ಬೆಸನೇನು ಒಡೆಯ !

ಭೈರವ— ಶನಿಶಕ್ತಿಗೆದುರಾಗಲ್ ಅಣುವಾಗು.

ಕಿನ್ನರ— ಅಹುದು ಎನ್ನೊಡೆಯ. ಊರ್ವಶಿಯು ಬಂದಾಗಲೇ
ನಿನಗಿದನು ಹೇಳಬೇಕೆಂದೆಳಸಿದೆನು. ಆದರೆ
ನೀನೆಲ್ಲಿ ಮುನಿಯುವಿಯೊ ಎಂದು ಸುಮ್ಮನಾದೆ!

ಭೈರವ— ಈಗಳವರನ್ ಎಲ್ಲಿಗೊಯ್ದಿರ್ಪೆ?

ಕಿನ್ನರ— ಕುಡಿಕುಡಿದು ಕೆಂಪೇರಿಹೋಗಿದ್ದರವರೆಲ್ಲ;
ಮತ್ತಿನಲಿ, ಮೊಗದಮೇಲಾಡಿದೆಲರನೆ ತಿವಿದು;
ಅಡಿಗಳನೆ ಸೋಂಕಿತೆಂದುರ್ವರೆಯನ್ ಒದೆದು
ಕೂಗುತ್ತ ಬರುತಿರ್ದರ್ ಈಯೆಡೆಗೆ. ನಾನಾಗಳ್
.ತಾಳಗಳ ಬಡಿಬಡಿದು ಹಾಡಲಾರಂಭಿಸಿದೆ.
ಒಡನೆಯೇ ಮಿಗಗಳಂತೆ ಕಿವಿಗಳನ್ ಆಡಿಸುತ,
ಕಣ್ಣೆಮೆಯನ್ ಇಕ್ಕದೆಯೆ ನಾಸಿಕವ ಮೇಗೆತ್ತಿ,
ಗಾನವನೆ ಮೂಸುತ್ತ, ಹಿಂಬಾಲಿಸಿದರೆನ್ನನ್.
ಕೊರಕಲೊಳ್, ಕಲ್ಗಳೊಳ್, ಮುಳ್ಗಳೊಳ್, ಕೆಸರಿನೊಳ್
ಎಳೆತಂದು, ಕಡೆಗೆ ತಾವರೆಗೊಳದ ಉಸುಬಿನೊಳ್
ಕಿವಿವರೆಗೆ ಕೆಸರೇರುವನ್ನೆವರಂ ಬಿಡದೆ ನೂಂಕಿ
ಹಿಂತಿರುಗಿ ಬಂದೆನ್.

ಭೈರವ— ಒಳ್ಗೆಲಸವೆಸಗಿದಯ್!
ನೀನಿಂತು ಕೆಲಹೊತ್ತು ಅದೃಶ್ಯನಾಗಿಯೆ ಇರು!—
ಹೋಗಿ ಗುಹೆಯೊಳಗಿಂದ ಚಿಂದಿಗಳ ತಾ ಇಲ್ಲಿ.
ಆ ಕಳ್ಳರನ್ ಪಿಡಿಯೆ ಒಂದುಪಾಯುವ ಮಾಳ್ಪೆನ್!

ಕಿನ್ನರ— ಅಪ್ಪಣೆ! [ಹೋಗುವನು]

ಭೈರವ— ಪಿಶಾಚ! ಹುಟ್ಟು ಪಿಶಾಚ! ಏಗೈದರೇನಂತೆ
ಡೊಂಕು ತಿದ್ದುವುದಿಲ್ಲ. ನಾನೆನಿತು ಯತ್ನಿಸಿದೆ
ಸನ್ಮಾರ್ಗಕವನನ್ ಎಳೆತರಲೆಂದು. ನೀರಿನೊಳು

ಹೋಮಗೈದಂತಾದುದು ಎನ್ನ ಪ್ರಯತ್ನಂ.
ಕಾಲ ಹೋದಂತೆಲ್ಲ ಕುರೂಪಿಯಾಗುತಲಿಹನು.
ದೇಹದಂತೆಯೆ ಮನವು ವಿಕಾರವಾಗುತಲಿಹುದು!
ದುರುಳರೈತರಲಿ! ಒರಲಿಸುವೆನವರನ್!

[ಕಿನ್ನರನು ಮಿರುಗುವ ಪೀತಾಂಬರಗಳನ್ನು ಹೊತ್ತು ತರುವನು.]

ಈ ಎಡೆಯೊಳ್ ಜೋಲಾಡುವಂತೆ ಸಾಲಾಗಿ
ಅವುಗಳನು ತೂಗಹಾಕು. [ಹಾಗೆಯೇ ಮಾಡುವನು]

[ಭೈರವನಾಯಕನೂ ಕಿನ್ನರನೂ ಅಡಗುವರು. ಶನಿಶಕ್ತಿ, ಬೀಮಣ, ತ್ರಿಶಂಕು ಕೆಸರಾದ ಒದ್ದೆಬಟ್ಟೆಗಳಲ್ಲಿ ಬರುವರು.]

**ಶನಿಶಕ್ತಿ**— ಮೆಲ್ಲಗೆ, ಮೆಲ್ಲಗೆ ಹೆಜ್ಜೆಯಿಡಿ! ಆ ಮುದಿಗೂಬೆಗೆ ಹೆಜ್ಜೆ ಸಪ್ಪುಳವು ಎಲ್ಲಿಯಾದರೂ ಕೇಳಿಸೀತು! ನಾವೀಗ ಅವನ ಗುಹೆಯ ಬಳಿಯಲ್ಲಿರುವೆವು.

**ಬೀಮಣ**— ರಾಕ್ಷಸಾ! ನಿನ್ನ ಕಿನ್ನರನು ಮಾಡಿದ ಕೆಲಸ ನೋಡಿದೆಯಾ! 'ಅವನು ಬಹು ಸಾಧು ಪ್ರಾಣಿ, ಅವನಿಂದ ತೊಂದರೆ ಏನೂ ಆಗುವುದಿಲ್ಲ' ಎಂದೊದರಿದೆಯಲ್ಲಾ! ಈಗ ನಮ್ಮ ಗತಿ ಏನಾಗಿದೆ ನೋಡು! ನೋಡೋ ಮೂರ್ಖ! ನನಗೆ ಸಿಟ್ಟು ಬಂದುದೆ ಆದರೆ ನಿನ್ನ—

**ತ್ರಿಶಂಕು**— ಗತಿ ಪೂರೈಸಿತೆಂದೆ ತಿಳಿದುಕೊ!

**ಶನಿಶಕ್ತಿ**— ದಮ್ಮಯ್ಯ, ನನ್ನಮೇಲೆ ಕೃಪೆದೋರಿ ಸುಮ್ಮನಿರು.
ಮುಂದೆ ನಿನಗೊದಗಿಬಹ ಸೊಗದೆದುರು ಈ ಎಡರು
ಹುಲ್ಗಣೆಯು! ಮೆಲ್ಲಗೆ ಮಾತಾಡಿ! ಸದ್ದಿಲ್ಲ,
ಸಟ್ಟೆರುಳಿನಂತಿಹುದು!

**ತ್ರಿಶಂಕು**— [ಗಟ್ಟಿಯಾಗಿ], ಅಲ್ಲವೋ! ಎಲೋ ಹೈಲು ರಾಕ್ಷಸ, ನಮ್ಮ ಹೆಂಡದ ಬುರುಡೆಗಳೆಲ್ಲ ಹೋದುವಲ್ಲೋ ಆ ಉಸುಬಿನಲಿ! ಅದಕ್ಕೇನು ಹೇಳುವೆಯೋ ಈಗ?

ಬೀಮಣ— ನೀನೆಂಥ ರಾಕ್ಷಸವ್ರೋ! ನಿನ್ನಿಂದ ಮಾನಹಾನಿ, ಧನಹಾನಿ, ಹೆಂಡದ ಹಾನಿ, ಕಡೆಗೆ ಪ್ರಾಣಹಾನಿ—ಅಂತೂ ಕಡೆಗೂ ನಿನ್ನಿಂದ ನಮಗೆ ಸುಖವಿಲ್ಲವೆಂದೇ ಕಾಣುತ್ತದೆ.

ತ್ರಿಶಂಕು— ಮೈತುಂಬಾ ಕೆಸರಾದರೂ 'ಏನೋ ಹೋಗಲಿ!' ಎನ್ನ ಬಹುದು. ಹೆಂಡದ ಬುರುಡೆಗಳು ಹೋಗಿದ್ದು?

ಬೀಮಣ— ಆದದ್ದಾಗಲಿ, ಹೋಗಿ ಆ ಹೆಂಡದ ಬುರುಡೆಗಳನ್ನು ಸಂರಕ್ಷಿ ಸಿಯೇ ಬಿಡುತ್ತೇನೆ!—ಕೆಸರಿನಲಿ ಕಿವಿಯಲ್ಲದಿದ್ದರೆ ತಲೆಯು ಬೇಕಾದರೂ ಮುಚ್ಚಿಹೋಗಲಿ! ನೋಡಿಯೇ ಬಿಡುತ್ತೇನೆ! [ಹೋಗಲುದ್ಯುಕ್ತನಾಗುವನು.]

ಶನಿಶಕ್ತಿ— ದೇವತೆಯೆ, ದಯಮಾಡಿ ಸುಮ್ಮನಿರು! ನೋಡಲ್ಲಿ, ಅದೆ ಗುಹೆಯ ಬಾಯಿ. ಸದ್ದುಮಾಡದೆ ಒಳಗೆ ಹೋಗೋಣ! ನಾನು ಹೇಳಿದಂತೆ ಮಾಡಿಬಿಡು. ಆಮೇಲೆ, ನಿನ್ನದೀದ್ವೀಪ ಚಕ್ರಾಧಿಪತ್ಯಂ!! ಶನಿಶಕ್ತಿಯು ನಿನಗೆ ಕಿಂಕರನಾಗಿ ನಿಲ್ಲುವನು.

ಬೀಮಣ— (ತತ್ತರಿಸುತ್ತ) ಎಲ್ಲಿ, ಸ್ವಲ್ಪ ಕೈಹಿಡಿದುಕೊ. ಮೈ ನಡುಗು ತ್ತಿದೆ, ಸಿಟ್ಟಿನಿಂದ! ತಲೆ ತಿರುಗುತ್ತಿದೆ, ಕೋಪದಿಂದ!

ತ್ರಿಶಂಕು— (ದುಕೂಲಗಳನ್ನು ಕಂಡು) ಬೀಮಣ ಚಕ್ರವರ್ತಿ! ಬೀಮಣ ಸಾರ್ವಭೌಮ! ಬೀಮಣ ಮಹಾಪ್ರಭೋ! ಇಲ್ಲಿ ನೋಡು! ಇಲ್ಲಿ ನೋಡು! ನಿನಗೆ ಬೇಕಾದ ರಾಜ ದುಕೂಲಗಳು!

ಶನಿಶಕ್ತಿ— ಥೂ ಮೂರ್ಖ! ಕೂಗಬೇಡ! ಆ ಚಿಂದಿಗಳು ನಮಗೇಕೆ! ಅಲ್ಲಿರಲಿ ಬಿಡು!

ತ್ರಿಶಂಕು— [ನೀಳ್ದನಿಯಿಂದ] ಎಲೆ ಎಲೆ ರಾಕ್ಷಸಾ! ಮೋಸಮಾಡು ವೆಯೋ? ನಮಗಿಲ್ಲವೇ ಹರಕು ಬಟ್ಟೆಗಳ ಪರಿಚಯ?— ಇಲ್ಲಿ ನೋಡು!—ಇಲ್ಲಿ ನೋಡು ಬೀಮಣ ಚಕ್ರವರ್ತಿ!

[ನಿಲುವಂಗಿಯನ್ನು ತೊಡೆದುಕೊಳ್ಳುವನು.]

ಬೀಮಣ— ತ್ರಿಶಂಕು, ಒಳ್ಳೆಯ ಮಾತಿನಲ್ಲಿ ಅದನ್ನು ಅಲ್ಲಿಯೆ ಇಡು. ನನಗೆ ಸೇರಬೇಕಾದ್ದು ಅದು.

ತ್ರಿಶಂಕು— ಆಗಲಿ ತಾವೇ ಧರಿಸಿಕೊಳ್ಳಿ! [ಅಲ್ಲಿ ಹಾಕುವನು. ಬೀಮಣನು ಎತ್ತಿಕೊಳ್ಳುವನು. ತೊಡಲು ಎಳಸುವನು.]

ಶನಿಶಕ್ತಿ— ನಿನ್ನ ಮನೆ ಹಾಳಾಗ! ಆ ಚಿಂದಿಗಳಿಗೇಕಿಷ್ಟು ಪರಿದಾಟ! —ಹೋಗಿ, ಮೊದಲು ಕೊಲೆಮಾಡೋಣ! ಅವನೆಲ್ಲಿಯಾದರೂ ಎದ್ದನೆಂದರೆ, ನೋಡು, ತಲೆಯಿಂದ ಕಾಲವರೆಗೂ ನಮ್ಮ ಚಮಡ ಸುಲಿಯುವನು!

ಬೀಮಣ— ಸುಮ್ಮನಿರೋ ರಾಕ್ಷಸಾ! ಸುಮ್ಮನಿರೋ ಸಾಕು!— ನಿನ್ನಾಣೆ ತ್ರಿಶಂಕು. ಇದು ನನ್ನ ನಿಲುವಂಗಿಯಲ್ಲವೇನೊ?— ಓಹೋ ಹಾಕಿಕೊಂಡಿದ್ದು ತಲೆಕೆಳಗಾಯಿತು!—ಓಹೋ ಹಿಂದು ಮುಂದಾಯಿತು!—ಎಲೇ ನಿಲುವಂಗಿ, ಬಾಳಬೇಕೆಂದು ಆಸೆಯಿದ್ದರೆ ತಂಟೆಕೊಡಬೇಡ?

ತ್ರಿಶಂಕು— ಮಾಡಿದರೆ, ಹಾಗೆ ಮಾಡಬೇಕು! ಇರುವೆಗಳು ತಿಂದಂತೆ ಸ್ವಲ್ಪ ಸ್ವಲ್ಪವಾಗಿ ಜರಿಯನ್ನೆಲ್ಲ ತಿನ್ನಬೇಕು!

ಬೀಮಣ— ಭಲಾ! ನೀನು ಬಲು ಒಳ್ಳೆಯ ವಿದೂಷಕ! ನಾನು ರಾಜನಾಗಿರುವಾಗ ವಿದೂಷಕನಿಗೆ ಕೊರತೆಯೇನು? ತೆಗೆದುಕೋ! ನಿನಗೆ ಈ ರುಮಾಲು ಇನಾಮು! 'ಇರುವೆಗಳು ತಿಂದಂತೆ' ಅದೆಂತೆಯ ಉಪಮಾಣ! ಅಬ್ಬಬ್ಬ! ಇದನ್ನು ಕೇಳಿದರೆ ಕಬ್ಬಿಗರು ಕೂಡ ತಬ್ಬಿಬ್ಬಾಗದೆ ಇರರು! ಅದಕ್ಕಾಗಿ ತೆಗೆದುಕೋ ಮತ್ತೊಂದು ಇನಾಮು!

ತ್ರಿಶಂಕು— ರಾಕ್ಷಸಾ, ಸುಮ್ಮನೆ ನಿಂತರಾಗದು! ಕೈಚುರುಕುಮಾಡಿ! ಬಟ್ಟೆಗಳನ್ನೆಲ್ಲ ಮೂಟೆಕಟ್ಟು!

ಶನಿಶಕ್ತಿ— ದಮ್ಮಯ್ಯಾ ಮಾರಾಯ! ನಾವು ಹೀಗೆ ತಡಮಾಡಿದರಾಗದು. ಅವನೆಲ್ಲಿಯಾದರೂ ಎದ್ದನೆಂದರೆ ನಾವೆಲ್ಲ ಮಂಗಗಳೊ?, ಸರಿಗಳೋ ಆಗಿಹೋಗುವೆವು.

ಬೀಮಣ— ಹುಂ, ರಾಕ್ಷಸಾ, ಕೈಹಾಕು! ಮತ್ತೇನು ನೋಡುವುದು! ಇವುಗಳನೆಲ್ಲ ನಾನು ಹೆಂಡವನ್ನಿಟ್ಟಿರುವ ಜಾಗಕ್ಕೆ ತೆಗೆದು

ಕೊಂಡು ಹೋಗು! ಹೋಗದೇ ಇದ್ದರೇ, ನನ್ನ ರಾಜ್ಯ ದಿಂದ ನಿನ್ನನ್ನು ಒದ್ದು ಓಡಿಸಿಬಿಡುತ್ತೇನೆ! ಹುಂ! ಎಚ್ಚರಿಕೆ!—ಹೊರಡು, ಕತ್ತೆ ಇದನ್ನು ಹೊತ್ತುಕೊ!

[ಒಂದು ಬಟ್ಟೆ ಹೇರುವನು.]

ತ್ರಿಶಂಕು— [ಮತ್ತೊಂದನ್ನು ತೆಗೆದು ತೋರಿಸಿ] ಇದು! ಇದು!

ಬೀಮಣ— ಹುಂ, ಇದೂ ಒಂದಿರಲಿ! ನಿಜ್ಜ ಉಡಲಾಗುವುದು.

[ವಿಕಾರಾಕೃತಿಗಳು ಅಬ್ಬರಿಸುತ್ತಾ ನುಗ್ಗಿ ಬಂದು ಅವರನ್ನು ಅಟ್ಟುವುವು. ಕಿನ್ನರನೂ ಭೈರವನೂ ಅವುಗಳನ್ನು 'ಛೂ' ಬಿಡುತ್ತ ಹಿಂದೆಯೇ ಓಡುವರು.]

ಭೈರವ— ಹಿಡಿ! ಹಿಡಿ!! ಮೊದಲು ಹಿಡಿ! ಆ ಡೊಳ್ಳುಹೊಟ್ಟೆಯನ್ನು

ಕಿನ್ನರ— ಹಿಡಿ! ಹಿಡಿ!! ಆ ದಾಂಡಿಗನನ್ನು!

ಭೈರವ— ಹಿಡಿಯಿರಿ! ಹಿಡಿಯಿರಿ! ಆ ಗೂನುಬೆನ್ನಿನ ಗೊಗ್ಗನನ್ನು!

ಕಿನ್ನರ— ಚುಚ್ಚು! ತಿವಿ! ಕಡಿ, ಒಡಿ! ಕುಡಿ! [ಓಡುವರು]

[ಒಳಗೆ ಗದ್ದಲ. ಒರಲುವಿಕೆ.]

## ದೃಶ್ಯ ೯

[ಭೈರವನಾಯಕನ ಗುಹೆಯ ಮುಂಭಾಗ. ಮಂತ್ರಕವಚಧಾರಿಯಾದ ಭೈರವ ನಾಯಕನೂ, ಕಿನ್ನರನೂ ಬರುವರು.]

ಭೈರವ— ಈಗಳೆನ್ನಿಚ್ಛೆಯು ಮಾಗಿ ಹಣ್ಣಾಗುತಿದೆ:
ಒಂದಿನಿತು ಕುಂದದಿದೆ ನನ್ನ ಮಂತ್ರದ ಬಲಂ.
ನನ್ನ ಮಾಯೆಯು ದೇವತೆಗಳೆಲ್ಲ ತಪ್ಪದೆಯೆ
ಪೇಳ್ದಾಣತಿಯ ಪಾಲಿಸುತಲಿಹರು. ಇಂದೆನಗೆ
ಬಿದಿಯೆ ಶರಣುಹೊಕ್ಕಂತಿದೆ. ಪೊಳ್ತೆನಿತು?

ಕಿನ್ನರ— ನೇಸರಾಗಳೆ ತನ್ನ ಹೊಂದೇರ ನಸ್ತಗಿರಿ
ಮಸ್ತಕದೊಳಿಳಿಸುತಿರ್ಪನು, ಜೀಯ. ತಾವರೆಯು
ತನ್ನ ಹೂವಲೆವನೆಯ ಬಾಗಿಲನು ಮುಚ್ಚುತಿಹು-
ದುಬ್ಬೆಗದಿ. ಕತ್ತಲೆಯ ಮೊತ್ತಗಳ ಕರಿನೆರಳು
ಮೂಡುದೆಸೆಯಿಂ ಮೆಲ್ಲಮೆಲ್ಲನೆ ತಿರೆಗಿಳಿದು
ಬರುತಿಹುದು. ಇನ್ನಗಂ ನಮ್ಮ ಕಜ್ಜಂ ಕೊನೆಯ
ಕಾಣಲೆವೇಳ್ಕುಮೆಂದು ಪೊಳ್ತೆಡೆಯೊಳಾಡಿರ್ದೆ.

ಭೈರವ— ಅಹುದಹುದು, ಕಿನ್ನರಾ. ಉಸುರಿರ್ದೆ. ಆಗ
ಬಿರುಗಾಳಿಯುನ್ನೆಬ್ಬಿಸಿದ ಬೆಳಗುಪೊಳ್ತಿನಲಿ
ಅಂತುಟಾಲೋಚಿಸಿದೆ. ಅದಂತಿರ್ಕೆ, ಕಿನ್ನರಾ.
ಅರಸನೂ, ಅನುಯಾಯಿಗಳೂ ಎಲ್ಲಿರುವರೀಗ?

ಕಿನ್ನರ— ನೀನವರನ್ ಅಗಲಿದಾಗ ಎಂತೆನಗೆ ಬೆಸಸಿದೆಯೊ
ಅಂತೆ ಅವರನಿಬರನು ತರುಬಿ ಕೂಡಿರ್ಪೆನ್.
ಈ ಗುಹೆಗೆ ಬಳಿಯಿರ್ಪ ಮಾಮರದ ತೋಪಿನಲಿ
ಅವರೆಲ್ಲ ಸೆರೆಯಾಗಿ ಬಿದ್ದಿಹರು. ಅಲ್ಲಿಂದ
ನಿನ್ನಪ್ಪಣೆಯ ಹೊರತು ಕದಲುವಂತಿಲ್ಲವರು.
ಅರಸನುಂ, ಮೇಣವನ ತಮ್ಮನುಂ, ಮೇಣ್ ನಿನ್ನ

ತಮ್ಮನುಂ ಪುರ್ಚಿಳ್ದು ಕುಳಿತಿಹರು, ಸಜ್ಜನನ್
ಜಯದೇವನ್ ಅವರಿಗಾಗಳುತಿಹನು; ಎನ್ನೊಡೆಯ,
ಮಾಗಿಯುಲಿ ಮರದೆಲೆಗಳಿಂ ಪನಿಗಳುದುರ್ವಂತೆ,
ಬಿಳಲು ಬಿಳ್ದವನ ನರೆಗಡ್ಡದಿಂ ಕಂಬನಿಗ-
ಳೆಡೆಬಿಡದೆ ಸೋರ್ದಪವು!—ನಿನ್ನ ಮಾಯೆಗೆ ಸಿಲ್ಕಿ
ಅವರೆಲ್ಲರುಂ ನೋವಿನಲಿ ನರಳುತಿರ್ಪರು.
ನೀನು ನೋಡಿದೆಯಾದರೆದೆಗರಗಿ ಪೋಗುವಯ್!

ಭೈರವ— ಎದೆಗರಗುವಂತಿರ್ಪರೇಂ?

ಕಿನ್ನರ— ನಾನು ಮಾನವನಲ್ಲ;
ಆದೊಡಂ ಕರಗಿದುದು ಎನ್ನೆದೆಯು!

ಭೈರವ— ಕಿನ್ನರಾ!
ಕರಗಿದಪುದೆನ್ನೆರ್ದೆಯುಂ. ಗಾಳಿಯಾಗಿಹ ನೀನು
ಮರುಗಿದೊಡೆ ಮನುಜನಾಗಿಹ ನಾನು, ನನ್ನಂತೆ
ಇರ್ಪ ಮನುಜರಿಗಾಗಿ ಮರುಗದಿರ್ಪೆನೆ? ಹೇಳು!
ಅವರೆನಗೆ ನಿರ್ನೆರಂ ಪೆರ್ಬೇನೆಯುಂ ಗೈದರ್,
ಆದೊಡಂ ನಾನವರ ದಂಡಿಸೆನ್! ಪೀಡಿಸೆನ್!
ಮುಯ್ಗೆ ಮುಯ್ಯಂ ತೀರ್ಚಿಕೊಳ್ವುದದು ಜಸವಲ್ಲ!
ದಂಡನೆಯು ದೊಡ್ಡವರ ಕಾರ್ಯಮಾಗದು; ಕ್ಷಮೆಯೆ
ಣ್ಯಾತ್ಮರಿಗೆ ಹಿರಿಯ ಪೊಂದೊಡಿಗೆ. ಬಳಲಿಹರು;
ವರೆಲ್ಲ ನೊಂದಿಹರು, ಬಗೆಯಲ್ಲಿ ಬೆಂದಿಹರು.
ಈಗವರ ಸೆರೆ ಬಿಡಿಸು. ಮುಸುಗಿರ್ಪ ಮಾಯೆಯನು
ಬೇಗನೋಸರಿಸು ಇಲ್ಲಿಗವರನು ಕರೆದು ತಾ.

ಕಿನ್ನರ— ಅಪ್ಪಣೆ! ಬೇಗನೆಯೆ ಕರೆತರ್ಪೆ. (ಹೋಗುವನು)

ಭೈರವ— ಮಲೆಗಳಿರ,
ಮರಗಳಿರ, ತೊರೆಗಳಿರ, ಕೆರೆಗಳಿರ, ಎಲೆಲೆ ಬನ-
ದಭಿಮಾನದೇವತೆಗಳಿರ, ಬುವಿಯೊಳ್ ಆಗಸದೊಳ್
ಆವಗಂ ಮಳೆಬಿಲ್ಲೆರೆಂಕೆಗಳ ಮೇಲಲೆವ

ಯಕ್ಷ ಕಿನ್ನರ ಕಿಂಪುರುಷರಿರಾ, ನಿಮ್ಮಗಳ
ಒಲ್ಮೆಯಿಂ, ನಿಮ್ಮೆಲ್ಲರೊಲ್ಮೆಯಿಂ ನಾನೆನಿತೊ
ಗೆಯ್ಮೆಗಳನೆಸಗಿದೆನು; ನೇಸರಿಂದುಗಳ
ಗಮನವನು ತಡೆದಿಹೆನು. ಪಗಲೊಳ್ ಇರುಳಂ ಕವಿಸಿ
ಕಾಲವನೆ ತಲೆಕೆಳಗು ಮಾಡಿದೆನು. ಅಚಲಗಳ
ಕಂಪಿಸುವ ಬಿರುಗಾಳಿಗಳನೆಬ್ಬಿಸಿದೆ. ಗುಡುಗು
ಮಿಂಚುಗಳನ್ ಎನ್ನಿಚ್ಛೆಯಂದದೊಳು ಕುಣಿಸಿದೆನು.
ನನ್ನ ಮಂತ್ರದ ಬಲದೊಳ್, ಅಳಿದವರು ಸಾವಿನಿಂ-
ದೆಚ್ಚೆತ್ತು ಬದುಕಿ ಹಿಂದಿರುಗಿದರು. ಆದರೆ—
ಆದರಿಂದಿಗೆ ಸಾಕು! ಇಂದು ನಿಮ್ಮೆಲ್ಲರನು
ನಮಿಸಿ ಬೀಳ್ಕೊಳ್ಳುವೆನು! ನನ್ನ ಮಂತ್ರವನಿಂದು
ತೊರೆಯುವೆನು! ಮಂತ್ರದಂಗಿಯ ಹರಿದು ಬಿಸುಡುವೆನು.
ಎನ್ನ ಬಯಕೆಯ ಕಜ್ಜವಿಂದು ಕೊನೆಗಂಡಿಹುದು,
ನನ್ನ ಮಂತ್ರದ ಕೋಲನ್ ಒಡೆದು ಪುಡಿಪುಡಿ ಮಾಡಿ
ಮಣ್ಣಿನೊಳ್ ಮಣ್ಣಾಗಿ ಮಾಡುವೆನು! ಆ ನನ್ನ
ತಂತ್ರಶಾಸ್ತ್ರವನೆಲ್ಲ ಕಡಲಿನಲಿ ಮುಳುಗಿಸುವೆ;
ಕಡಲಿನ ಕಾಣದ ಪಾತಾಳದಲಿ ಮುಳುಗಿಸುವೆ!

[ಗಾನ ಕೇಳಿಸುವುದು. ಕಿನ್ನರನು ಬರುವನು. ಅವನ ಹಿಂದೆ ಹುಚ್ಚರಂತೆ ರಣನಾಯಕ, ಜಯದೇವ, ರಂಗನಾಯಕ, ರುದ್ರನಾಯಕ, ಎಲ್ಲ ಬರುವರು. ಭೈರವನಾಯಕನು ನೆಲದಮೇಲೆ ಎಳೆದ ಗೆರೆಯ ಒಳಗೆ ಹೋಗಿ ನಿಲ್ಲುವರು.]

ಮಂತ್ರಮುಗ್ಧರಾಗಿವರು ಯಂತ್ರಗಳಂತಿಹರು!
ನಿಮ್ಮ ಮೆದುಳನು ಮಾಯೆ ಮರ್ಬಿನಿಂ ಮುಸುಗಿರ್ಪುದು!
ತಣ್ಣೆಲರ ತೀಟದಿಂದೈತರ್ಪ ಶಾಂತಿಯಲಿ
'ನಿಮ್ಮ ಮರುಳ್ತನಮಳಿದು ಪೋಗುಗೆ!—
ಪುಣ್ಯಾತ್ಮ ಜಯದೇವ, ಧನ್ಯಾತ್ಮ ಜಯದೇವ,
ನಿನ್ನ ಬೇನೆಯ ಬೇಗೆಗೆನ್ನ ಕಣ್ಗಳು ಹನಿಯ
ಕರೆಯುತಿವೆ—ಮಾಯೆ ತುಂಬಿಹ ಮಬ್ಬು ತೊಲಗುತಿದೆ.

ಮೂಡುವೆಟ್ಟಿನ ಮೇಲೆ ಮುನ್ನೇಸರೇರುತಿರೆ,
ಮಿಸುನಿವೆಳಗಸು ಹೆರುವ ಮುಂಬೆಳಕಿಂಗೆ, ಕವಿದ
ಕಳ್ತಲೆಯು ಮೊತ್ತ ಕೆಲಸಾರುವಂದದಲಿ
ಮಾಯೆಯೊಯ್ಯನೆ ನಿಮ್ಮ ಬಗೆಯಿಂದ ಜಾರುತಿದೆ!
ಮೂಡುತಿದೆ ಹೊಳಹು. ಕದಡು ಬಗೆ ತಿಳಿಯಾಗುತಿದೆ!
ಬಿಗಿದ ಮಂತ್ರದ ಕಟ್ಟು ಸಡಿಲುತಿದೆ.—ಜಯದೇವ,
ನೀನೆನ್ನ ಪೊರೆದವನು; ನೀನೆನ್ನ ರಕ್ಷಕನು!
ನಿನಗಿದೋ ನಮಿಸುವೆನು; ನಡೆಯಲ್ಲಿ, ನುಡಿಯಲ್ಲಿ
ನಿನಗಿದೊ ವಂದನೆಯನರ್ಪಿಪೆನು.—

ರಾಜೇಂದ್ರ,

ನನ್ನನೂ, ನನ್ನ ಮಗಳನೂ ನೀನು ಬಹುವಾಗಿ
ಪೀಡಿಸಿದೆ. ನಿನ್ನ ಸೋದರ ರಂಗನಾಯಕನು
ನಿನಗೆ ನೆರವಾದನು.—ಈಗಳಾದರು ನಿನ್ನ
ಎದೆ ಬೇಯುವುದೆ ರಂಗನಾಯಕನೆ.—ಸೋದರನೆ,
ಒಂದೆ ಬಸಿರಿಂ ಬಂದ ಎನ್ನ ಒಡಹುಟ್ಟಿದನೆ,
ತಮ್ಮ, ರುದ್ರನಾಯಕನೆ, ರಾಜ್ಯಾಭಿಲಾಷೆಯಿಂ
ಸೋದರತೆಯನೆ ಮರೆತು, ಧರ್ಮವನೆ ತೊರೆದು,
ಅನ್ಯಾಯವೆಂಬುದನು ಲೆಕ್ಕಿಸದೆ ನೀನೆನಗೆ
ಅಪರಾಧವನ್ನೆಸಗಿ ಸಂತಸದಿ ಬಾಳುತಿಹೆ!—
ರಂಗನಾಯಕನೊಡನೆ ಒಳಸಂಚು ಮಾಡಿ
ದೊರೆಯ ಕೊಲೆಗಾರನಾಗುತಲಿದ್ದೆ; ನಾನದನು
ತಪ್ಪಿಸಿದೆ. ನಿನ್ನ ಅಪರಾಧಗಳನೆಲ್ಲವನು
ಮನ್ನಿಸಿರ್ಪೆ!—ನಿಮಗೀಗ ಕದಡುಬಗೆ ತಿಳಿಯಾಗಿ
ಬರುತಿಹುದು. ಮುನ್ನಿನೊಲು ಚಿತ್ತದೊಳು ಸ್ವಾತಂತ್ರ್ಯ
ಮೊಳೆಯುತಿದೆ. ನಾನಾರು ಎಂಬ ನನ್ನಿಯು ನಿಮ್ಮ
ಅರಿವಿಗಿನ್ನುಂ ಮಿಂಚದಿದೆ. ನನ್ನನೀ ರೂಪಿನಲಿ
ನೀವರಿಯಲಾರಿರಿ—ಕಿನ್ನರಾ, ಹೋಗು, ನಡೆ,

ನನ್ನಾ ಮುಕುಟ ಖಡ್ಗಂಗಳಂ ಬೇಗ ತಾ. [ಕಿನ್ನರನ ನಿಷ್ಕ್ರಮಣ]
ಕೆಳದಿಯೊಳು ಅಂದು ನಾನಿರ್ದಂತೆ ವೇಷವನು
ಧರಿಸುವೆನು. ಆಗ ನಿಮಗರಿವಾಗುವುದು.—ಕಿನ್ನರಾ,
ಬೇಗ ಬಾ; ನಿನ್ನ ಬಿಡುಗಡೆಯು ಬಳಿಸಾರಿಹುದು.
[ಕಿನ್ನರನು ಉಡುಪನ್ನು ತಂದು ಭೈರವನಾಯಕನಿಗೆ ತೊಡಿಸುತ್ತಾ]

ಕಿನ್ನರ— (ಹಾಡು) ದುಂಬಿಯು ಬಂಡನು ಹೀರುವ ಎಡೆಯೊಳು
ನಾ ಮಧುಪಾನವ ಮಾಡುವೆನು;
ತೇಲುವ ತಾವರೆ ಹೂವಿನ ಹೊಡೆಯೊಳು
ಪವಡಿಸೆ ಸೆಜ್ಜೆಯ ಹೂಡುವೆನು.
ನೇಸರು ಮುಳುಗಲು ಮಲಗುವೆನಲ್ಲಿ;
ಗೂಬೆಯು ಕೂಗಲು ಹುದುಗುವೆನಲ್ಲಿ;
ಕತ್ತಲೆ ಮುತ್ತಲು ಪವಡಿಪೆನಲ್ಲಿ;
ಕೌಮುದಿ ರಂಜಿಸೆ ನಲಿಯುವೆನಲ್ಲಿ!
ಮಳೆ ಬಿಲ್ಗರಿಗಳ ರೆಕ್ಕೆಯ ಪಡೆದಿಹ
ಮೇಘವಿಮಾನವನೇರಿ,
ಗಾಳಿಯ ಬಟ್ಟೆಯೊಳಲೆಯುವೆ, ನಲಿಯುವೆ,
ಮುಕ್ತಿಯ ಸೊದೆಯನು ಹೀರಿ!

ಭೈರವ— ನೀನೆನ್ನ ನಚ್ಚಿನ ಡಿಂಗರಿಗನ್, ಕಿನ್ನರಾ!
ಮನವು ಬಾರದು ನಿನ್ನನಗಲೆ—ಬಿಡು, ಅಂತಿರ್ಕೆ—
ಹೋಗು, ನಡೆ; ಶನಿಶಕ್ತಿ, ಬೀಮಣ, ತ್ರಿಶಂಕುಗಳ-
ನೀಯೆಡೆಗೆ ಕರೆದು ತಾ!

ಕಿನ್ನರ— ಎವೆಯಿಕ್ಕುವುದರೊಳೇ
ಅವರನಿಲ್ಲಿಗೆ ತರುಬಿ ಎಳ್ಬುವೆನು! [ಹೊರಡುವನು]

ಜಯದೇವ— ಮಾಯೆಗಿದು
ತವರುಮನೆಯಾದಂತೆ ತೋರುತಿದೆ. ಶಿವಶಿವಾ!
ಪಾರುಮಾಡೆಮ್ಮನೀ ಮಾಯಾದ್ವೀಪದಿಂ!

ಭೈರವ— ನಗರದೊಡೆಯನೆ ನೋಡು; ಕೆಳದಿಯ ನಾಯಕನು,

ಭೈರವನಾಯಕನು ನಿನ್ನೆದುರು ಜೀವದಲಿ
ನಿಂತು ಮಾತಾಡುತಿಹನು. ರಾಜೇಂದ್ರ, ನಿನಗುಂ
ಮೇಣ್ ನಿನ್ನ ಪರಿವಾರದವರಿಗುಂ ಸ್ವಾಗತವ
ನಿತ್ತಪೆನ್!

ರಣ— ನೀನು ಭೈರವನಾಯಕನೆ ಅಹುದೊ
ಅಲ್ಲವೋ ನಾನರಿಯೆ. ನನ್ನನು ಮರುಳ್ಗೆಯ್ಯೆ
ಭೈರವನ ವೇಷವನು ತಳೆದ ಆವ ಕೈತವದ
ಬೆಂತರವೊ ನಾನರಿಯೆ! ಬಾಡು ನೆತ್ತರ್ಗಳಿಂ
ನಮೆದಿರ್ಪ ದೇಹದೊಲು ತೋರುತಿಹೆ ನೀನು!
ಅಲ್ಲದೆಯೆ ನಿನ್ನ ನೋಡಿದಮೇಲೆ, ಕದಡಿರ್ದ
ನನ್ನ ಬಗೆ ತಿಳಿಯಾಗುತಿದೆ. ನನ್ನನ್ ಅಚ್ಚರಿಯು
ಆವರಿಸಿಬಿಟ್ಟಿಹುದು! ಭೈರವನಾಯಕನೆ,
ನಿನ್ನ ನಾಡನು ನಿನಗೆ ಹಿಂದಕೊಪ್ಪಿಸಿದೆ;
ನನ್ನ ಮೇಲೆರಕಮುಂ ತೋರಿ ಅದನು ಸ್ವೀಕರಿಸು!
ಮುನ್ನ ನಾಂ ಗೈದ ಅಪರಾಧಮುಂ ಮರೆತುಬಿಡು!
ಮನ್ನಿಸಯ್ ಕೈಮುಗಿದು ಬೇಡುವೆನು.—ಆದೊಡಂ
ಭೈರವನಾಯಕನು ಬದುಕಿರ್ಪನೆಂತು?
ಎಂತಿಲ್ಲಿಗೈತಂದನ್ ಅರಿಯಲಾಸಿಪೆನ್.

ಭೈರವ— ಮೊತ್ತಮೊದಲು, ಪುಣ್ಯಾತ್ಮ ಜಯದೇವ, ಅಳವಿಯನೆ
ಅರಿಯದಿಹ ನಿನ್ನ ಮುದಿತನದ ನನ್ನಿಯನಪ್ಪಿ
ಪೂಜಿಪೆನ್.

ಜಯದೇವ— ನೀನು ಭೈರವನಹುದೊ? ಅಲ್ಲವೋ?
ದೇವ, ನಾನೆಂತುಟರಿವೆನ್.

ಭೈರವ— ನಿಮಗಿನ್ನುಂ ಈ ನೆಲದ
ಅಚ್ಚರಿಯು ತೊಲಗಿಲ್ಲ. ಕಣ್ಣಾರೆ ಕಂಡರೂ
ನಂಬುಗೆಯು ನಡುಗುತಿದೆ.—ಮಿತ್ರರಿರ, ನಿಮಗೆಲ್ಲ
ಸ್ವಾಗತಂ! ಇನ್ನೆವರಮೀಕ್ಷಿಸಿದ ಮಾಯೆಗಳ

ಮರೆತುಬಿಡಿ; ಶಾಂತಿಯನು ಹೊಂದಿ. ನೀವೆನಗೆ
ಬಿರ್ದನವರ್. [ರುದ್ರ ರಂಗನಾಯಕರಿಗೆ]
ನಾಯಕರೆ, ನನಗೆ ಮನಬಂದಿರ್ದೊಡೆ
ರಾಜದ್ರೋಹಿಗಳಪ್ಪ ನಿಮ್ಮಿರ್ವರನು ದೊರೆಯ
ನಿಗ್ರಹಾಗ್ನಿಯೊಳು ಬೇಳ್ವಪೋಲೆನಗುತಿರ್ದೆನ್.
ಆದೊಡೀ ಸಮಯದಲಿ ತರವಲ್ಲ ಪಿಸುಣತೆಯು.

ರಂಗ— [ಸ್ವಗತ] ಶನಿ ನುಡಿಯುತಿಹುದವನ ಬಾಯಲ್ಲಿ.

ಭೈರವ— [ರಂಗನಾಯಕಗೆ] ಶನಿಯಲ್ಲ—
[ರುದ್ರಗೆ] ರುದ್ರನಾಯಕನೆ ನೀನೆಸಗಿದಪರಾಧ-
ಗಳನೆಲ್ಲ ಮನ್ನಿಸಿಹೆ. ನನ್ನ ನಾಡನು ನನಗೆ
ಮರಳಿ ನೀಡಲ್ವೇಳ್ಕುಂ.

ರಣ— ನೀನು, ಕೆಳದಿಯ ಒಡೆಯ
ಭೈರವನಾಯಕನ್ ಅಹುದಾದೊಡೆ, ಸಂಶಯಂ
ಕೆಡುವಂತೆ ನಮಗೆಲ್ಲ ನಿನ್ನ ಕತೆಯನು ತಿಳುಹು.
ಬಿರುಗಾಳಿಯೊಳು ಸಿಲ್ಕಿ, ಒಡೊಡೆದು, ಹೊಳೆಗಿಳಿದು,
ಎಂತೊ ದಡವನ್ ಸೇರ್ದ ಎಮ್ಮನ್ ನೀನೆಂತರಿತೆ?
ನನ್ನ ಮಗ!—ನನ್ನ ಮಗ!—ಅಯ್ಯೊ ಶಿವನಾಯಕಾ!—
ನನ್ನ ಮಗನೆಂತು ಎಲ್ಲಿ ಹೋದನು ಹೇಳು!

ಭೈರವ— ರಾಜೇಂದ್ರ, ನನ್ನೆದೆಯುಂ ನಿನ್ನೊಡನೆ ಬೇಯುತಿದೆ.

ರಣ— ಪೋದುದಿನ್ ಬಂದಪುದೆ? ಎನಗಿನ್ನು ಬದುಕಿನಲಿ
ತಾಳ್ಮೆ ಎಂಬುವುದಿಲ್ಲ; ಶಾಂತಿ ಎಂಬುವುದಿಲ್ಲ.

ಭೈರವ— ಶಾಂತಿದೇವಿಯ ನೆರವ ನೀನಿನ್ನುಂ ಬಯಸಿಲ್ಲ
ಎಂದೆನ್ನ ಭಾವನೆಯು; ಬಯಸಿದರೆ ಬಳಿ ಬಹಳು.
ಆ ದಿವ್ಯ ದೇವಿಯ ಕೃಪೆಯೆನಗೆ ದೊರೆತಿಹುದು.
ತೃಪ್ತನಾಗಿರ್ಪೆನ್ ಆದರಿಂ!

ರಣ— ಏನು? ಮಗನಳಿವು
ತೃಪ್ತಿದಾಯಕವೆ?

ಭೈರವ— ನಿನ್ನದಕ್ಕಿರ್ಮ್ಮಡಿಯು ಎನ್ನಳಲು !
ಮೇಣ್ ಅಧಿಕತರಮಾದುದೆಂದರುಂ ಎನಬಹುದು :
ಕಳೆದುಕೊಂಡಿರ್ಪೆ ನಾನಿಂದು ನಚ್ಚಿನ ಮಗಳಂ!
ಎನಗಿರ್ದ ಒರ್ವಳೇ ಮುದ್ದು ಮಗಳಂ!

ರಣ— ಏನು ? ನಚ್ಚಿನ ಮಗಳೇ ?—ಅವರಿರ್ವರುಂ ಎನ್ನ
ನಗರ ಸಂಸ್ಥಾನದೊಳ್ ರಾಜರಾಣಿಯರಾಗಿ—
ಶಿವಶಿವಾ, ನನ್ನ ಕುವರನ ಗತಿಯು ನನಗೇಕೆ
ಬಾರದಿದೆ ?—ನಿನ್ನ ಮಗಳೆಂದು ನಿನ್ನನು ಬಿಟ್ಟು
ಅಗಲಿದುದು ?

ಭೈರವ— ಇಂದಿನಾ ಬಿರುಗಾಳಿಯಲಿ ಸಿಲ್ಕಿ
ಮಾಯವಾದಳು, ದೊರೆಯೆ !—ಇಂತೇಕೆ ಇವರೆಲ್ಲ
ಬೆರಗಾಗಿ ನನ್ನನೇ ದುರುದುರನೆ ನೋಡುತಿಹರು ?
ನನ್ನ ನುಡಿಗಳನಿವರು ನಂಬಲಾರದೆ, ಬರಿದೆ
ಸಂದೆಯದೊಳ್, ಅಚ್ಚರಿಯೊಳ್, ಓಲಾಡುತಿರ್ಪರು.
ತಮ್ಮ ಕಣ್ಣುಗಳ ತಾವೆ ನಂಬಲಾರರು. ತಮ್ಮ
ನುಡಿಗಳಲಿ ತಮಗೆ ನಂಬುಗೆ ಸಡಿಲವಾಗುತಿದೆ.—
ಗೆಳೆಯರಿರ, ನೀವೆಂತು ಬಗೆದೊಡಂ ನಾನು ಆ
ಕೆಳದಿಯೊಡೆಯನೆ ಸಾಜಂ! ನೀವು ಹೊಳೆಯಲಿ ತೇಲಿ
ಬಿಟ್ಟು, ಬೀಳ್ಕೊಂಡ ಭೈರವನಾಯಕನೆ ನಾನು.
ಬಿದಿಯ ಮೈಮೆಯೊಳಾನು ಈ ದ್ವೀಪಕ್ಕೈತಂದೆ ;
ಮೇಣ್ ಇದರ ದೊರೆತನವ ಕೈಕೊಂಡೆ. ಸಾಕಿನ್ನು—
ಮೊತ್ತಮೊದಲೇಕೆ ನಿಮಗೆನ್ನ ಚರಿತೆಯನರುಹಿ
ಸಂತಸವನಾರಿಪುದು ? ಎಲ್ಲರೂ ಇತ್ತ ಬನ್ನಿ:
ಈ ಗುಹೆಯೆ ನನ್ನ ರಾಜಾಲಯಂ! ಈಯೆಡೆಯೊಳ್
ಎನ್ನ ನಚ್ಚಿನ ಪ್ರಜೆಗಳಿನಿತೊಳರು. ನೀಮೆನಗೆ
ಎನ್ನ ನೆಲಮಂ ಮರಳಿ ದಾನಗೈದಿರ್ಪಿರಿ.
ಬದಲಾಗಿ ನಿಮಗೊಂದು ಅಚ್ಚರಿಯ ತೋರುವೆನು.

ನೀಮಿತ್ತ್ರ ನೆಲಕಿಂತಲುಂ ಬೆಲೆಯೊಳಧಿಕತರ
ವಸ್ತುಗಳ ತೋರ್ದಪೆನು : ಅತ್ತ ನೋಡಿ!

[ಗುಹೆಯ ದ್ವಾರವು ತೆರೆಯುವುದು. ಶಿವನಾಯಕನೂ ಗೌರಾಂಬೆಯೂ
ಪಗಡೆಯಾಡುತ್ತಿರುವರು.]

ಗೌರಾಂಬೆ— ಸಟೆಯನಾಡದಿರು, ಎನ್ನೆರೆಯ!

ಶಿವ— ಮನದನ್ನೆ,
ನೂರಾರು ನಾಡುಗಳಿಗಾದೊಡಂ ನಾನೊಂದು
ಪುಸಿಯನಾಡರು ಆಡೆ.

ಗೌರಾಂಬೆ— ನಾಡುಗಳಿಗಾಗಿ
ನೀನೆನಿತು ಸುಳ್ಳಾಡಿದರು ನಾನು ಮನ್ನಿಸುವೆ!
ನೆತ್ತದಲಿ ಕೈತವವ ತೋರ್ದೊಡೆ ಸೈರಿಸೆನು!

ರಣ— ಇದೇನು? ಮಾಯೆಯೊ? ನಿಜವೊ? ನಿಜವಾದಪಕ್ಷದಲಿ
ಕುವರನೊರ್ವನನ್ ಇರ್ಕೆ ಪೆತ್ತವೋಲಾದವುದು!

ರಂಗ— ಇಂದ್ರಜಾಲವ ಮೀರ್ದ ಗುರುತರ ಪವಾಡವಿದು!

ಶಿವ— ಹೊಳೆಯುಗುವರ್ದೊಡಂ ದಯೆಯಿಂದ ತುಂಬಿಹುದು!
ಬರಿದೆ ನಾನದನ್ ಬೈದು ಶಪಿಸಿದೆನ್! [ತಂದೆಗೆ ನಮಿಪನ್]

ರಣ— ಎನ್ನೊಲ್ಮೆ ಒದಗಿಸುವ ಹರಕೆಗಳ ಸುರಿಮಳೆಯು
ನಿನ್ನ ಮೇಲಿಳಿಯಲಿ! ಮೇಲೇಳು, ಮಗನೇ
ನೀನೆಂತು ಬದುಕಿ ಬಂದಯ್ ಹೇಳು! ಸಂತಸದಿ
ಎನ್ನೆರ್ದೆಯು ಒಡಿದ ಮುದ್ದಳೆಯಂತೆ ನಡುಗುತಿದೆ.

ಗೌರಾಂಬೆ— ಆಶ್ಚರ್ಯವಾಶ್ಚರ್ಯಂ! ಏನಿದೀ ಸೌಂದರ್ಯಂ!
ಎನಿತು ಸ್ವರ್ಗೀಯಮಾದುದು ಭೂಮಿಯರ ಚೆಲ್ವು!
ಸೌಂದರ್ಯಮೂರ್ತಿಗಳ ಪಡೆದಿರ್ಪ ಈ ಪೊಸತು
ಜಗಮೆನಿತು ಸುಖಕರಂ!

ಭೈರವ— ಮಗಳೆ, ನಿನಗೆಲ್ಲ ಪೊಸತು!

ರಣ— ನೀನೊಡನೆಯಾಡುತಿರ್ದಾ ಸುಂದರಿಯು ಯಾರು ?
ಒರ್ದಿನದ ತಪದಲ್ಲಿ, ಒರ್ಪಗಲ ಜೋಗದಲಿ
ನಿನಗೆ ಪ್ರತ್ಯಕ್ಷಳಾದಾ ದೇವತೆಯು ಯಾರು ?
ಎಮ್ಮನಗಲಿಸಿ, ಮರಳಿ ಸೇರಿಸಿದ ಆ ಪುಣ್ಯ
ಸ್ತ್ರೀಮೂರ್ತಿ ಯಾರು ?

ಶಿವ— ಅವಳು ದೇವತೆಯಲ್ಲ,
ತಂದೆಯೇ, ಮಾನವಳು. ಪರಶಿವನ ದಯೆಯಿಂದ
ಅವಳೀಗಳೆನ್ನವಳು. ನೀವೆಲ್ಲ ಪಡೆದೊರೆಯು
ಪಾಲಾದಿರೆಂದರಿತು ನೆಚ್ಚುಳಿದ ನಾನು
ನಿಮ್ಮಾಜ್ಞೆಯಂ ಪಡೆಯಲಾನಾರೆನೆಂದು ಒಗೆದು
ಈ ಚೆಲ್ವೆಯಂ ಕಂಡು ಒಪ್ಪಿದೆನು, ವರಿಸಿದೆನು.
ಗೌರಾಂಬೆ ಎಂಬ ಪೆಸರೀಕೆಯಿಂ ಮೆರೆಯುತಿದೆ.
ಕೆಳದಿಗಧಿಪತಿಯಾದ ಭೈರವನಾಯಕಂಗೆ
ತನುಜೆಯಾಗಿಹಳೀಕೆ. ಮುನ್ನಾತನಾ ಜನಂ
ಕಿವಿಗಿತ್ತು. ಇಂದು ಕಣ್ಗಮಾಗಿರ್ಪುದು !
ಗೌರಾಂಬೆಯಿಂದಾತನ್ ಎನಗೆ ಮಾವನು ಇಂದು !

ರಣ— ನನ್ನ ಸೊಸೆಯ ನಾನೆ ಸೆರಗೊಡ್ಡಿ ಬೇಡುವೆನು :
ಗೌರಾಂಬೆ, ನಿನಗೆ ನಾನಪರಾಧವೆಸಗಿದೆನು ;
ಮನ್ನಿಸೌ, ದೇವಿ.—ನೀನೆನ್ನ ಸೊಗದ ಸಿರಿ !

ಭೈರವ— ರಾಜೇಂದ್ರ, ಸಾಕು ; ನೀನಿಂತೆಸಗುವುದು ತರವೆ ?
ಹಳೆಯ ನೆನೆಹನು ಮರಳಿ ಕೆಣಕುತಿಹೆಯೇಕೆ ?
ತೊರೆದ ಭಾರವನೇಕೆ ಮತ್ತೆ ಹೊರಲೆಳಸುತಿಹೆ ?

ಜಯದೇವ— ಕಂಗಳಿಂ ಕಂಬನಿಯು ಸುರಿಯುತಿದೆ. ಬಾಯಿಂದ
ನುಡಿ ಹೊಮ್ಮಲರಿಯದಿದೆ.—ಎಲೆಲೆ ಸಗ್ಗಿಗರಿರಾ,
ಈ ನವತರುಣ ದಂಪತಿಗಳುತ್ತಮಾಂಗದಲಿ
ನಿಮ್ಮ ಸಿರಿ ಹರಕೆಗಳ ಸುರಿಮಳೆಯ ಸೂಸಿ !

ರಾಜರಾಣಿಯರಾಗಿ ಬಾಳಲಿವರುಗಳಿಂದು
ಹರಸುತ್ತ, ಮುಡಿಯಲ್ಲಿ ವಯಿರಗಳ ಕೆತ್ತನೆಯ
ಮಕುಟಗಳನಳವಡಿಸಿ! ನಿಮ್ಮ ಕೃಪೆಯಿಂದಾವು
ಆಗಲಿದೆವು. ಮೇಣ್ ನಿಮ್ಮ ಒಲ್ಮೆಯಿಂದಲೆ ಮರಳಿ
ನಾವಿಂತು ಸೇರಿಹೆವು.

ರಣ— ತಥಾಸ್ತು! ತಥಾಸ್ತು!!

ಜಯದೇವ— ಕೆಳದಿಯರಸನು ನೆಲವನುಳಿದುದು, ಸಂತತಿಗೆ
ನಗರವರಸಿಯತನವು ದೊರೆಯಲೋಸುಗವೆಂದೆ
ತೋರುತಿದೆ!—ಹರುಸದಿಂದೆಲ್ಲರುಂ ನಲಿಯುವಂ!
ಹೋದ ಮಗ ಬಂದಿಹನು; ಹೊಸ ಸೊಸೆಯ ತಂದಿಹನು!
ಬಿರುಗಾಳಿಯೊಳು ಸಿಲ್ಕಿ ಹೊಳೆಯಪಾಲಾದವರು
ನಾವೆಲ್ಲ ಬದುಕಿಹೆವು. ಭೈರವನಾಯಕಂಗೆ
ಮರಳಿ ಕೆಳದಿಯ ನೆಲಂ ಕೈಸೇರಿದತ್ತು.
ಎಲ್ಲಕುಂ ಮಿಗಿಲು ಮರುಳಾಗಿರ್ದ ನಾವೆಲ್ಲ
ಮರಳಿ ತಿಳಿವನು ಹೊಂದಿ ಮನುಜರಾಗಿಹೆವು.
ಆದರಿಂದ ಸಂತಸದೊಳೆಲ್ಲರುಂ ನಲಿಯಿರೈ!

ರಣ— ಎನ್ನ ಮುದ್ದಿನ ಮಕ್ಕಳಿರ ಬನ್ನಿ ಬಳಿಗೆ ಬನ್ನಿ—
(ಆಶೀರ್ವದಿಸುತ) ನಿಮಗಿಂದು ಮಂಗಳವುಂ ಕೋರದವ
ನೆಡೆಯಲ್ಲಿ
ಕೋಟಿ ನರಕಗಳುದಿಸಿ ಪೀಡಿಸಲಿ!

ಜಯದೇವ— ತಥಾಸ್ತು!

[ಕಿನ್ನರನು ಶನಿಶಕ್ತಿ, ಬೀಮಣ, ತ್ರಿಶಂಕು ಇವರನ್ನು ಅವರ ಕದ್ದೊಯ್ದ
ಬಟ್ಟೆಗಳೊಡನೆ ತರುಬಿಕೊಂಡು ಬರುವನು.]

ಬೀಮಣ— ಇನ್ನುಮೇಲೆ ಅವರವರ ಪಾಡು ಅವರವರಿಗೆ; ನನ್ನಮೇಲೆ
ಭಾರವಿಲ್ಲ. ಅವರವರ ಹಣೆಯಲ್ಲಿ ಬರೆದಂತಾಗಲಿ! ಗೊತ್ತಾ
ಯಿತೇ ರಾಕ್ಷಸಾ? ಹುಂ!—(ಶನಿಶಕ್ತಿ ಹೆದರೆ) ಹೆದರಬೇಡ!
ಹೆದರಬೇಡ! ಧೈರ್ಯವಾಗಿರು!

ತ್ರಿಶಂಕು— ಇದೇನು? ನನ್ನ ಕಣ್ಗಳು ತಲೆಯಲ್ಲಿವೆಯೊ? ತಲೆಯೇ ಕಣ್ಗಳಲ್ಲಿದೆಯೊ? ನನ್ನೆದುರು ಕಂಗೊಳಿಸುತಿರುವ ಇವರಾರು?

ಶನಿಶಕ್ತಿ— ಶನಿಯಾಣೆ! ಇವರೆಲ್ಲ ದೇವತೆಗಳೆ ಹೌದು!
ನನ್ನೊಡೆಯನೆಂತು ಚೆಲ್ವಾಗಿ ತೋರುತಿಹನಿಂದು!
ನನ್ನ ಗತಿ ಏನಾಗುವುದೊ ಅರಿಯೆ.

ರಂಗ— ರುದ್ರನಾಯಕರೆ,
ಇವುಗಳಾವ ವಿಚಿತ್ರ ಜಂತುಗಳು?

ರುದ್ರ— ಒಂದೇನೊ
ನರಪಿಶಾಚವೆ ನಿಜ!

ಭೈರವ— ಚೆನ್ನಾಗಿ ನೋಡಿದರೆ
ನಿಮಗೆ ಗುರುತಾಗುವುದು.—ಈ ಕುರೂಪಿಯು, ದೊರೆಯೆ,
'ಶನಿ' ಎಂಬ ಕಡುಕೆಟ್ಟ ಮಂತ್ರಗಾರ್ತಿಯು ಕರುವು.
ಅವರೀರ್ವರೊಡನಿವನು ನನ್ನನಿರಿಯಲು ಸಂಚು
ಮಾಡಿಹನು. ಅವರಿಬ್ಬರೂ ನಿಮ್ಮ ಕಿಂಕರರೆ,
ಈ ಕರಿಕನೆನ್ನವನು!

ಶನಿಶಕ್ತಿ— ಅಂತೂ ಇಂದೆನಗೆ ಸಾವೆ ಗತಿ!

ರಣ— ಇವನೆಮ್ಮ ಬಾಣಸಿಗ ಬೀಮಣನಲ್ಲವೆ?

ರಂಗ— ಕುಡಿದು ಕೆಂಪೇರಿಹನು; ಹೆಂಡವೆಲ್ಲಿತ್ತಿವರಿಗೆ?

ರಣ— ಇವನೆಮ್ಮ ತ್ರಿಶಂಕು; ಹಣ್ಣುಹಣ್ಣಾಗಿಹನು.
ಮತ್ತೇರಿ ತತ್ತರಿಸುತಿಹನು. ಕಳ್ಳೆಲ್ಲಿ
ದೊರಕಿತಿವರಿಗೆ ಈ ದ್ವೀಪದಲಿ? ತ್ರಿಶಂಕೂ,
ಕಳ್ಳೆಲ್ಲಿ ದೊರಕಿತೋ? ಕಣ್ಣೆಲ್ಲ ಕೆಂಪೇರಿ
ಕುಡಿಕುಡಿದು ಹಣ್ಣಾಗಿ ತತ್ತರಿಸುತಿಹೆಯಲಾ?

ತ್ರಿಶಂಕು— ಈ ನೆಲಕೆ ಕಾಲಿಟ್ಟಾಗಳಿಂದ ನನ್ನ ಬುರುಡೆಯಲ್ಲಿ
ಟಗರುಗಾಳೆಗವಾಗುತಿದೆ. ಬೆಟ್ಟಗಳು ಸುತ್ತುತ್ತಿವೆ.
ಮರಗಿಡಗಳೆಲ್ಲ ಕೋಲಾಟವಾಡುತಿವೆ.

ರಂಗ— (ಬೀಮುಣನನ್ನು ಅಲ್ಲಾಡಿಸಿ) ಇದೇನಿದು ಬೀಮುಣಾ?

ಬೀಮುಣ— ಅಯ್ಯೋ ನನ್ನನ್ನು ಮುಟ್ಟದಿರಿ—ನಾನು ಬೀಮುಣನಲ್ಲ. ನಾನು ಬೇನೆಯ ಮುದ್ದೆ.

ಭೈರವ— ನೀನು ಈ ದ್ವೀಪದ ಚಕ್ರವರ್ತಿಯಲ್ಲವೇನೊ?

ಬೀಮುಣ— ಹೌದೆಂದೇ ತೋರುತಿದೆ—ನನ್ನ ತಲೆಯಲ್ಲಿ ಈ ದ್ವೀಪವು ಚಕ್ರದಂತೆ ವರ್ತಿಸುತ್ತಿದೆ.

ರಣ— ಇಂತಹ ವಿಲಕ್ಷಣ ಪ್ರಾಣಿಯನು ನಾನೆಂದೂ ನೋಡಿಲ್ಲ.

ಭೈರವ— ಅಹುದಹುದು; ದೇಹವಿರುವಂತುಟೇ
ಬಗೆಯಿರ್ಪುದೀತಂಗೆ.—ಹೊಗು, ನಡೆ, ಗುಹೆಯೊಳಗೆ
ನಿನ್ನ ಗೆಳೆಯರ ಕೂಡಿ.—ಹೆದರದಿರು, ನಾನಿಂದು
ನಿಮ್ಮನಿಬರಂ ಮನ್ನಿಸಿಹೆ—ಗುಹೆಯನೋರಣಿಸು,
ಬೇಗ ನಡೆ!

ಶನಿಶಕ್ತಿ— ಅಪ್ಪಣೆ! ನಿನ್ನಾಣತಿಯನೆಸಗಿ
ಕೃಪೆಯನಾರ್ಜಿಸಿ ಮುಂದೆ ಮತಿವಂತನಾಗುವೆನು.
ಕತ್ತೆಗಳಿಗೆಲ್ಲ ನಾನೇ ಹಿರಿಯ ಹೆಗ್ಗತ್ತೆ:
ಕುಡುಕನಾಗಿರ್ಪ ಈ ಮೂಳನನು ಸಗ್ಗದ
ಹಿರಿಯ ದೇವತೆಯೆಂದು ಪೂಜಿಸಿದೆನಲ್ಲಾ!

ಭೈರವ— ಹೋಗು ಬೇಗ. ಜವದಿಂದ ಪಸದನಂಗೊಳಿಸು.

ರಣ— ನೀವೂ ನಡೆಯಿರಿ. ಈ ವಸನಗಳನು ಅವುಗಳಿದ್ದೆಡೆಯೊಳೇ ಇರಿಸಿ.

ರಂಗ— ಹುಂ, ಬೇಗ! ಹೋಗಿ; ಕದ್ದೆಡೆಯೊಳೇ ಇರಿಸಿ!

[ಶನಿಶಕ್ತಿ, ತ್ರಿಶಂಕು, ಬೀಮುಣ ಹೋಗುವರು.]

ಭೈರವ— ಮಿತ್ರರಿರ, ನೀಮೆಲ್ಲರುಂ ಎನ್ನ ಬಡ ಗುಹೆಗೆ
ಬಿಜಯಂಮಾಡಿ, ಎನ್ನ ಬಡ ಬಿರ್ದನ್ ಅಂಗೀಕರಿಸಿ!

ಇಂದಿನಿರುಳ್ ಎಮಗೆಲ್ಲ ಒಸಗೆಯಿರುಳಾಗಿಹುದು.
ಎನ್ನ ಅಜ್ಞಾತವಾಸದ ಕತೆಯ ನಿಮಗರುಹಿ
ಇಂದಿನಿರುಳನು ಬಿನದದೊಳೆ ಕಳೆದು, ನಾಳೆ
ಮುನ್ನೇಸರ್ ಅಂಬರದಿ ಮೂಡಿಬಹ ಮುನ್ನಮೇ
ನಿಮ್ಮ ನೌಕೆಯನೇರಿ ರಾಜಧಾನಿಗೆ ತೆರಳಿ
ನೂತನ ವಧೂವರರ ಮದುವೆ ದಿಬ್ಬಣಗಳನು
ಬಿಯದಿಂದ ಮೆರೆಯುವಂ.—ತರುವಾಯ ಕೆಳದಿಯಲಿ
ಇನ್ನುಳಿದ ಎನ್ನ ಬಾಳ್ಕೆಯನೆಲ್ಲಮಂ ಶಿವನ
ಜಾನದೊಳೆ ನೀಗುವೆನು.

ರಣ— ಎನ್ನೆದೆಯು ತುಡಿಯುತಿದೆ
ನಿನ್ನ ಕತೆಯನು ಕೇಳೆ.

ಭೈರವ— ನಿಮ್ಮ ಮೇಲುಕ್ಕಿವದ
ಬರಿಸಪನೆ ಕರೆಯುವೆನು. ಪಯಣ ಸೊಗವಾಗುವೊಲು
ಅನುಕೂಲ ಮಾರುತನ ಬೆಂಬಲವನಿತ್ತಪೆನ್. [ಕಿನ್ನರಗೆ]
ಎನ್ನ ನಚ್ಚಿನ ಡಿಂಗರಿಗ, ಮುದ್ದು ಕಿನ್ನರಾ,
ನೀನೆಮಗೆ ಪಯಣದಲಿ ನೆರವಾಗು. ನೀನಿನ್ನು
ಎನ್ನ ಗೆಳೆಯನು, ಡಿಂಗರಿಗನಲ್ಲ. ಬಾ ಇಲ್ಲಿ—[ಮೈದಡವಿ]
ನೀನಿನ್ನು ಸಂತಸದಿ ನಲಿದಾಡು! ನಿನ್ನ ಮನ
ಬಂದವೊಲು ವಿಸ್ವಾಸ್ಟ್ರಿಯೊಳು ಹಾಡಿ ಅಲೆದಾಡು!
ನಿನಗೆ ಮಂಗಳಮಕ್ಕೆ! ಸೊಗಮಕ್ಕೆ! ಶುಭಮಕ್ಕೆ!

[ಕಿನ್ನರನ ಹೊರತು ಎಲ್ಲರೂ ತೆರಳುವರು.]

ಕಿನ್ನರ— (ಹಾಡು)

ದುಂಬಿಯು ಬಂಡನು ಹೀರುವ ಎಡೆಯೊಳು
ನಾಮಧುಪಾನವ ಮಾಡುವೆನು.
ತೇಲುವ ತಾವರೆ ಹೂವಿನ ಹೊಸೆಯೊಳು
ಪವಡಿಸೆ ಸೆಜ್ಜೆಯ ಹೂಡುವೆನು.
ನೇಸರು ಮುಳುಗಲು ಮಲಗುವೆನಲ್ಲಿ;

ಗೂಬೆಯು ಕೂಗಲು ಹುದುಗುವೆನಲ್ಲಿ!
ಕತ್ತಲೆ ಮುತ್ತಲು ಪವಡಿಪೆನಲ್ಲಿ;
ಕೌಮುದಿ ರಂಜಿಸೆ ನಲಿಯುವೆನಲ್ಲ!
ಮಳೆಬಿಲ್ಲರಿಗಳ ರೆಕ್ಕೆಯ ಪಡೆದಿಹ
ಮೇಘ ವಿಮಾನವನೇರಿ,
ಗಾಳಿಯ ಬಟ್ಟೆಯೊಳಲೆಯುವೆ, ನಲಿಯುವೆ,
ಮುಕ್ತಿಯ ಸೊಡೆಯನು ಹೀರಿ!

[ಹಾಡುತ್ತಾ ಹೋಗುವನು]